ಗುರುವಾರ, ಮೇ 16, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಾಡು ಬಿಡುಗಡೆ
'ಮಿಸ್ಟರ್ ಆ್ಯಂಡ್ ಮಿಸಸ್ ಮಾಹಿ' ಸಿನಿಮಾದ ಹಾಡು ಬಿಡುಗಡೆ ಕಾರ್ಯಕ್ರಮದಲ್ಲಿ ನಟ ರಾಜ್‌ಕುಮಾರ್ ರಾವ್ ಮತ್ತು ನಟ ಜಾಹ್ನವಿ ಕಪೂರ್ ಕಂಡಿದ್ದು ಹೀಗೆ...



ಪ್ರಜಾ ಮತ 2024
ಜನತಂತ್ರದ ಹಬ್ಬ

II ಗುರುವಾರ • ಮೇ 16, 2024 ಪ್ರಜಾವಾಣಿ



ಚುಟುಕು

ಆಂಧ್ರ: ಮುಖ್ಯ ಕಾರ್ಯದರ್ಶಿಗೆ ಸಮನ್ಸ್



ನವದೆಹಲಿ (ಪಿಟಿಐ): ಆಂಧ್ರಪ್ರದೇಶದಲ್ಲಿ ನಡೆದಿರುವ ಮತದಾನೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ರಾಜ್ಯದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಸಮನ್ಸ್ ಜಾರಿ ಮಾಡಿದೆ. ಇಬ್ಬರೂ ಗುರುವಾರ ಹಾಜರಾಗಿ ಹಿಂಸಾಚಾರ ತಡೆಯುವಲ್ಲಿನ ಆಡಳಿತದ ವೈಫಲ್ಯದ ಬಗ್ಗೆ ಖುದ್ದಾಗಿ ವಿವರಿಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಾದರಿ ನೀತಿ ಸಂಹಿತೆಯು ಇನ್ನೂ ಜಾರಿಯಲ್ಲಿದ್ದು, ಅಂಥ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಬೇಕೆಂದು ಆಯೋಗವು ರಾಜ್ಯ ಸರ್ಕಾರಕ್ಕೆ ನೆನಪಿಸಿದೆ. ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಅವಕಾಶ ಇಲ್ಲ ಎಂದಿರುವ ಆಯೋಗವು, ಲೋಕಸಭಾ ಚುನಾವಣೆ ಘೋಷಣೆ ಆದಾಗಿನಿಂದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು, ಶಾಂತಿಯುತವಾಗಿ ಚುನಾವಣೆ ನಡೆಸುವ ಸಂಬಂಧ ಖುದ್ದಾಗಿ ಉಸ್ತುವಾರಿ ವಹಿಸುತ್ತಿದ್ದಾರೆ ಎಂದು ಹೇಳಿದೆ.

ಆಂಧ್ರಪ್ರದೇಶ: ದಾಖಲೆ ಮತದಾನ

ಅಮರಾವತಿ (ಆಂಧ್ರಪ್ರದೇಶ) (ಪಿಟಿಐ): ಆಂಧ್ರಪ್ರದೇಶದಲ್ಲಿ ಸೋಮವಾರ ನಡೆದ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಒಟ್ಟು ಶೇ 81.86 ಮತದಾನ ಆಗಿದೆ.



ಇವಿಎಂ ಮೂಲಕ ಶೇ 80.66 ಹಾಗೂ ಅಂಚೆ ಮೂಲಕ ಶೇ 1.2 ಮತದಾನ ನಡೆದಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಬುಧವಾರ ಮಾಹಿತಿ ನೀಡಿದ್ದಾರೆ.

ಆಂಧ್ರಪ್ರದೇಶದಲ್ಲಿ ಲೋಕಸಭೆಯ 25 ಮತ್ತು ವಿಧಾನಸಭೆಯ 175 ಸ್ಥಾನಗಳಿಗೆ ಮತದಾನ ನಡೆದಿತ್ತು. ಒಟ್ಟು 4.13 ಕೋಟಿ ಮತದಾರರಲ್ಲಿ 3.33 ಕೋಟಿ ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಆಂಧ್ರಪ್ರದೇಶದಲ್ಲಿ ಮತದಾನ ಪ್ರಮಾಣ ಶೇ 80 ದಾಟಿದ್ದು ಇದೇ ಮೊದಲು. 2014 ರಲ್ಲಿ ಶೇ 78.41 ಹಾಗೂ 2019 ರಲ್ಲಿ ಶೇ 79.77 ಮತದಾನ ನಡೆದಿತ್ತು.

ಮಗನ ವಿರುದ್ಧ ತಾಯಿ ಸ್ಪರ್ಧೆ

ಪಟ್ನಾ (ಪಿಟಿಐ): ಭೋಜ್‌ಪುರಿ ನಟ ಪವನ್ ಸಿಂಗ್ ಅವರ ತಾಯಿ ಪ್ರತಿಮಾ ದೇವಿ ಅವರು ಬಿಹಾರದ ಕಾರಾಕಾಟ್ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ವಿಶೇಷ ಎಂದರೆ, ಪವನ್ ಸಿಂಗ್ ಇದೇ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಬಿಜೆಪಿ ಸದಸ್ಯರಾದ ಪವನ್ ಸಿಂಗ್ ಅವರಿಗೆ ಪಕ್ಷವು ಮೊದಲ ಪಟ್ಟಿಯಲ್ಲೇ ಪಶ್ಚಿಮ ಬಂಗಾಳದ ಅಸನ್‌ಸೋಲ್ ಕ್ಷೇತ್ರದಿಂದ ಟಿಕೆಟ್ ಘೋಷಿಸಿತ್ತು. ಆದರೆ, ಪವನ್ ಸಿಂಗ್ ಸ್ಪರ್ಧಿಸಲು ನಿರಾಕರಿಸಿದ್ದರು. ಆದರೆ, ನಂತರ ಪವನ್ ಸಿಂಗ್ ಕಾರಾಕಾಟ್‌ನಿಂದ ಪಕ್ಷೇತರ ಅಭ್ಯರ್ಥಿಯಾಗಿ ಮೇ 9ರಂದು ನಾಮಪತ್ರ ಸಲ್ಲಿಸಿದ್ದರು.

ಕಾರಾಕಾಟ್ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ರಾಷ್ಟ್ರೀಯ ಲೋಕ ಮೋರ್ಚಾ ಅಧ್ಯಕ್ಷ ಉಪೇಂದ್ರ ಕುಶ್ವಾಹ ನಾಮಪತ್ರ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಎನ್‌ಡಿಎ ಅಭ್ಯರ್ಥಿ ವಿರುದ್ಧ ಸ್ಪರ್ಧಿಸದಂತೆ ಪವನ್ ಸಿಂಗ್ ಅವರಿಗೆ ಬಿಜೆಪಿ ಹಿರಿಯ ಮುಖಂಡರು ಸೂಚಿಸಿದ್ದರು. ಇದೀಗ ಅವರ ತಾಯಿ ಪ್ರತಿಮಾ ಕೂಡ ಅದೇ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದಾರೆ.

ಜಿಗಿ–ನೆಗೆದಾಟ

‘ಕೈ’ ಮುಖಂಡ ಚಾವ್ಲಾ ಬಿಜೆಪಿಗೆ

ಚಂಡೀಗಢ (ಪಿಟಿಐ): ಕಾಂಗ್ರೆಸ್‌ನ ಹಿರಿಯ ಮುಖಂಡ, ಚಂಡೀಗಢದ ಮಾಜಿ ಮೇಯರ್ ಸುಭಾಷ್ ಚಾವ್ಲಾ ಅವರು ಬುಧವಾರ ಬಿಜೆಪಿ ಸೇರಿದರು. ಚಂಡೀಗಢದಲ್ಲಿ ಕಾಂಗ್ರೆಸ್ ಪಕ್ಷವು ಎಎಪಿ ಜತೆ ಮೈತ್ರಿ ಮಾಡಿಕೊಂಡಿರುವುದನ್ನು ವಿರೋಧಿಸಿ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಅವರು ಹೇಳಿದ್ದಾರೆ.



‘21ನೇ ವಯಸ್ಸಿನಲ್ಲಿ ನಾನು ಸೇರಿಕೊಂಡಿದ್ದ ಪಕ್ಷವನ್ನು ತೊರೆಯುವುದು ಅತ್ಯಂತ ಕಠಿಣ ನಿರ್ಧಾರವಾಗಿದೆ. ಆದರೆ ಪಾಲಿಕೆ ಚುನಾವಣೆಯಲ್ಲಿ ಎಎಪಿಯು ಕಾಂಗ್ರೆಸ್‌ಗೆ ಮಾಡಿದ್ದ ಹಾನಿಯನ್ನು ನನಗೆ ಮರೆಯಲು ಸಾಧ್ಯವಿಲ್ಲ’ ಎಂದು ಕಾಂಗ್ರೆಸ್ ಚಂಡೀಗಢ ಘಟಕದ ಅಧ್ಯಕ್ಷರೂ ಆಗಿದ್ದ ಅವರು ತಿಳಿಸಿದರು.


ಜೆಡಿಯು ಮಾಜಿ ಶಾಸಕಿ ಕಾಂಗ್ರೆಸ್‌ಗೆ (ಪಟ್ನಾ ವರದಿ): ಬಿಹಾರದಲ್ಲಿ ಜೆಡಿಯು ಪಕ್ಷದ ಮಾಜಿ ಶಾಸಕಿ ಪೂನಂ ದೇವಿ ಯಾದವ್ ಅವರು ಬುಧವಾರ ಕಾಂಗ್ರೆಸ್ ಸೇರ್ಪಡೆಯಾದರು. ಪೂನಂ ಅವರು ಖಗಾರಿಯಾ ವಿಧಾನಸಭಾ ಕ್ಷೇತ್ರದಿಂದ ಸತತ ಮೂರು ಸಲ ಆಯ್ಕೆಯಾಗಿದ್ದರು.

ಎಂಥಾ ಮಾತು!

ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಲು ನಾನು ನಡೆಸುತ್ತಿರುವ ಹೋರಾಟಕ್ಕೆ ನಿತೀಶ್ ಕುಮಾರ್ (ಜೆಡಿಯು ಅಧ್ಯಕ್ಷ) ಅವರ ಪೂರ್ಣ ಬೆಂಬಲ ಇದೆ. ‘ಚಾಚಾ’ (ನಿತೀಶ್) ಅವರನ್ನು ಬಿಜೆಪಿ ಹೈಜಾಕ್ ಮಾಡಿರಬಹುದು. ಆದರೆ 2014ರಿಂದ ದೇಶದ ಆಡಳಿತ (ಬಿಜೆಪಿ) ನಡೆಸುತ್ತಿರುವವರನ್ನು ಅಧಿಕಾರದಿಂದ ದೂರವಿಡುವುದರ ಮಹತ್ವವನ್ನು ಅವರು ನನಗೆ ಕಲಿಸಿಕೊಟ್ಟಿದ್ದರು. ಆ ಹೋರಾಟವನ್ನು ಮುನ್ನಡೆಸುತ್ತಿರುವ ಕಾರಣ ಅವರ ಆಶೀರ್ವಾದ ನನ್ನೊಂದಿಗೆ ಇದೆ. ಪ್ರಧಾನಿ ಅವರು ನಾಮಪತ್ರ ಸಲ್ಲಿಸುವ ದಿನದಂದೇ ನಿತೀಶ್ ಅನಾರೋಗ್ಯಕ್ಕೆ ಒಳಗಾಗಿದ್ದನ್ನು ನೀವು ಗಮನಿಸಿರಬಹುದು. ನಾನು ಅವರಿಂದ ಪೂರ್ಣ ಬೆಂಬಲ ಪಡೆಯುತ್ತಿದ್ದೇನೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ

ತೇಜಸ್ವಿ ಯಾದವ್, ಆರ್‌ಜೆಡಿ ಮುಖಂಡ





ತೇಜಸ್ವಿ ಯಾದವ್ ಅವರು ಆಧಾರರಹಿತ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಹೀನಾಯ ಸೋಲು ಎದುರಾಗಲಿದೆ ಎಂಬುದು ನಾಲ್ಕು ಹಂತಗಳ ಮತದಾನದ ಬಳಿಕ ಇಂಡಿಯಾ ಮೈತ್ರಿಕೂಟದ ನಾಯಕರಿಗೆ ಸ್ಪಷ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎಯು 400ಕ್ಕೂ ಅಧಿಕ ಸ್ಥಾನಗಳನ್ನು ಗೆಲ್ಲಲಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಸಮರ್ಥ ನಾಯಕತ್ವದಲ್ಲಿ ಬಿಹಾರದಲ್ಲಿ ಎಲ್ಲ 40 ಸ್ಥಾನಗಳನ್ನೂ ಎನ್‌ಡಿಎ ತನ್ನದಾಗಿಸಿಕೊಳ್ಳಲಿದೆ. ತೇಜಸ್ವಿ ಆತಂಕಕ್ಕೆ ಒಳಗಾಗಿದ್ದಾರೆ

ಗಿರಿರಾಜ್ ಸಿಂಗ್, ಕೇಂದ್ರ ಸಚಿವ

ಕ್ಷೇತ್ರ ಮಹಾತ್ಮೆ

ಮುಂಬೈ ಉತ್ತರ, ಮಹಾರಾಷ್ಟ್ರ



ಮುಂಬೈನ ಆರು ಲೋಕಸಭಾ ಕ್ಷೇತ್ರಗಳಲ್ಲಿ ಈ ಬಾರಿ ಎರಡರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಅವುಗಳಲ್ಲೊಂದು ಮುಂಬೈ ಉತ್ತರ ಲೋಕಸಭಾ ಕ್ಷೇತ್ರ. ಇಲ್ಲಿ ಬಿಜೆಪಿಯು ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರನ್ನು ಕಣಕ್ಕಿಳಿಸಿದ್ದು, ಕಾಂಗ್ರೆಸ್‌ನಿಂದ ಭೂಷಣ್ ಪಾಟೀಲ್ ಸ್ಪರ್ಧಿಸುತ್ತಿದ್ದಾರೆ. ಈ ಕ್ಷೇತ್ರವನ್ನು ಬಿಜೆಪಿಯ ಗೋಪಾಲ್ ಶೆಟ್ಟಿ ಅವರು 2014 ರಿಂದಲೂ ಪ್ರತಿನಿಧಿಸುತ್ತಿದ್ದಾರೆ. ಕಳೆದ ಬಾರಿ ಅವರು ಕಾಂಗ್ರೆಸ್ ಅಭ್ಯರ್ಥಿ ಊರ್ಮಿಳಾ ಮಾತೊಂಡ್ಕರ್ ಅವರನ್ನು ಮಣಿಸಿದ್ದರು. ಬಿಜೆಪಿಯ ಭದ್ರಕೋಟೆ ಎನಿಸಿರುವ ಈ ಕ್ಷೇತ್ರದಲ್ಲಿ ರಾಮ ನಾಯ್ಕ್ ಅವರು (1989ರ ಬಳಿಕ) ಸತತ ಐದು ಸಲ ಆಯ್ಕೆಯಾಗಿದ್ದರು. ಅನಂತರ ಎರಡು ಸಲ ಕಾಂಗ್ರೆಸ್ ಗೆದ್ದಿತ್ತು. ನಟ ಗೋವಿಂದ (2004) ಹಾಗೂ ಸಂಜಯ್ ನಿರುಪಮ್ (2009) ಅವರು ‘ಕೈ’ ಟಿಕೆಟ್‌ನಲ್ಲಿ ಜಯಿಸಿದ್ದರು. ಇಲ್ಲಿ ‘ಹ್ಯಾಟ್ರಿಕ್’ ಗೆಲುವಿನ ನಿರೀಕ್ಷೆಯಲ್ಲಿ ಬಿಜೆಪಿ, ಪ್ರಬಲ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದೆ. ಕಾಂಗ್ರೆಸ್‌ನ ಭೂಷಣ್ ಪಾಟೀಲ್ ಅವರು ಸ್ಥಳೀಯರೇ ಆಗಿದ್ದು, ಈ ಹಿಂದೆ ಪಕ್ಷದ ಮುಂಬೈ ಘಟಕದ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದರು. ಬೊರಿವಲಿ, ದಹಿಸರ್, ಕಾಂಡಿವಲಿ ಈಸ್ಟ್ ಮತ್ತು ಮಲಾಡ್ ವೆಸ್ಟ್ ಸೇರಿದಂತೆ ಏಳು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಇಲ್ಲಿಯ ಮತದಾರರು ಈ ಬಾರಿ ಯಾರ ಕೈಹಿಡಿಯುವರು ಎಂಬುದನ್ನು ನೋಡಬೇಕು.

ಪಂಜಾಬ್, ಹರಿಯಾಣ: ‘ಆಂದೋಲನ ಜೀವಿ’ಗಳ ಬಹಿಷ್ಕಾರದಿಂದ ಕಮಲ ಪಾಳಯಕ್ಕೆ ಇಕ್ಕಟ್ಟು

ರೈತರ ರೋಷ: ಬಿಜೆಪಿಗೆ ತಟ್ಟಿದ ಬಿಸಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೃಷಿ ಕಾಯ್ದೆ ವಿರೋಧಿಸಿ ಚಳವಳಿಯಲ್ಲಿ ತೊಡಗಿದ್ದ ಮಣ್ಣಿನ ಮಕ್ಕಳನ್ನು ‘ದೇಶದ್ರೋಹಿಗಳು’, ‘ಆಂದೋಲನ ಜೀವಿಗಳು’ ಎಂದು ನಿಂದಿಸಿದವರು ಬಿಜೆಪಿಯ ಕೆಲವು ನಾಯಕರು. ರೈತರ ಮೇಲೆ ಹಿಂಸಾಚಾರಕ್ಕೆ ಇಳಿಯುವಂತೆ ಪಕ್ಷದ ಕಾರ್ಯಕರ್ತರಿಗೆ ಖುದ್ದು ಪ್ರಚೋದಿಸಿದವರು ಮನೋಹರ್ ಲಾಲ್ ಖಟ್ಟರ್. ಇದೀಗ ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಈ ‘ಆಂದೋಲನ ಜೀವಿ’ಗಳನ್ನು ಸಂಭಾಳಿಸುವುದೇ ಬಿಜೆಪಿ ಅಭ್ಯರ್ಥಿಗಳಿಗೆ ದೊಡ್ಡ ಸವಾಲಾಗಿದೆ. ಕಮಲ ಪಾಳಯದ ಅಭ್ಯರ್ಥಿಗಳ ಪ್ರಚಾರಕ್ಕೆ ಒಕ್ಕಲು ಮಕ್ಕಳು ಅಡಿಗಡಿಗೂ ಅಡ್ಡಿಪಡಿಸುತ್ತಿದ್ದಾರೆ.

ಕೃಷಿ ಕಾಯ್ದೆ ವಿರೋಧಿಸಿ ದೆಹಲಿ ಗಡಿಗೆ ಲಗ್ಗೆ ಹಾಕಿದವರು ರೈತರ ಮಕ್ಕಳು. ಈ ಹೋರಾಟದ ಮುಂಚೂಣಿಯಲ್ಲಿದ್ದವರು ಪಂಜಾಬ್ ಹಾಗೂ ಹರಿಯಾಣದ ರೈತರು. ಈ ಎರಡು ರಾಜ್ಯಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಪ್ರಚಾರಕ್ಕೆ ರೈತರು ಪ್ರತಿರೋಧ ಒಡ್ಡುತ್ತಿದ್ದಾರೆ. ಕೃಷಿಕರ ಬಹಿಷ್ಕಾರದ ಕರೆಯಿಂದಾಗಿ ಹಾಗೂ ಕಪ್ಪು ಬಾವುಟ ಪ್ರದರ್ಶನದಿಂದಾಗಿ ಕಮಲ ಪಾಳಯದ ಅಭ್ಯರ್ಥಿಗಳಿಗೆ ಅನೇಕ ಹಳ್ಳಿಗಳಿಗೆ ಕಾಲಿಡಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ. ರೈತರ ಕಿಚ್ಚಿನಿಂದಾಗಿ ಹುರಿಯಾಳುಗಳು ಅನೇಕ ಕಡೆಗಳಲ್ಲಿ ಪ್ರಚಾರ ರ್‍ಯಾಲಿಗಳನ್ನೇ ರದ್ದುಪಡಿಸಿದ್ದಾರೆ. ಪ್ರತಿಭಟನೆನಿರತರನ್ನು ‘ಸರ್ಕಾರಿ ರೈತರು’, ‘ಗೂಂಡಾಗಳು’ ಹಾಗೂ ‘ದಲಿತ ವಿರೋಧಿಗಳು’ ಎಂದು ಬಿಜೆಪಿ ಅಭ್ಯರ್ಥಿಗಳಾದ ಮನೋಹರ್ ಲಾಲ್ ಖಟ್ಟರ್, ಸುಶೀಲ್ ಕುಮಾರ್ ರಿಂಕು ಮತ್ತಿತರರು ಜರಿದಿದ್ದಾರೆ. ಇನ್ನೊಂದೆಡೆ, ಹರಿಯಾಣದಲ್ಲಿ ಬಿಜೆಪಿಯ ಮಾಜಿ ಮಿತ್ರ ಪಕ್ಷ ಜೆಜೆಪಿಯೂ ರೈತರಿಂದ ಪ್ರತಿರೋಧ ಎದುರಿಸುತ್ತಿದೆ. ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಒತ್ತಾಯಿಸಿ ರೈತರು ಈ ವರ್ಷದ ಫೆಬ್ರುವರಿಯಲ್ಲಿ ‘ದೆಹಲಿ ಚಲೋ’ ನಡೆಸಿದ್ದಾಗ ಹರಿಯಾಣ ಸರ್ಕಾರ ಬಹಳ ತೊಂದರೆ ಕೊಟ್ಟಿತ್ತು ಎಂಬುದು ರೈತರ ಆರೋಪ.



ರೈತರು ಫೆಬ್ರುವರಿಯಲ್ಲಿ ನಡೆಸಿದ್ದ ‘ದೆಹಲಿ ಚಲೋ’ ಪ್ರತಿಭಟನೆಯ ನೋಟ

ಯಾರಿಗೆಲ್ಲ ಪ್ರತಿರೋಧ

- ಹನ್ಸ್ ರಾಜ್ ಹನ್ಸ್ (ಫರಿದ್‌ಕೋಟ್)
- ಪ್ರಣೀತ್ ಕೌರ್ (ಪಟಿಯಾಲ)
- ರವನೀತ್ ಸಿಂಗ್ ಬಿಟ್ಟೂ (ಲುಧಿಯಾನ)
- ತೇಜಿಂದರ್ ಸಿಂಗ್ ಸಂಧು (ಅಮೃತಸರ)
- ಸುಶೀಲ್ ಕುಮಾರ್ ರಿಂಕು (ಜಲಂಧರ್)
- ಗುರ್ಮಿತ್ ಸಿಂಗ್ ಸೋಧಿ (ಫಿರೋಜ್‌ಪುರ)
- ದಿನೇಶ್ ಕುಮಾರ್ ಬಬ್ಲೂ (ಗುರುದಾಸಪುರ)
- ಮನೋಹರ್ ಲಾಲ್ ಖಟ್ಟರ್ (ಕರ್ನಾಲ್)
- ಅಶೋಕ್ ತನ್ವರ್ (ಸಿರ್ಸಾ)
- ಮೋಹನ್ ಲಾಲ್ ಬದೋಲಿ (ಸೋನಿಪತ್)
- ರಂಜಿತ್ ಚೌತಾಲಾ (ಹಿಸಾರ್)
- ಅರವಿಂದ ಶರ್ಮಾ (ರೋಹ್ಟಕ್)

ವಲಸಿಗರಿಗೂ ತಾಪ: ಲುಧಿಯಾನದ ಹಾಲಿ ಸಂಸದ ರವನೀತ್ ಸಿಂಗ್ ಬಿಟ್ಟೂ ಅವರು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದವರು. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅವರು ಕೇಸರಿ ಪಡೆಗೆ ಜಿಗಿದಿದ್ದರು. ಈ ಸಲ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಅವರಿಗೂ ಪ್ರತಿಭಟನೆಯ ಬಿಸಿ ತಟ್ಟಿದೆ. ‘ರೈತರ ಮಹಾ ಪಂಚಾಯಿತಿಗಳಲ್ಲಿ ನಾನು ಭಾಗಿಯಾಗಿದ್ದೆ. ರೈತರ ಆಂದೋಲನದಲ್ಲಿ ಸಕ್ರಿಯನಾಗಿದ್ದೆ. ನಾನು ರೈತರ ಪರ’ ಎಂದು ರವನೀತ್ ಅವರು ರೈತರ ಮನವೊಲಿಸಲು ಪ್ರಯತ್ನಿಸಿದ್ದಾರೆ. ಈ ಮಾತಿಗೆ ರೈತರು ಕವಡೆ ಕಾಸಿನ ಕಿಮ್ಮತ್ತು ನೀಡಿಲ್ಲ.

ಆಯೋಗಕ್ಕೆ ಬಿಜೆಪಿ ಮೊರೆ

ರೈತರ ಪ್ರತಿಭಟನೆಯಿಂದಾಗಿ ಕಂಗೆಟ್ಟ ಪಂಜಾಬ್‌ನ ಬಿಜೆಪಿ ನಿಯೋಗವು ಚುನಾವಣಾ ಆಯೋಗದ ಕದ ತಟ್ಟಿತು. ನಿಯೋಗವು ರಾಜ್ಯ ಮುಖ್ಯ ಚುನಾವಣಾಧಿಕಾರಿಯವರನ್ನು ಮಾರ್ಚ್ 6ರಂದು ಭೇಟಿ ಮಾಡಿ ಮನವಿ ಸಲ್ಲಿಸಿತು. ‘ರಾಜ್ಯದ ಆಮ್ ಆದ್ಮಿ ಪಕ್ಷದ (ಎಎಪಿ) ಸರ್ಕಾರ ಹಾಗೂ ವಿಪಕ್ಷಗಳು ರೈತರನ್ನು ಬಿಜೆಪಿ ವಿರುದ್ಧ ಎತ್ತಿ ಕಟ್ಟುತ್ತಿವೆ. ಇದರಿಂದಾಗಿ, ರಾಜ್ಯದಲ್ಲಿ ಸುಲಲಿತ ಪ್ರಚಾರ ನಡೆಸಲು ಸಾಧ್ಯವಾಗುತ್ತಿಲ್ಲ. ಅಭ್ಯರ್ಥಿಗಳಿಗೂ ಪ್ರಾಣ ಭೀತಿ ಇದೆ’ ಎಂದು ನಿಯೋಗವು ದೂರಿತು. ಈ ಸಂಬಂಧ ಕೈಗೊಂಡಿರುವ ಕ್ರಮಗಳ ವರದಿ ಸಲ್ಲಿಸುವಂತೆ ರಾಜ್ಯದ ಡಿಜಿಪಿ ಅವರಿಗೆ ಆಯೋಗ ಸೂಚಿಸಿದೆ.

ಚುನಾವಣಾ ಪ್ರಚಾರಕ್ಕೆ ಅಡ್ಡಿಪಡಿಸದಂತೆ ರೈತ ಸಂಘಟನೆಗಳಿಗೆ ಆಯೋಗ ಮನವಿ ಮಾಡಿದೆ. ಯಾವುದೇ ಪಕ್ಷದ ಪ್ರಚಾರಕ್ಕೆ ಅಡ್ಡಿ ಆತಂಕ ಎದುರಾಗಬಾರದು ಹಾಗೂ ಅಭ್ಯರ್ಥಿಗಳಿಗೆ ಅಗತ್ಯ ಭದ್ರತೆ ಒದಗಿಸುವಂತೆಯೂ ಆಯೋಗವು ಜಿಲ್ಲಾಡಳಿತಗಳಿಗೆ ತಾಕೀತು ಮಾಡಿದೆ. ಪ್ರಚಾರಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ರೈತ ಸಂಘಟನೆಗಳ ಹಲವು ಮುಖಂಡರನ್ನು ಪೊಲೀಸರು ಬಂಧಿಸಿದ್ದಾರೆ. ಅದರ ನಂತರವೂ, ರೈತರ ರೋಷ ತಣಿದಿಲ್ಲ. ‘ದೆಹಲಿಯ ಗಡಿಗಳಲ್ಲಿ ಆಕಾಶವನ್ನೇ ಹೊದ್ದು ಬೀಡು ಬಿಟ್ಟಿದ್ದ ರೈತರ ಮೇಲೆ ಬಿಜೆಪಿ ನಾಯಕರ ಕುಮ್ಮಕ್ಕಿನಿಂದ ಬಲ ಪ್ರಯೋಗ ನಡೆಸಲಾಗಿತ್ತು. ವರ್ಷ ಕಳೆದರೂ ಆ ನೋವು ಮರೆಯಾಗಿಲ್ಲ. ನಮ್ಮ ಮೇಲೆ ದೌರ್ಜನ್ಯ ನಡೆಸಿದವರಿಗೆ ತಕ್ಕ ಪಾಠ ಕಲಿಸುತ್ತೇವೆ. ಹೀಗಾಗಿ, ನಮ್ಮ ಹೋರಾಟ ಮುಂದುವರಿಯಲಿದೆ’ ಎಂದು ಹೇಳುತ್ತಾರೆ ರೈತ ಸಂಘಟನೆಗಳ ಮುಖಂಡರು.

2020ರಲ್ಲಿ ಸಂಘರ್ಷ ಶುರು

ಕೃಷಿ ಕಾಯ್ದೆಯನ್ನು ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ರೈತರು 2020ರಲ್ಲಿ ಸುಮಾರು 13 ತಿಂಗಳುಗಳ ಚಳವಳಿ ನಡೆಸಿದ್ದರು. ‘ಬಿಜೆಪಿಯನ್ನು ಬಹಿಷ್ಕರಿಸಿ’ ಎಂದು ಹಲವು ರೈತರ ಮುಖಂಡರು pಭಿತ್ತಿಪತ್ರಗಳನ್ನು ಪ್ರದರ್ಶಿಸಿದ್ದರು. ಅದನ್ನು ಬಿಜೆಪಿ ನಾಯಕರು ಗಂಭೀರವಾಗಿ ಪರಿಗಣಿಸಿರಲಿಲ್ಲ. ಇದೀಗ ಬಿಜೆಪಿ ವಿರುದ್ಧ ರೈತರ ಸಂಘರ್ಷ ತೀವ್ರ ಸ್ವರೂಪ ತಾಳಿದೆ.



ಕುತೂಹಲದ ನೋಟ...

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಬುಧವಾರ ನವದೆಹಲಿಯಲ್ಲಿ ನಡೆಸಿದ ರೋಡ್ ಶೋವನ್ನು ಮಹಿಳೆಯರು ಮತ್ತು ಮಕ್ಕಳು ಕುತೂಹಲದಿಂದ ವೀಕ್ಷಿಸಿದರು –ಪಿಟಿಐ ಚಿತ್ರ

ಇದು ಮಾಮೂಲಿ ತೀರ್ಪಲ್ಲ: ಶಾ

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ಇದು ಮಾಮೂಲಿ ತೀರ್ಪಲ್ಲ ಎನ್ನುವುದು ನನ್ನ ನಂಬಿಕೆ’ ಎಂದಿದ್ದಾರೆ.



‘ಅವರಿಗೆ (ಕೇಜ್ರಿವಾಲ್) ವಿಶೇಷ ಪರಿಗಣನೆ ನೀಡಲಾಗಿದೆ ಎಂದು ದೇಶದ ಅನೇಕರು ಭಾವಿಸಿದ್ದಾರೆ’ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿದ್ದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಜೂನ್ ಒಂದರವರೆಗೆ ಜಾಮೀನು ನೀಡಿದೆ.

ಪಿಒಕೆ ಮರಳಿ ಪಡೆಯುತ್ತೇವೆ: ಶ್ರೀರಾಮಪುರ (ಪಿಟಿಐ ವರದಿ): ಪಾಕ್ ಆಕ್ರಮಿತ ಕಾಶ್ಮೀರದ (ಪಿಒಕೆ)ಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಬಗ್ಗೆ ಪ್ರತಿಕ್ರಿಯಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಿಒಕೆ ಭಾರತದ ಭಾಗವಾಗಿದ್ದು, ಅದನ್ನು ನಾವು ಮರಳಿ ಪಡೆಯುತ್ತೇವೆ ಎಂದು ಬುಧವಾರ ಹೇಳಿದರು.

ಪಶ್ಚಿಮ ಬಂಗಾಳದ ಶ್ರೀರಾಮಪುರದಲ್ಲಿ ನಡೆದ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘370ನೇ ವಿಧಿ ಅಡಿ ಜಮ್ಮು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಕಾಶ್ಮೀರದಲ್ಲಿ ಶಾಂತಿ ನೆಲೆಸಿದೆ. ಆದರೆ. ಈಗ ಪಿಒಕೆಯಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಈ ಹಿಂದೆ ಆಜಾದಿಯ ಘೋಷಣೆಗಳು ಇಲ್ಲಿ ಕೇಳಿಬರುತ್ತಿದ್ದವು. ಈಗ ಅವೇ ಘೋಷಣೆಗಳು ಅಲ್ಲಿ ಕೇಳಿಬರುತ್ತಿವೆ. ಹಿಂದೆ ಇಲ್ಲಿ ಕಲ್ಲು ಎಸೆಯುವುದು ನಡೆಯುತ್ತಿತ್ತು, ಈಗ ಅಲ್ಲಿ ನಡೆಯುತ್ತಿದೆ’ ಎಂದು ವಿಶ್ಲೇಷಿಸಿದರು.

ಪಿಒಕೆ ವಾಪಸ್ ಪಡೆಯುವ ವಿಚಾರದಲ್ಲಿ ಕಾಂಗ್ರೆಸ್ ಬೆಂಬಲ ನೀಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದ ಅವರು, ‘ಮಣಿಶಂಕರ್ ಅಯ್ಯರ್ ಅವರಂಥ ಕಾಂಗ್ರೆಸ್ ನಾಯಕರು, ಪಾಕ್ ಬಳಿ ಅಣ್ವಸ್ತ್ರ ಇರುವುದರಿಂದ ಹಾಗೆ ಮಾಡಲಾಗುವುದಿಲ್ಲ ಎನ್ನುತ್ತಿದ್ದಾರೆ. ಆದರೆ, ಪಿಒಕೆ ಭಾರತದ ಭಾಗ, ಅದನ್ನು ನಾವು ಪಡೆಯುತ್ತೇವೆ’ ಎಂದು ಹೇಳಿದರು.

‘ಪ್ರಧಾನಿ ಅಭಿವೃದ್ಧಿಯತ್ತ ಗಮನ ನೀಡಲಿ’

‘ಮಟನ್–ಚಿಕನ್‘, ‘ಹಿಂದೂ–ಮುಸ್ಲಿಂ’ ಎಂದಿರುವುದು ಮೋದಿ ಹೊರತು ನಾನಲ್ಲ: ಖರ್ಗೆ

ಲಖನೌ/ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಚುನಾವಣಾ ಭಾಷಣಗಳಲ್ಲಿ ಇತರೆ ವಿಷಯಗಳನ್ನು ಬಿಟ್ಟು ಅಭಿವೃದ್ಧಿ ವಿಚಾರಗಳ ಬಗ್ಗೆ ಮಾತನಾಡಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಲಹೆ ನೀಡಿದ್ದು, ‘ಮಟನ್–ಚಿಕನ್’, ‘ಹಿಂದೂ–ಮುಸ್ಲಿಂ’ ಎಂದಿರುವುದು ಅವರೇ ಹೊರತು ನಾವಲ್ಲ ಎಂದು ಹೇಳಿದ್ದಾರೆ.

ತಾನು ಹಿಂದೂ ಮುಸ್ಲಿಂ ರಾಜಕೀಯ ಮಾಡುವುದಿಲ್ಲ ಎಂದು ಪ್ರಧಾನಿ ಹೇಳಿದ್ದಕ್ಕೆ ಖರ್ಗೆ ಈ ರೀತಿ ಪ್ರತಿಕ್ರಿಯಿಸಿದರು.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರೊಂದಿಗಿನ ಬುಧವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಳೆದ 10 ವರ್ಷಗಳಲ್ಲಿ ತಾವು ಮಾಡಿದ ಕೆಲಸದ ಆಧಾರದ ಮೇಲೆ ಪ್ರಧಾನಿ ಮೋದಿ ಅವರು ಏಕೆ ಮತ ಕೇಳುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಪ್ರಧಾನಿ ಅವರು ಮಟನ್, ದನದ ಮಾಂಸ, ಚಿಕನ್, ಮೀನು ಮತ್ತು ಮಂಗಳಸೂತ್ರ ಎಂದು ಹೇಳಿಲ್ಲವೇ? ಇವು ಅವರದ್ದೇ ಮಾತುಗಳು, ನನ್ನವಲ್ಲ’ ಎಂದು ಹೇಳಿದರು.

‘ದೇಶದಲ್ಲಿ ನಾಲ್ಕು ಹಂತದ ಮತದಾನ ಮುಗಿದಿದೆ. ‘ಇಂಡಿಯಾ’ ಕೂಟವು ಉತ್ತಮ ಸ್ಥಿತಿಯಲ್ಲಿದೆ. ದೇಶದ ಜನ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೀಳ್ಕೊಡಲು ಸಿದ್ಧರಾಗಿದ್ದಾರೆ ಎಂದು ನಾನು ಪೂರ್ಣ ವಿಶ್ವಾಸದಿಂದ ಹೇಳಬಲ್ಲೆ. ‘ಇಂಡಿಯಾ’ ಕೂಟವು ಜೂನ್ 4ರಂದು ಹೊಸ ಸರ್ಕಾರ ರಚಿಸಲಿದೆ’ ಎಂದು ನುಡಿದರು.

ಪ್ರಧಾನಿ ಮೋದಿ ಸುಳ್ಳು ಹೇಳುತ್ತಾ ಕಾಂಗ್ರೆಸ್‌ಅನ್ನು ನಿಂದಿಸುತ್ತಿದ್ದಾರೆ ಎಂದು ಆರೋಪಿಸಿದ ಖರ್ಗೆ, ‘ರಾಮನ ಹೆಸರನ್ನು ಪ್ರಸ್ತಾಪಿಸಿದ್ದಕ್ಕಿಂತಲೂ ಹೆಚ್ಚು ಬಾರಿ ಅವರು ಕಾಂಗ್ರೆಸ್, ಸೋನಿಯಾ, ರಾಹುಲ್ ಹೆಸರನ್ನು ಮತ್ತು ಉಳಿದ ಸಮಯದಲ್ಲಿ ಪ್ರಿಯಾಂಕಾ ಹಾಗೂ ನನ್ನ ಹೆಸರು ಪ್ರಸ್ತಾಪಿಸಿ, ನಿಂದಿಸಿದ್ದಾರೆ’ ಎಂದು ಟೀಕಿಸಿದರು.

ಅಖಿಲೇಶ್ ಯಾದವ್ ಮಾತನಾಡಿ, ‘ಬಿಜೆಪಿಯು ನಕಾರಾತ್ಮಕ ನಿರೂಪಣೆಯಲ್ಲಿ ತೊಡಗಿದೆ. ಅವರ ಭರವಸೆಗಳೆಲ್ಲವೂ ಸುಳ್ಳು ಎನ್ನುವುದು ಹಿಂದಿರುಗಿ ನೋಡಿದರೆ ತಿಳಿಯುತ್ತದೆ. ಸೋಲಿನ ಸುಳಿವು ದೊರೆತ ಬಿಜೆಪಿ ಮಂದಿಯು ತಮ್ಮ ಭಾಷೆ ಮತ್ತು ವರಸೆ ಬದಲಾಯಿಸಿಕೊಂಡಿದ್ದಾರೆ. ನಕಾರಾತ್ಮಕ ರಾಜಕಾರಣದ ಕಾಲ ಮುಗಿದಿದೆ. ದೇಶದ ಜನ ಬದಲಾವಣೆ ಬಯಸಿದ್ದು, ಅದು ಜೂನ್ 4ರಂದು ಸಾಕಾರವಾಗಲಿದೆ’ ಎಂದರು.

ಮೋದಿ ರೋಗಗ್ರಸ್ತ ಸುಳ್ಳುಗಾರ: ‘ಮೋದಿ ಗ್ಯಾರಂಟಿ ಸಂಪೂರ್ಣ ವಿಫಲವಾಗಿದ್ದು, ‘ಚಾರ್‌ಸೌ ಪಾರ್’ ಸದ್ದಿಲ್ಲದೇ ಸಮಾಧಿಯಾಗಿದೆ. ಹೀಗಾಗಿ ನಿರ್ಗಮಿಸಲಿರುವ ಪ್ರಧಾನಿಗೆ ಹಿಂದೂ–ಮುಸ್ಲಿಂ ರಾಜಕಾರಣ ಹೊರತುಪಡಿಸಿ ಬೇರೆ ಕಾರ್ಯಸೂಚಿಯೇ ಇಲ್ಲ’ ಎಂದು ಮೋದಿ ವಿರುದ್ಧ ಕಾಂಗ್ರೆಸ್ ಬುಧವಾರ ವಾಗ್ದಾಳಿ ನಡೆಸಿದೆ.

ಈ ಬಗ್ಗೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ನಿರ್ಗಮಿಸಲಿರುವ ಪ್ರಧಾನಿಯು ಒಬ್ಬ ರೋಗಗ್ರಸ್ತ ಸುಳ್ಳುಗಾರ’ ಎಂದು ಟೀಕಿಸಿದ್ದಾರೆ.

‘ತನಗೆ ಹಿಂದು ಮುಸ್ಲಿಂ ರಾಜಕೀಯ ಗೊತ್ತಿಲ್ಲ ಎನ್ನುವ ಇತ್ತೀಚಿನ ಹೇಳಿಕೆ ಮೂಲಕ ಅವರು ತಮ್ಮ ದಿನನಿತ್ಯದ ಸುಳ್ಳಿನ ಹೊಸ ಆಳವನ್ನು ತಲುಪಿದ್ದಾರೆ. 2024ರ ಏಪ್ರಿಲ್ 19ರಿಂದ ಮೋದಿ ಅವರು ಕೋಮುವಾದಿ ಭಾಷೆ, ಚಿಹ್ನೆ ಮತ್ತು ಪ್ರಸ್ತಾಪಗಳನ್ನು ಬಳಸಿರುವುದು ಸಾರ್ವಜನಿಕ ದಾಖಲೆಯಲ್ಲಿದೆ’ ಎಂದು ಉಲ್ಲೇಖಿಸಿದ್ದಾರೆ.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಲಖನೌದಲ್ಲಿ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು –ಪಿಟಿಐ ಚಿತ್ರ

ಮೋದಿ ದೇಶದ 140 ಕೋಟಿ ಜನರನ್ನೂ ಒಂದೇ ಎಂದು ಪರಿಗಣಿಸಿದವರು. ಅವರ ವಿರುದ್ಧ ‘ಹಿಂದೂ–ಮುಸ್ಲಿಂ’ ಆರೋಪ ಮಾಡಿದ್ದು ವಿರೋಧ ಪಕ್ಷದವರು

ಶಾನವಾಜ್ ಹುಸೈನ್, ಬಿಜೆಪಿ ವಕ್ತಾರ

ಮೋದಿ ಅವರು ಒಂದು ವರ್ಗದ ಓಲೈಕೆಯನ್ನು ಅಂತ್ಯಗೊಳಿಸಿದರು. ಅವರ ಯೋಜನೆಗಳಿಂದ ಎಲ್ಲ ಜಾತಿ, ವರ್ಗ, ಧರ್ಮದವರೂ ಅನುಕೂಲ ಪಡೆದಿದ್ದಾರೆ

ಮುಖ್ತಾರ್ ಅಬ್ಬಾಸ್ ನಖ್ವಿ, ಮಾಜಿ ಕೇಂದ್ರ ಸಚಿವ

10 ಕೆ.ಜಿ ಪಡಿತರ: ಖರ್ಗೆ ಘೋಷಣೆ


ಸರ್ಕಾರವು ಈಗ ಬಡವರಿಗೆ ನೀಡುತ್ತಿರುವ ಪಡಿತರವನ್ನು ‘ಇಂಡಿಯಾ’ ಕೂಟವು ಅಧಿಕಾರಕ್ಕೆ ಬಂದರೆ ದುಪ್ಪಟ್ಟು ಮಾಡಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಘೋಷಿಸಿದರು.

ಮೋದಿ ಸರ್ಕಾರವು ಬಡವರಿಗೆ ಪ್ರತಿ ತಿಂಗಳು 5 ಕೆ.ಜಿ ಪಡಿತರ ನೀಡುತ್ತಿರುವುದನ್ನು ಪ್ರಸ್ತಾಪಿಸಿದ ಅವರು, ‘ಕಾಂಗ್ರೆಸ್, ಆಹಾರ ಭದ್ರತಾ ಕಾಯ್ದೆ ಜಾರಿ ಮಾಡಿತು. ನೀವು ಏನೂ ಮಾಡಲಿಲ್ಲ. ಬಡವರಿಗೆ ನೀವು 5 ಕೆ.ಜಿ ಪಡಿತರ ನೀಡುತ್ತಿದ್ದೀರಿ, ನಾವು 10 ಕೆ.ಜಿ ನೀಡುತ್ತೇವೆ’ ಎಂದು ತಿಳಿಸಿದರು. ‘ನಾನು ಇದನ್ನು ಗ್ಯಾರಂಟಿಯಾಗಿ ಹೇಳುತ್ತಿದ್ದೇನೆ. ಏಕೆಂದರೆ, ನಾವು ಇದನ್ನು ಈಗಾಗಲೇ ಕರ್ನಾಟಕ ಮತ್ತು ತೆಲಂಗಾಣದಲ್ಲಿ ಜಾರಿಗೆ ತಂದಿದ್ದೇವೆ’ ಎಂದು ಹೇಳಿದರು.

ಮೋದಿ ಹೇಳಿದ್ದೇನು?

ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಪ್ರಧಾನಿ ಮೋದಿ ಅವರು, ‘ಹಿಂದೂ ಮುಸ್ಲಿಂ ರಾಜಕೀಯ ಮಾಡಿದರೆ ನಾನು ಸಾರ್ವಜನಿಕ ಜೀವನದಲ್ಲಿರಲು ಯೋಗ್ಯನಲ್ಲ’ ಎಂದು ಹೇಳಿದ್ದರು.

‘ಹೆಚ್ಚು ಮಕ್ಕಳು ಇರುವವರ ಬಗ್ಗೆ ಯಾರಾದರೂ ಮಾತನಾಡಿದರೆ, ಅದು ಮುಸ್ಲಿಮರ ಬಗ್ಗೆ ಆಡಿದ ಮಾತು ಎಂದು ನಿಮಗೆ ಹೇಳಿದ್ದು ಯಾರು? ಮುಸ್ಲಿಮರ ಬಗ್ಗೆ ಏಕೆ ಅಷ್ಟು ಅನ್ಯಾಯ? ಬಡ ಕುಟುಂಬಗಳಲ್ಲಿನ ಪರಿಸ್ಥಿತಿಯೂ ಹಾಗೆಯೇ ಇರುತ್ತದೆ. ಎಲ್ಲಿ ಬಡತನ ಇರುತ್ತದೆಯೋ, ಅಲ್ಲಿ ಹೆಚ್ಚು ಮಕ್ಕಳಿರುತ್ತಾರೆ. ನಾನು ಹಿಂದೂ ಎಂದಾಗಲಿ, ಮುಸ್ಲಿಂ ಎಂದಾಗಲಿ ಹೇಳಿಲ್ಲ. ನಾನು ಹೇಳಿದ್ದು, ನಿಮಗೆ ಎಷ್ಟು ಮಕ್ಕಳನ್ನು ಪೋಷಿಸಲು ಸಾಧ್ಯವಾಗುತ್ತದೆಯೋ ಅಷ್ಟು ಮಕ್ಕಳಿರಬೇಕು ಎಂದು. ನಿಮ್ಮ ಮಕ್ಕಳ ಬಗ್ಗೆ ಸರ್ಕಾರ ಗಮನ ಕೊಡಬೇಕಾದ ಪರಿಸ್ಥಿತಿ ಸೃಷ್ಟಿಗೆ ಕಾರಣರಾಗಬೇಡಿ’ ಎಂದು ಪ್ರಧಾನಿ ಸಂದರ್ಶನದಲ್ಲಿ ಹೇಳಿದ್ದರು.



‘ಧರ್ಮದ ಆಧಾರದಲ್ಲಿ ಕಾಂಗ್ರೆಸ್ ದೇಶ ವಿಭಜಿಸುತ್ತಿದೆ’

ಕಲ್ಯಾಣ್ (ಮಹಾರಾಷ್ಟ್ರ): ಧರ್ಮದ ಆಧಾರದ ಮೇಲೆ ಜನರನ್ನು ವಿಭಜಿಸುವ ಕಾಂಗ್ರೆಸ್ ಹಾಗೂ ‘ಇಂಡಿಯಾ’ ಕೂಟದ ಯೋಜನೆಗಳನ್ನು ತಾನು ಬಯಲಿಗೆಳೆಯುತ್ತಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು. ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಕಲ್ಯಾಣ್‌ನಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ನನಗಿಂತ ಹಿಂದೆ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರು ದೇಶದ ಸಂಪನ್ಮೂಲಗಳ ಮೇಲೆ ಮುಸ್ಲಿಮರಿಗೆ ಮೊದಲ ಹಕ್ಕು ಇದೆ ಎಂದಿದ್ದರು. ಕಾಂಗ್ರೆಸ್ ಪಕ್ಷವು ಬಜೆಟ್‌ನಲ್ಲಿ ಶೇ 15ರಷ್ಟು ಮೊತ್ತವನ್ನು ಮುಸ್ಲಿಮರಿಗೆ ಮೀಸಲಿಡುವ ಮೂಲಕ ದೇಶದ ಬಜೆಟ್‌ಅನ್ನು ಮುಸ್ಲಿಂ ಬಜೆಟ್ ಮತ್ತು ಹಿಂದೂ ಬಜೆಟ್ ಎಂದು ವಿಂಗಡಿಸಲು ಹೊರಟಿತ್ತು’ ಎಂದು ಆರೋಪಿಸಿದರು. ‘ಇಂಡಿಯಾ’ ಕೂಟವು ಅಧಿಕಾರಕ್ಕೆ ಬಂದ ನಂತರ ಈ ಓಲೈಕೆ ನೀತಿಯನ್ನು ಜಾರಿ ಮಾಡಲಿದೆ. ಈ ದೇಶದ ಐಕ್ಯತೆ ನನಗೆ ಮುಖ್ಯ’ ಎಂದು ಹೇಳಿದರು.

‘ಇಂಡಿಯಾ ಕೂಟಕ್ಕೆ ಬಾಹ್ಯ ಬೆಂಬಲ’

ಕೋಲ್ಕತ್ತ (ಪಿಟಿಐ): ಕೇಂದ್ರದಲ್ಲಿ ‘ಇಂಡಿಯಾ’ ಮೈತ್ರಿಕೂಟದ ಸರ್ಕಾರ ರಚಿಸಲು ಟಿಎಂಸಿಯು ಬಾಹ್ಯ ಬೆಂಬಲ ನೀಡಲಿದೆ ಎಂದು ಪಕ್ಷದ ಮುಖ್ಯಸ್ಥೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ಹೂಗ್ಲಿ ಜಿಲ್ಲೆಯ ಚಿನ್ಸುರಾದಲ್ಲಿ ಬುಧವಾರ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘400 ಸ್ಥಾನಗಳನ್ನು ಗೆಲ್ಲುವುದಾಗಿ ಬಿಜೆಪಿ ಹೇಳುತ್ತಿದೆ. ಆದರೆ ಈ ಬಾರಿ ಅವರು ಅಧಿಕಾರಕ್ಕೆ ಬರುವುದಿಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದಾರೆ’ ಎಂದರು.



ಚುನಾವಣಾ ಆಯೋಗವು ಪ್ರಧಾನಿ ಮೋದಿ ಅವರ ‘ಕೈಗೊಂಬೆ’ಯಾಗಿದ್ದು, ಅವರ ನಿರ್ದೇಶನದಂತೆ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು. ‘ಚುನಾವಣೆಯು ಎರಡೂವರೆ ತಿಂಗಳಷ್ಟು ಸುದೀರ್ಘವಾಗಿ ನಡೆಯುತ್ತಿದ್ದು, ನಿಮಗೆ (ಚುನಾವಣಾ ಅಧಿಕಾರಿಗಳಿಗೆ) ಜನರ ಬವಣೆ ಏನೆಂಬುದು ತಿಳಿಯದು’ ಎಂದು ಟೀಕಿಸಿದರು.

‘ಆಯುಷ್ಮಾನ್ ಭಾರತ್ ಯೋಜನೆಯನ್ನು ವಿಸ್ತರಿಸುವ ಚಿಂತನೆ ಇದೆ ಎಂದು ಪ್ರಧಾನಿ ಹೇಳಿದ್ದಾರೆ. ಚುನಾವಣೆಯ ಸಮಯದಲ್ಲಿ ಅಂತಹ ಘೋಷಣೆ ಏಕೆ ಮಾಡಬೇಕು? ಪ್ರಧಾನಿ ಅವರೇ ನೀವು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದೀರಿ’ ಎಂದು ವಾಗ್ದಾಳಿ ನಡೆಸಿದರು.

‘ಜನರ ಗಮನ ಬೇರೆಡೆ ಸೆಳೆಯುವ ಬಿಜೆಪಿ’

ರಾಯ್‌ಬರೇಲಿ (ಪಿಟಿಐ): ಬಿಜೆಪಿಯು ಚುನಾವಣೆಯಲ್ಲಿ ಧರ್ಮದ ವಿಚಾರವನ್ನು ತಂದು ಜನರ ಗಮನ ಬೇರೆಡೆ ಸೆಳೆಯುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ದೂರಿದರು.

‘ಧರ್ಮದ ಹೆಸರಿನಲ್ಲಿ ಜನರನ್ನು ಮೋಸಗೊಳಿಸಿ ಮತ್ತೊಮ್ಮೆ ಅಧಿಕಾರಕ್ಕೇರಬಹುದು ಎಂಬುದನ್ನು ಬಿಜೆಪಿ ನಾಯಕರು ಅರಿತುಕೊಂಡಿದ್ದಾರೆ. ಆದ್ದರಿಂದ ಪ್ರಧಾನಿ ನರೇಂದ್ರ ಮೋದಿ ಒಳಗೊಂಡಂತೆ ಪಕ್ಷದ ಎಲ್ಲ ನಾಯಕರೂ ಧರ್ಮದ ವಿಚಾರವನ್ನೇ ಮುನ್ನೆಲೆಗೆ ತರುತ್ತಿದ್ದಾರೆ’ ಎಂದರು.

ರಾಯ್‌ಬರೇಲಿಯ ಬಿಜೆಪಿ ಅಭ್ಯರ್ಥಿಯು ಮತಗಳಿಕೆಗಾಗಿ ಗ್ರಾಮಗಳ ಮುಖಂಡರನ್ನು ಬೆದರಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.


www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಹಿಮಸರೋವರಗಳ ವಿಸ್ತರಣೆ ದಿಢೀರ್ ಪ್ರವಾಹದ ಆಪತ್ತು!



ಆಳ–ಅಗಲ
ಛಾಬಹಾರ್ ಬಂದರು ಒಪ್ಪಂದ ಭಾರತದ ಅನುಕೂಲ, ಅನನುಕೂಲಗಳು

ಇನ್ನೂ ವಾಪಸ್ ಬಾರದ ಪ್ರಜ್ವಲ್ 5

ಪೌರತ್ವ ಪಡೆದವರಿಗೆ ಪ್ರಮಾಣಪತ್ರ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,987 ▼	22,200 ▼	₹75,000 (ಬೆಂಗಳೂರು) ▲	₹86,900 (ಬೆಂಗಳೂರು) ▲	83.50 ▼

ಶಿಕ್ಷಕರ ರಜೆ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಅನುತ್ತೀರ್ಣರಾದ ಹಾಗೂ ಕಡಿಮೆ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೆ ಆಯಾ ಶಾಲೆಗಳಲ್ಲೇ ಪರಿಹಾರ ಬೋಧನೆ ಆರಂಭಿಸಲಾಗಿದೆ. ಇದಕ್ಕಾಗಿ ರಜೆ ಅವಧಿ ಕಡಿತಗೊಳಿಸಿದ್ದಕ್ಕೆ ಶಿಕ್ಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗಣಿತ, ವಿಜ್ಞಾನ, ಇಂಗ್ಲಿಷ್ ವಿಷಯಗಳಲ್ಲಿ ಪರಿಹಾರ ಬೋಧನೆಗೆ ಹೆಚ್ಚಿನ ವಿದ್ಯಾರ್ಥಿಗಳು ಒಲವು ತೋರಿದ್ದಾರೆ. ರಜೆಯಲ್ಲಿದ್ದ ಶಿಕ್ಷಕರಿಗೆ ಶಾಲೆಗೆ ಮರಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚನೆ ನೀಡಿದೆ. 15 ದಿನಗಳ ರಜೆ ಕಡಿತದ ಅವಧಿಯನ್ನು ಪರಿವರ್ತಿತ ರಜೆಯಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಿದೆ.

2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಕ್ರಮ ತಡೆಯಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವೆಬ್‌ಕಾಸ್ಟಿಂಗ್ ಸೇರಿದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿತ್ತು. ಪರಿಣಾಮ ಫಲಿತಾಂಶ ಕಳೆದ ಬಾರಿಗಿಂತ ಶೇಕಡ 30ರಷ್ಟು ಕುಸಿತವಾಗಿತ್ತು. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 3.97 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು.

8ನೇ ಪುಟ ನೋಡಿ


ಚಿನಕುರುಳಿ

ಪ್ರಕಾಶ್ ಶೆಟ್ಟಿ



'ನ್ಯೂಸ್‌ಕ್ಲಿಕ್' ಸುದ್ದಿತಾಣದ ಸಂಸ್ಥಾಪಕರ ಬಿಡುಗಡೆಗೆ ಸುಪ್ರೀಂ ಕೋರ್ಟ್ ಆದೇಶ

'ಪುರಕಾಯಸ್ಥ ಬಂಧನ ಅಸಿಂಧು'



ಪ್ರಬೀರ್ ಪುರಕಾಯಸ್ಥ

ನವದೆಹಲಿ (ಪಿಟಿಐ): ನ್ಯೂಸ್‌ಕ್ಲಿಕ್ ಸುದ್ದಿ ಪೋರ್ಟಲ್‌ನ ಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರನ್ನು ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಬಂಧಿಸಿರುವುದು ಅಸಿಂಧು. ಅವರನ್ನು ಬಿಡುಗಡೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ಆದೇಶ ನೀಡಿದೆ.

ವಶಕ್ಕೆ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಯ ಪ್ರತಿಯನ್ನು ಪುರಕಾಯಸ್ಥ ಅಥವಾ ಅವರ ವಕೀಲರಿಗೆ ಪೊಲೀಸರು ನೀಡಿಲ್ಲ. ವಶಕ್ಕೆ ಪಡೆಯಲು ಇರುವ ಕಾರಣಗಳನ್ನು ಅವರಿಗೆ ತಿಳಿಸಿಲ್ಲ. ಹಾಗಾಗಿ ಅವರ ಬಂಧನ ಮತ್ತು ನಂತರ ವಶಕ್ಕೆ ಪಡೆದಿರುವುದು ಅಸಿಂಧುವಾಗಿದೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠ ಹೇಳಿದೆ.

ವಶಕ್ಕೆ ಕೋರಿ ಸಲ್ಲಿಸಿದ ಅರ್ಜಿಗೆ 2023ರ ಅಕ್ಟೋಬರ್ 4ರಂದು ಅನುಮೋದನೆ ದೊರೆಯುತ್ತದೆ.

ತಮ್ಮ ಬಂಧನ ಪ್ರಶ್ನಿಸಿ ಪುರಕಾಯಸ್ಥ ಅವರು ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಕಳೆದ ಅಕ್ಟೋಬರ್ 13ರಂದು ಅರ್ಜಿಯನ್ನು ವಜಾ ಮಾಡಿ ಆದೇಶ ಕೊಟ್ಟಿತ್ತು. ಈ ಆದೇಶ ಕೂಡ ಈಗ ರದ್ದಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕಳೆದ ವರ್ಷ ಅಕ್ಟೋಬರ್ 3ರಂದು ಪುರಕಾಯಸ್ಥ ಅವರನ್ನು ಬಂಧಿಸಲಾಗಿತ್ತು.

'ಅರ್ಜಿದಾರರು ನ್ಯಾಯಾಲಯಕ್ಕೆ ಯಾವುದೇ ಭದ್ರತಾ ಬಾಂಡ್ ನೀಡುವ ಅಗತ್ಯ ಇಲ್ಲ. ಆದರೆ, ಈ ಪ್ರಕರಣದಲ್ಲಿ ಆರೋಪಪಟ್ಟಿ ಈಗಾಗಲೇ ಸಲ್ಲಿಕೆ ಆಗಿದೆ. ಹಾಗಾಗಿ, ವಿಚಾರಣಾ ನ್ಯಾಯಾಲಯ ಸೂಚಿಸುವ ಸುರಕ್ಷಾ ಬಾಂಡ್ ನೀಡುವುದು ಸೂಕ್ತ ಎನಿಸುತ್ತದೆ' ಎಂದು ಪೀಠವು ಹೇಳಿದೆ.

8ನೇ ಪುಟ ನೋಡಿ

ಸಾಕ್ಷ್ಯನಾಶ ಮಾಡುವಂತಿಲ್ಲ: ನ್ಯಾಯಾಲಯ ನಿರ್ದೇಶನ



ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರತಿಕ್ರಿಯೆ ನೀಡಕೂಡದು ಮತ್ತು ಸಾಕ್ಷ್ಯವನ್ನು ನಾಶ ಮಾಡಕೂಡದು ಎಂದು ದೆಹಲಿ ನ್ಯಾಯಾಲಯವು ಪ್ರಬೀರ್ ಪುರಕಾಯಸ್ಥ ಅವರಿಗೆ ಆದೇಶಿಸಿದೆ.

ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ (ಎಎಸ್‌ಜೆ) ಹರದೀಪ್ ಕೌರ್ ಅವರು ಪುರಕಾಯಸ್ಥ ಅವರ ಬಿಡುಗಡೆಗೆ ಆದೇಶ ಹೊರಡಿಸಿದರು. ಆದೇಶದಲ್ಲಿ ಅವರು ಕೆಲ ಷರತ್ತುಗಳನ್ನು ವಿಧಿಸಿದ್ದಾರೆ.

₹1 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತೆಯನ್ನು ಸಲ್ಲಿಸುವಂತೆ ನ್ಯಾಯಾಧೀಶರು ನಿರ್ದೇಶಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿಗಳನ್ನು ಅಥವಾ ಮಾಫಿ ಸಾಕ್ಷಿಯಾಗಿರುವ ಅಮಿತ್ ಚಕ್ರವರ್ತಿ ಅವರನ್ನು ಸಂಪರ್ಕಿಸುವಂತಿಲ್ಲ. ನ್ಯಾಯಾಲಯದ ಪೂರ್ವಾನುಮತಿ ಪಡೆಯದೇ ದೇಶ ಬಿಟ್ಟು ಹೋಗುವಂತಿಲ್ಲ ಎಂದಿದ್ದಾರೆ.

ವಶಕ್ಕೆ ಪಡೆಯಲು ಕಾರಣ ಕೊಡಬೇಕು

ಸಂವಿಧಾನದ ವಿಧಿ 22(1)ರ ಪ್ರಕಾರ, ಯಾವುದೇ ವ್ಯಕ್ತಿಯನ್ನು ಬಂಧಿಸಿ ಕಸ್ಟಡಿಯಲ್ಲಿ ಇರಿಸಿಕೊಳ್ಳುವ ಮೊದಲು ಆ ವ್ಯಕ್ತಿಗೆ ಬಂಧನದ ಕಾರಣಗಳನ್ನು ತಿಳಿಸಬೇಕು. ಬಂಧನದ ಕಾರಣಗಳನ್ನು ತಿಳಿಸುವುದು ಕಡ್ಡಾಯ. ಮೌಖಿಕವಾಗಿ ಕಾರಣ ನೀಡಿದರೆ ಸಾಕಾಗುವುದಿಲ್ಲ. ಲಿಖಿತವಾಗಿಯೇ ನೀಡಬೇಕು.

ಆರೋಪ ಏನು?

1. ಚೀನಾ ಪರ ಪ್ರಚಾರ ಮಾಡಲು 'ನ್ಯೂಸ್‌ಕ್ಲಿಕ್' ಆ ದೇಶದಿಂದ ಭಾರಿ ಮೊತ್ತದ ಹಣ ಪಡೆದಿದೆ
2. ಭಾರತದ ಸಾರ್ವಭೌಮತೆಯನ್ನು ಹಾಳುಗೆಡವಲು ಸಂಚು ಮಾಡಿದೆ
3. ದೇಶದ ಬಗ್ಗೆ ಜನರಲ್ಲಿ ಆಕ್ರೋಶ ಮೂಡಿಸಲು ಯತ್ನಿಸಿದೆ
4. ಲೋಕಸಭೆಗೆ 2019ರಲ್ಲಿ ನಡೆದ ಚುನಾವಣಾ ಪ್ರಕ್ರಿಯೆ ಬುಡಮೇಲು ಮಾಡಲು ಪೀಪಲ್ಸ್ ಅಲಯನ್ಸ್ ಫಾರ್ ಡೆಮಾಕ್ರಸಿ ಆ್ಯಂಡ್ ಸೆಕ್ಯುಲರಿಸಂ ಸಂಸ್ಥೆಯ ಜೊತೆ ಸಂಚು ಮಾಡಿದ್ದಾರೆ

ಪ್ರೀತಿ ನಿರಾಕರಣೆ: ಯುವತಿಯ ಕೊಲೆ

ಹುಬ್ಬಳ್ಳಿ ರಾಣಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟನೆ; ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪ್ರೀತಿ ನಿರಾಕರಿಸಿದ್ದಕ್ಕೆ ಸಿಟ್ಟಿಗೆದ್ದ ಯುವಕ ವೀರಾಪುರ ಓಣಿಯಲ್ಲಿರುವ ಮನೆಯೊಳಕ್ಕೆ ನುಗ್ಗಿ ಯುವತಿಯನ್ನು ಚಾಕುವಿನಿಂದ ಇರಿದು ಬುಧವಾರ ನಸುಕಿನಲ್ಲಿ ಕೊಲೆ ಮಾಡಿ, ಪರಾರಿಯಾಗಿದ್ದಾನೆ ಎಂದು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಗಿರೀಶ ಸಾವಂತ



ಅಂಜಲಿ

ವೀರಾಪುರ ಓಣಿಯ ನಿವಾಸಿ ಅಂಜಲಿ ಅಂಬಿಗೇರ (20) ಕೊಲೆಯಾದವರು. ಯಲ್ಲಾಪುರ ಓಣಿಯ ನಿವಾಸಿ, ಆಟೊರಿಕ್ಷಾ ಚಾಲಕ ಗಿರೀಶ ಸಾವಂತ (23) ಕೊಲೆ ಆರೋಪಿ. ಆತನ ಬಂಧನಕ್ಕೆ ಕಾರ್ಯಾಚರಣೆ ನಡೆದಿದೆ ಎಂದು ಬೆಂಡಿಗೇರಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ನಸುಕಿನ 5 ಗಂಟೆಗೆ ಅಂಜಲಿ ವಾಸವಿದ್ದ ಮನೆಗೆ ಬಂದ ಗಿರೀಶ ಜೋರಾಗಿ ಬಾಗಿಲು ಬಡಿದ. ಅಂಜಲಿಯ ಸಹೋದರಿ ಮತ್ತು ಅಜ್ಜಿ ಬಾಗಿಲು ತೆರೆದಾಗ, ಮೂವರ ನಡುವೆ ವಾಗ್ವಾದ ನಡೆದಿದೆ. ಆಕ್ರೋಶಗೊಂಡ ಆತ ಮನೆಯೊಳಗೆ ನುಗ್ಗಿ, ಅಂಜಲಿಗೆ ಮನ ಬಂದಂತೆ ಚಾಕುವಿನಿಂದ ಇರಿದ. ತೀವ್ರ ರಕ್ತಸ್ರಾವದಿಂದ ಆಕೆ ಮೃತಪಟ್ಟಳು. ಆತ ಪರಾರಿಯಾಗಿದ್ದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕೇಟರಿಂಗ್‌ನಲ್ಲಿ ಕೆಲಸ ಮಾಡುತ್ತಿದ್ದ ಅಂಜಲಿಗೆ ಗಿರೀಶ ಪ್ರೀತಿಸುವಂತೆ ಕಾಡುತ್ತಿದ್ದ.

9ನೇ ಪುಟ ನೋಡಿ

ಶೇ 50ರಷ್ಟು ತೆರಿಗೆ ಪಾವತಿಸಲು ಆದೇಶ

ಪ್ರಜಾವಾಣಿ ವಾರ್ತೆ

ಮಂತ್ರಿ ಮಾಲ್

ಬೆಂಗಳೂರು: 'ಮಂತ್ರಿ ಸ್ಕ್ವೇರ್ ಮಾಲ್ ತನ್ನ ಆಸ್ತಿ ತೆರಿಗೆಯ ಬಾಕಿ ಮೊತ್ತದಲ್ಲಿನ ಶೇ 50ರಷ್ಟನ್ನು ಹತ್ತು ದಿನಗಳಲ್ಲಿ ಪಾವತಿಸಬೇಕು. ಬಾಕಿ ಪಾವತಿಸಿದ ನಂತರವೇ ಎಲ್ಲ ನಿರ್ಬಂಧಗಳನ್ನು ತೆರವುಗೊಳಿಸಿ ಪ್ರವೇಶಕ್ಕೆ ಅವಕಾಶ ಕಲ್ಪಿಸಬೇಕು' ಎಂದು ಸಿಟಿ ಸಿವಿಲ್ ನ್ಯಾಯಾಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಆದೇಶಿಸಿದೆ. ಈ ಸಂಬಂಧ ಮಂತ್ರಿ ಗ್ರೂಪ್ ಶಾಖೆಯಾದ ಅಭಿಷೇಕ್ ಪ್ರಾಪ್ ಬಿಲ್ಡ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಈ ಕುರಿತಂತೆ ಆದೇಶಿಸಿದೆ. ತೆರಿಗೆ ಬಾಕಿಯಲ್ಲಿ ಶೇ 50ರಷ್ಟನ್ನು 10 ದಿನಗಳಲ್ಲಿ ಪಾವತಿಸಿದರೆ ಇಡೀ ಮಾಲ್‌ನ ಬೀಗ ತೆರೆಯುವಂತೆ ಬಿಬಿಎಂಪಿಗೆ ಸೂಚಿಸಿದೆ. 2024ರ ಜುಲೈ 31 ರೊಳಗೆ ಉಳಿದ ಶೇ 50ರಷ್ಟು ಮೊತ್ತವನ್ನು ಪಾವತಿಸುವಂತೆ ಅರ್ಜಿದಾರರಿಗೆ ನಿರ್ದೇಶಿಸಿದೆ.

ಪ್ರಸಕ್ತ ವರ್ಷದ ಮೇ ವೇಳೆಗೆ, ಮಂತ್ರಿ ಸ್ಕ್ವೇರ್ ಮಾಲ್ ₹ 52 ಕೋಟಿ ಆಸ್ತಿ ತೆರಿಗೆಯನ್ನು ಪಾವತಿಸಬೇಕಿದೆ.

ನೀರಿನ ಅದಾಲತ್ ಇಂದು

ಬೆಂಗಳೂರು: ಜಲ ಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ಮೇ 16ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ನಡೆಯಲಿದೆ.

ವಾಯವ್ಯ-2, ವಾಯವ್ಯ-4, ಕೇಂದ್ರ 1-2, ಈಶಾನ್ಯ - 2, ಉತ್ತರ 1-2, ಉತ್ತರ 2-2, ದಕ್ಷಿಣ 1-2, ದಕ್ಷಿಣ 2–2, ನೈರುತ್ಯ -2, ನೈರುತ್ಯ -5, ಪೂರ್ವ 1-3 ಮತ್ತು ಪೂರ್ವ 2-3, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ಇತ್ಯಾದಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಸಾರ್ವಜನಿಕರು ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದು. ವಾಟ್ಸ್‌ಆ್ಯಪ್ (8762228888) ಸಂದೇಶದ ಮೂಲಕ ದೂರು ಸಲ್ಲಿಸಬಹುದು.

'110 ಹಳ್ಳಿಗಳಿಗೆ ಶೀಘ್ರ ಕಾವೇರಿ ನೀರು ಪೂರೈಕೆ'

ಪ್ರಜಾವಾಣಿ ವಾರ್ತೆ



ಹಾರೋಹಳ್ಳಿ ಬಳಿ ನಡೆಯುತ್ತಿರುವ ಕಾವೇರಿ 5ನೇ ಹಂತದ ಕಾಮಗಾರಿಯನ್ನು ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್‌ಪ್ರಸಾತ್ ಮನೋಹರ್ ಪರಿಶೀಲಿಸಿದರು.

ಬೆಂಗಳೂರು: 'ಕಾವೇರಿ 5ನೇ ಹಂತದ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಜಲಮಂಡಳಿ ನೀರು ಸರಬರಾಜಿಗೆ ಸಿದ್ಧತೆ ನಡೆಸಿದೆ. ಶೀಘ್ರದಲ್ಲೇ 110 ಗ್ರಾಮಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಿದೆ' ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಹಾರೋಹಳ್ಳಿ ಬಳಿ ನಡೆಯುತ್ತಿರುವ ಕಾವೇರಿ-5ನೇ ಹಂತದ ಕಾಮಗಾರಿಯನ್ನು ಪರಿಶೀಲಿಸಿ ಅವರು ಮಾತನಾಡಿದರು.

ಕೆಲವೇ ವಾರಗಳಲ್ಲಿ ಈ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಅದಕ್ಕೂ ಮುನ್ನ ಸಮರ್ಪಕವಾಗಿ ನೀರು ಪೂರೈಸಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕಿದೆ. ಹಾಗೆಯೇ ಹೊಸ ಸಂಪರ್ಕ ಕಲ್ಪಿಸಲು ನೋಂದಣಿ ಪ್ರಕ್ರಿಯೆಯನ್ನೂ ನಡೆಸಬೇಕಾಗಿದೆ' ಎಂದು ರಾಮ್‌ಪ್ರಸಾತ್ ತಿಳಿಸಿದರು.

'ಈ ಯೋಜನೆಯಿಂದ ನಗರಕ್ಕೆ 750 ಎಂಎಲ್‌ಡಿಯಷ್ಟು ಹೆಚ್ಚಿನ ನೀರು ಲಭ್ಯವಾಗಲಿದೆ. ಇದನ್ನು ಸಮರ್ಪಕವಾಗಿ ಬಳಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಎಲ್ಲ ಗ್ರಾಮಗಳಲ್ಲೂ ಜನರು ನೀರಿನ ಸಂಪರ್ಕ ಪಡೆಯುವಂತೆ ಅಧಿಕಾರಿಗಳು ಪ್ರೋತ್ಸಾಹಿಸಬೇಕು' ಎಂದು ಅವರು ಸೂಚಿಸಿದರು.

110 ಗ್ರಾಮಗಳಲ್ಲಿ ಕೆಲವೆಡೆ ಅನಧಿಕೃತವಾಗಿ ಸಂಪರ್ಕಗಳನ್ನು ನೀಡಿರುವ ಬಗ್ಗೆ ದೂರುಗಳು ಬಂದಿವೆ. ಈ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಅನಧಿಕೃತ ಸಂಪರ್ಕಗಳನ್ನು ಸಕ್ರಮಗೊಳಿಸಿ ಜಲಮಂಡಳಿಗೆ ಆದಾಯ ಬರುವಂತೆ ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

'ಹೊಸ ಸಂಪರ್ಕಗಳ ನೋಂದಣಿ ಸಮರ್ಪಕವಾಗಿ ಆದರೆ, ನೀರಿನ ಸದ್ಬಳಕೆಯೂ ಆಗುತ್ತದೆ, ಜಲಮಂಡಳಿಗೆ ಆದಾಯ ದೊರೆಯಲಿದೆ. ಇದು ಸಾಲ ಮರುಪಾವತಿಗೆ ಸಹಾಯವಾಗಲಿದೆ. ಹಾಗಾಗಿ ಅಧಿಕಾರಿಗಳು ಮನೆಬಾಗಿಲಿಗೆ ತೆರಳಿ ನೀರಿನ ಸಂಪರ್ಕ ಪಡೆಯುವಂತೆ ಜನರ ಮನವೊಲಿಸಬೇಕು' ಎಂದು ಸಲಹೆ ನೀಡಿದರು.

ಗರಿಷ್ಠ ವಯೋಮಿತಿ ಇಳಿಕೆ

ಪ್ರಜಾವಾಣಿ ವಾರ್ತೆ



ಎನ್‌.ಆರ್‌. ನಾರಾಯಣ ಮೂರ್ತಿ, ಕ್ರಿಸ್ ಗೋಪಾಲಕೃಷ್ಣನ್ ಹಾಗೂ ಡಾ. ಪ್ರತಿಮಾ ಮೂರ್ತಿ ಸಮಾಲೋಚನೆಯಲ್ಲಿ ತೊಡಗಿದ್ದಾರೆ – ಪ್ರಜಾವಾಣಿ ಚಿತ್ರ

ಇನ್ಫೊಸಿಸ್ ಪ್ರಶಸ್ತಿ

ಬೆಂಗಳೂರು: ವಿಜ್ಞಾನ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಸಂಶೋಧನೆಗೆ ನೀಡುವ 'ಇನ್ಫೊಸಿಸ್ ಪ್ರಶಸ್ತಿ'ಯ ಗರಿಷ್ಠ ವಯೋಮಿತಿಯನ್ನು 50 ವರ್ಷದಿಂದ 40 ವರ್ಷಕ್ಕೆ ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಇಳಿಕೆ ಮಾಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, 'ವಿಜ್ಞಾನ ಕ್ಷೇತ್ರದ ಸಾಧನೆಗೆ ಸಂಬಂಧಿಸಿದಂತೆ ಇನ್ನು ಮುಂದೆ 40ಕ್ಕಿಂತ ಕಡಿಮೆ ವಯಸ್ಸಿನ ಅಸಾಮಾನ್ಯ ಪ್ರತಿಭಾವಂತರನ್ನು ಗುರುತಿಸಿ, ಗೌರವಿಸಲಾಗುತ್ತದೆ. ಯುವ ಸಂಶೋಧಕರಿಗೆ ಅನ್ವೇಷಣೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವುದು ಈ ಕ್ರಮದ ಉದ್ದೇಶವಾಗಿದೆ. ವೃತ್ತಿಯ ಮಧ್ಯಭಾಗದಲ್ಲಿ ಇರುವವರನ್ನು ಗುರುತಿಸಿ, ಗೌರವಿಸುವುದಕ್ಕಿಂತ ವೃತ್ತಿಯ ಆರಂಭಿಕ ಹಂತಗಳಲ್ಲಿ ಇರುವವರನ್ನು ಗುರುತಿಸಿ ಗೌರವಿಸುವುದು ಉತ್ತಮವೆಂದು ನಿರ್ಧರಿಸಿದ್ದೇವೆ' ಎಂದು ಹೇಳಿದರು.

'ಮಾನವ ಕುಲಕ್ಕೆ ಪ್ರಯೋಜನಕಾರಿಯಾಗುವ ಅತ್ಯುತ್ತಮ ಸಂಶೋಧನೆಗಳನ್ನು ಗುರುತಿಸುವುದು, ಯುವ ಸಂಶೋಧಕರು ಮತ್ತು ವಿಜ್ಞಾನಿಗಳಾಗುವ ಬಯಕೆ ಹೊಂದಿರುವವರಿಗೆ ಮಾದರಿ ವ್ಯಕ್ತಿಗಳನ್ನು ಸೃಷ್ಟಿಸಿಕೊಡುವ ಪ್ರಶಸ್ತಿಯ ಮೂಲಭೂತ ಗುರಿಯಲ್ಲಿ ಯಾವುದೇ ಬದಲಾವಣೆಯಿಲ್ಲ' ಎಂದರು.

ದೇಶದಲ್ಲಿ ಇರಲು ಮನವಿ: ಇನ್ಫೊಸಿಸ್ ಸಂಸ್ಥೆಯ ಸಂಸ್ಥಾಪಕ ಹಾಗೂ ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟಿ ಎನ್.ಆರ್. ನಾರಾಯಣ ಮೂರ್ತಿ, 'ಪ್ರಶಸ್ತಿಗೆ ಭಾಜನರಾಗುವ ಭಾರತದ ಹೊರಗಡೆಯ ವ್ಯಕ್ತಿಗಳು ತಾವೇ ಆಯ್ಕೆ ಮಾಡಿಕೊಂಡ ಇಲ್ಲಿನ ಸಂಸ್ಥೆಯಲ್ಲಿ ಗರಿಷ್ಠ ಎರಡು ಭೇಟಿಯಲ್ಲಿ 30 ದಿನಗಳನ್ನು ಕಳೆಯುವಂತೆ ಮನವಿ ಮಾಡಲಾಗುತ್ತದೆ. ಸಂಸ್ಥೆಗಳಲ್ಲಿನ ಸಂಶೋಧನಾ ತಂಡಗಳ ಜತೆಗೆ ಸಮನ್ವಯ ಸಾಧಿಸಲು, ಸಮಾನ ಮನಸ್ಕರ ಒಂದು ಜಾಲವನ್ನು ರೂಪಿಸಲು ಇದರಿಂದ ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

'15 ವರ್ಷಗಳಲ್ಲಿ 92 ಮಂದಿಗೆ ಈ ಪ್ರಶಸ್ತಿ ನೀಡಲಾಗಿದೆ. ಪ್ರಶಸ್ತಿಯು ಚಿನ್ನದ ಪದಕ, ಪ್ರಶಸ್ತಿ ಪತ್ರ ಮತ್ತು 1 ಲಕ್ಷ ಅಮೆರಿಕನ್ ಡಾಲರ್ ಹೊಂದಿದೆ. ಪ್ರಶಸ್ತಿಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿದೆ. ನವೆಂಬರ್‌ನಲ್ಲಿ ಪ್ರಶಸ್ತಿಗೆ ಆಯ್ಕೆಯಾದವರನ್ನು ಘೋಷಿಸಲಾಗುತ್ತದೆ. ಜನವರಿ ತಿಂಗಳಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ' ಎಂದು ವಿವರಿಸಿದರು.

ಸಂಸ್ಥೆಯ ಟ್ರಸ್ಟಿಯೂ ಆಗಿರುವ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಉಪಸ್ಥಿತರಿದ್ದರು.

ಅರ್ಥಶಾಸ್ತ್ರಕ್ಕೆ ಪ್ರತ್ಯೇಕ ವಿಭಾಗ

'ಪ್ರಶಸ್ತಿ ಆಯ್ಕೆಗೆ ಸಂಬಂಧಿಸಿದಂತೆ ಇನ್ನು ಮುಂದೆ ಅರ್ಥಶಾಸ್ತ್ರವು ಒಂದು ಪ್ರತ್ಯೇಕ ವಿಭಾಗವಾಗಿ ಗುರುತಿಸಿಕೊಳ್ಳಲಿದೆ. ಈ ಮೊದಲು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಪ್ರಶಸ್ತಿಯನ್ನು ಸಮಾಜ ವಿಜ್ಞಾನ ವಿಭಾಗದಲ್ಲಿ ನೀಡಲಾಗುತ್ತಿತ್ತು. 2024ನೇ ಸಾಲಿನಿಂದ ಅರ್ಥಶಾಸ್ತ್ರ, ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ, ಮಾನವಿಕ ಮತ್ತು ಸಮಾಜ ವಿಜ್ಞಾನ, ಜೀವ ವಿಜ್ಞಾನ, ಗಣಿತ ವಿಜ್ಞಾನ ಹಾಗೂ ಭೌತವಿಜ್ಞಾನ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತದೆ' ಎಂದು ನಾರಾಯಣ ಮೂರ್ತಿ ಹೇಳಿದರು.

ಕೈಮಗ್ಗದ ವಸ್ತುಗಳ ಪ್ರದರ್ಶನ, ವಿಚಾರಸಂಕಿರಣ 17 ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ದೇಸಿ ಸಂಸ್ಥೆ ಹಾಗೂ ರಾಗಿ ಕಣದ ಸಹಯೋಗದಲ್ಲಿ ಇದೇ 17ರಿಂದ 21ರವರೆಗೆ ನಗರದ ಬೆಂಗಳೂರು ಅಂತರರಾಷ್ಟ್ರೀಯಕೇಂದ್ರದಲ್ಲಿ(ಬಿಐಸಿ)ಕೈಮಗ್ಗ–ಕರಕುಶಲವಸ್ತುಗಳ ಪ್ರದರ್ಶನ, ಹವಾಮಾನ ಬದಲಾವಣೆ ಕಾಲದಲ್ಲಿ ಸುಸ್ಥಿರ ಆಯ್ಕೆಗಳು ಮತ್ತು ಗ್ರಾಮೀಣ ಆದಾಯ ಮೂಲಗಳ ಕುರಿತ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ.

17ರಂದು ಬೆಳಿಗ್ಗೆ 11ಕ್ಕೆ ಕರ್ನಾಟಕ ರಾಜ್ಯ 7ನೇ ಹಣಕಾಸು ಆಯೋಗದ ಅಧ್ಯಕ್ಷ ಸುಧಾಕರರಾವ್ ಮೇಳಕ್ಕೆ ಚಾಲನೆ ನೀಡಲಿದ್ದಾರೆ. 19ರಂದು ಮಧ್ಯಾಹ್ನ 4.30ರಿಂದ ರಾತ್ರಿ 7ರವರೆಗೆ ನಡೆಯುವ ವಿಚಾರ ಸಂಕಿರಣದಲ್ಲಿ 'ಚರಕ' ಪ್ರಸನ್ನ ಅವರು ದಿಕ್ಸೂಚಿ ಭಾಷಣ ಮಾಡುವರು. ವಿವಿಧ ವಿಷಯಗಳ ತಜ್ಞರು ಉಪನ್ಯಾಸ ನೀಡುವರು.

'ಜನರ ಕಲೆ' ಶೀರ್ಷಿಕೆಯಡಿ ಗ್ರಾಮೀಣ ಕಲಾವಿದರು, ಖ್ಯಾತ ಚಿತ್ರಕಲಾವಿದರು ರಚಿಸಿದ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ. 19ರಿಂದ 21ರವರೆಗೆ ಪ್ರತಿ ದಿನ ಬೆಳಿಗ್ಗೆ 10.30ರಿಂದ ರಾತ್ರಿ 8ರವರೆಗೆ ಬಿಐಸಿ ಗ್ಯಾಲರಿಯಲ್ಲಿ ಈ ಚಿತ್ರ ಕಲಾ ಪ್ರದರ್ಶನವಿರುತ್ತದೆ. ಖ್ಯಾತ ಚಿತ್ರಕಲಾವಿದ ಜತಿನ್ ದಾಸ್ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಲಿದ್ದಾರೆ ಎಂದು ಚರಕದ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಪ್ರದರ್ಶನ-2024: ಅತಿಥಿಗಳು: ಲೋಕೇಶ್ ಆರ್. ಬೋರೇಗೌಡ, ಎಂ.ಆರ್. ಜಯರಾಂ, ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಬಿ.ಎಸ್. ರಾಮಪ್ರಸಾದ್, ಜಿ. ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

ಮಾಸದ ಮಾತು-4: 'ಎಲ್.ಎಸ್.ಎಸ್. ಅವರ ಚಾರಿತ್ರಿಕ ಬರಹಗಳು' ಕುರಿತು ಉಪನ್ಯಾಸ: ಎನ್.ಎಸ್. ಶ್ರೀಧರಮೂರ್ತಿ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸನಾಯಕ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಉಪಸ್ಥಿತಿ: ಬಿ.ಸಿ. ನಾಗೇಂದ್ರಕುಮಾರ್, ರುದ್ರೇಶ್ ಅದರಂಗಿ, ಆಯೋಜನೆ: ಸರ್ಕಾರಿ ಕಲಾ ಕಾಲೇಜು, ಕನ್ನಡ ಗೆಳೆಯರ ಬಳಗ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಿಗ್ಗೆ 10.30

ನಾಟಕೋತ್ಸವ-2024: 'ಕುರುಕ್ಷೇತ್ರ' ಮತ್ತು 'ರಕ್ತರಾತ್ರಿ' ಪೌರಾಣಿಕ ನಾಟಕ ಪ್ರದರ್ಶನ, ಆಯೋಜನೆ: ಓಂ ಶ್ರೀ ಸಾಯಿರಾಂ ಸಾಂಸ್ಕೃತಿಕ ಕಲಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11ರಿಂದ

'ಹಾಸನದ ಲೈಂಗಿಕ ದೌರ್ಜನ್ಯ ಪೆನ್‌ಡ್ರೈವ್ ಹಂಚಿಕೆ' ಮಾಯವಾಗುತ್ತಿದೆ ಲಿಂಗ ಸಂವೇದನೆ ನಮ್ಮ ಜವಾಬ್ದಾರಿಗಳೇನು ಸಮಾಲೋಚನಾ ಗೋಷ್ಠಿ: ಭಾಗವಹಿಸುವವರು: ಸಿ.ಎಚ್. ಹನುಮಂತರಾಯ, ಮಾವಳ್ಳಿ ಶಂಕರ್, ವಿಜಯಾ, ಡಾ. ವಸುಂಧರಾ ಭೂಪತಿ, ಇಂದಿರಾ ಕೃಷ್ಣಪ್ಪ, ಎನ್. ರಾಜಣ್ಣ, ಕೆ. ಷರೀಫಾ, ಆರ್. ಪೂರ್ಣಿಮಾ, ಅಕ್ಕೈ ಪದ್ಮಶಾಲಿ, ವಿನಯ್ ಶ್ರೀನಿವಾಸ್, ಬಿ.ಆರ್. ಮಂಜುನಾಥ್, ಹರೀಂದ್ರ, ನಿರ್ಮಲಾ, ಲೀಲಾವತಿ, ಆಯೋಜನೆ: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಸ್ಥಳ: ಸೌಹಾರ್ದ, ನಂ. 1, ಸಿಎಸ್‌ಐ ಕಾಂಪೌಂಡ್, ಮೊದಲನೇ ಅಡ್ಡರಸ್ತೆ, ಸುಬ್ಬಯ್ಯ ಸರ್ಕಲ್ ಬಳಿ, ಮಿಷನ್ ರಸ್ತೆ, ಮಧ್ಯಾಹ್ನ 2.30

'ಶುಕ್ರನಂದನೆ' ಪ್ರದರ್ಶನದ ಶತಕದ ಸಂಭ್ರಮಾಚರಣೆ: ಸಾನ್ನಿಧ್ಯ: ಸಚ್ಚಿದಾನಂದ ಭಾರತೀ ಸ್ವಾಮೀಜಿ, ಅಧ್ಯಕ್ಷತೆ: ಡಿ. ಸುರೇಂದ್ರ ಕುಮಾರ್, ಅತಿಥಿಗಳು: ವಿದ್ಯಾಭೂಷಣ, ನರಸಿಂಹ ನಾಯ್ಕ, ಮೋಹನ್ ಕಾರ್ಣಿಕ್, ಆಯೋಜನೆ: ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ ಹನುಮಗಿರಿ, ಮಲೆನಾಡು ಯಕ್ಷಾಭಿಮಾನಿ ಬಳಗ, ಬಿಇಎಲ್ ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ವಾದ್ಯವೈಭವ-2024: ಅತಿಥಿಗಳು: ಎನ್. ಕುಮಾರ್, ಟಿ.ವಿ. ಗೋಪಾಲಕೃಷ್ಣನ್, ಮೈಸೂರು ನಾಗಮಣಿ ಶ್ರೀನಾಥ್, ಸಂಗೀತ ಕಛೇರಿ: ನಾಗಸ್ವರ: ಮೈಸೂರು ವಿಜಯಸೂರ್ಯ, ಪಿಟೀಲು: ಪ್ರೇರಣಾ, ಮೃದಂಗ: ಪವನ್ ಮಾಧವ್ ಮಸೂರ್, ತವಿಲ್: ಪಿ.ಎಂ. ರಂಜಿತ್ ವಿನಾಯಕ್, ಮ್ಯಾಂಡೋಲಿನ್: ಪ್ರಸನ್ನ ಬಲ್ಲಾಳ್, ಪಿಟೀಲು: ಕಾರ್ತಿಕ್ ಕೌಶಿಕ್, ಮೃದಂಗ: ಎಸ್.ವಿ. ಬಾಲಕೃಷ್ಣ, ಘಟ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಸಂಜೆ 6

ಹರಿನಾಮ ಸಂಕೀರ್ತನೆ: ಶ್ರುತಿ ಸಗರ ಗುಲ್ಬರ್ಗ, ಹಾರ್ಮೋನಿಯಂ: ನರಸಿಂಹ ಕುಲಕರ್ಣಿ, ತಬಲಾ: ವಿಜಯೇಂದ್ರ ಸಗರ, ರವಿಶಂಕರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಪಿ. ಲಂಕೇಶ್ ಅವರ 'ಸಂಕ್ರಾಂತಿ' ನಾಟಕ ಪ್ರದರ್ಶನ: ನಿರ್ದೇಶನ: ಉದಯ ಸೋಸಲೆ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮಳೆ: ರಸ್ತೆಯೆಲ್ಲ ಗುಂಡಿಮಯ!

ಬೆಂಗಳೂರಿನ ವಿವಿಧೆಡೆ ಕೆಲವು ದಿನಗಳಿಂದ ಸುರಿದ ಮಳೆಗೆ ಹಲವು 'ರಸ್ತೆಗಳ ಬಣ್ಣ' ಬಯಲಾಗಿದೆ. ಹಲವೆಡೆ ಗುಂಡಿಗಳು ಬಾಯ್ದೆರೆದಿವೆ. ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ.



ಚೌಡೇಶ್ವರಿನಗರದ ಲಗ್ಗೆರೆ ಮುಖ್ಯರಸ್ತೆಯಲ್ಲಿ ಡಾಂಬರ್ ಕಿತ್ತು ಹೋಗಿದೆ



ವಿಜಯನಗರದ ಪಟ್ಟೆಗಾರ ಪಾಳ್ಯ 2ನೇ ಮುಖ್ಯ ರಸ್ತೆಯಲ್ಲಿ ಡಾಂಬರ್ ಕಿತ್ತು ಹೋಗಿರುವುದು



ಕೆ.ಆರ್.ಮಾರುಕಟ್ಟೆ ರಸ್ತೆಯಲ್ಲಿ ಮಾರುದ್ದದ ಗುಂಡಿ



ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ಸಣ್ಣ ಹೊಂಡವೇ ನಿರ್ಮಾಣವಾಗಿದೆ



ಟಿ.ದಾಸರಹಳ್ಳಿಯ ಮಾರುಕಟ್ಟೆ ರಸ್ತೆಗೆ ಸಂಪರ್ಕ ಕಲ್ಪಿಸುವ ಸರ್ವೀಸ್ ರಸ್ತೆಯಲ್ಲಿ ಬೃಹತ್ ಗುಂಡಿಯಾಗಿದ್ದು, ಗುರುತಿಗಾಗಿ ಗುಂಡಿ ಸುತ್ತಲು ಕಲ್ಲುಗಳನ್ನು ಇಡಲಾಗಿದೆ



ನಗರದ ಹೆಸರಘಟ್ಟಕ್ಕೆ ಸಂಪರ್ಕ ಕಲ್ಪಿಸುವ ಎಂಟನೇ ಮೈಲಿ ವೃತ್ತದಲ್ಲಿ ರಸ್ತೆಯ ಡಾಂಬರು ಕಿತ್ತು ಹೋಗಿರುವುದು

ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್, ಕಿಶೋರ್ ಕುಮಾರ್ ಬೋಳಾರ್, ಬಿ.ಎಚ್.ಶಿವಕುಮಾರ್

ಮುಂಗಾರು: 31ಕ್ಕೆ ಕೇರಳ ಪ್ರವೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ನೈರುತ್ಯ ಮುಂಗಾರು ಮೇ 31ರಂದು ಕೇರಳ ಕರಾವಳಿ ಪ್ರವೇಶಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ತಿಳಿಸಿದೆ.

'ನೈರುತ್ಯ ಮುಂಗಾರು ಪ್ರವೇಶಕ್ಕೆ ಪೂರಕವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮೇ 27ರಿಂದ ಜೂನ್ 4ರ ಒಳಗೆ ಯಾವುದೇ ದಿನದಂದು ಮುಂಗಾರು ಪ್ರವೇಶವಾಗುವುದು ವಾಡಿಕೆ. ಈ ಬಾರಿ ಬಹುತೇಕ ಜೂನ್ 1ರಂದೇ ಕೇರಳ ಕರಾವಳಿ ಪ್ರವೇಶಿಸಲಿದೆ' ಎಂದು ಇಲಾಖೆ ಮಹಾ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ.

ದೇಶದ ಹಲವೆಡೆ ಇತ್ತೀಚೆಗೆ ಬಿಸಿ ಗಾಳಿ ಹಾಗೂ ವಾಡಿಕೆಗಿಂತ ಅಧಿಕ ತಾಪಮಾನ ದಾಖಲಾಗಿ, ಜನರು ಪರಿತಪಿಸುವಂತಾಗಿತ್ತು. ಪ್ರಸಕ್ತ ಮುಂಗಾರಿನಲ್ಲಿ ವಾಡಿಕೆ ಮಳೆ ಬೀಳಲಿದೆ ಎಂದು ಐಎಂಡಿ ಹೇಳಿತ್ತು. ಈಗ, ವಾಡಿಕೆಯಂತೆಯೇ ಕೇರಳ ಕರಾವಳಿಗೆ ಮುಂಗಾರು ಪ್ರವೇಶಿಸುವ ಕುರಿತು ಮುನ್ಸೂಚನೆಯ ಕಾರಣ, ನಿರೀಕ್ಷೆಗಳು ಗರಿಗೆದರಿವೆ.

ಅಂಗಾಂಗ ದಾನ: ಮೂವರು ಸೈನಿಕರಿಗೆ ಮರುಜೀವ

ಚಂಡೀಗಢ (ಪಿಟಿಐ): ಮಿದುಳು ನಿಷ್ಕ್ರಿಯಗೊಂಡಿದ್ದ ನಿವೃತ್ತ ಸುಬೇದಾರ್ ಅವರ ಅಂಗಾಂಗ ದಾನಕ್ಕೆ ಅವರ ಕುಟುಂಬಸ್ಥರು ನಿರ್ಧರಿಸಿದ ಪರಿಣಾಮ ಅನಾರೋಗ್ಯಕ್ಕೆ ಒಳಗಾಗಿದ್ದ ಮೂವರು ಸೈನಿಕರು ಮರುಜೀವ ಪಡೆದಿದ್ದಾರೆ.

ಸುಬೇದಾರ್ ಅವರು ಮಂಗಳವಾರ ನಿಧನರಾದ ನಂತರ ಅವರ ಅಂಗಾಂಗಗಳನ್ನು ಭಾರತೀಯ ವಾಯುಪಡೆಯು ದೆಹಲಿಯ ಸೇನಾ ಆಸ್ಪತ್ರೆಗೆ ಸಾಗಿಸಿತು.

ಸುಬೇದಾರ್ ಅವರು 30 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದರು.

'ಆಘಾತಕ್ಕೆ ಒಳಗಾಗಿ ಸುಬೇದಾರ್ ಅವರ ಮಿದುಳು ನಿಷ್ಕ್ರಿಯವಾಗಿತ್ತು. ಅವರ ಕುಟುಂಬಸ್ಥರು ಮೂತ್ರಪಿಂಡ, ಕಾರ್ನಿಯಾ ಮತ್ತು ಯಕೃತ್ ದಾನ ಮಾಡಲು ನಿರ್ಧರಿಸಿದರು. ಇದರಿಂದ ಮೂವರು ಸೈನಿಕರಿಗೆ ಮರುಜೀವ ಬಂದಂತಾಗಿದೆ' ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗ್ರೀನ್ ಕಾರಿಡಾರ್ ವ್ಯವಸ್ಥೆ ಮೂಲಕ ಅಂಗಾಂಗಗಳನ್ನು ದೆಹಲಿಯ ಸೇನಾ ಆಸ್ಪತ್ರೆಗೆ ಒಂದು ಗಂಟೆಯ ಒಳಗಾಗಿ ಸಾಗಿಸಲಾಯಿತು ಎಂದು ತಿಳಿಸಿದೆ.



ಶ್ರೀ ಶಂಕರ ಸೇವಾ ಸಮಿತಿಯು ಇದೇ ಮೊದಲ ಬಾರಿಗೆ ದುಬೈ ನಗರದಲ್ಲಿ ಹಮ್ಮಿಕೊಂಡಿದ್ದ ಶಂಕರ ಜಯಂತಿ ಹಾಗೂ ರಾಮಾನುಜ ಜಯಂತಿ ಕಾರ್ಯಕ್ರಮವು ಅದ್ದೂರಿಯಾಗಿ ನಡೆಯಿತು. ಸಮಿತಿಯ ಲಕ್ಷ್ಮೀಶ್ ಅಜ್ಜಂಪುರ, ಶಿವರಾಂ ಭಟ್, ವಿಜಯ್ ನಾರಸಿಂಹ, ಸುರೇಶ, ಲಕ್ಷ್ಮೀಶ್ ರಮೇಶ್ ಭರದ್ವಾಜ, ಸನತ್ ರಾಮಚಂದ್ರ, ರಂಗಾಚಾರ್ ಹಾಗೂ ಸದಸ್ಯರ ಉಪಸ್ಥಿತಿಯಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆದವು



ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನ

18ಕ್ಕೆ ಕೋಟೆ ವೆಂಕಟರಮಣ ಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಇತಿಹಾಸ ಪ್ರಸಿದ್ಧ ಕೋಟೆ ವೆಂಕಟರಮಣಸ್ವಾಮಿ ಬ್ರಹ್ಮ ರಥೋತ್ಸವ ಮೇ 18ರಂದು ಜರುಗಲಿದೆ.

ಮಂಗಳವಾರ ವೆಂಕಟರಮಣ-ಸ್ವಾಮಿಗೆ ಅಭಿಷೇಕ, ರಕ್ಷಾಬಂಧನ ಕಳಶ ಸ್ಥಾಪನೆ, ಯಾಗಶಾಲಾ ಪ್ರವೇಶ, ಅಂಕುರಾರ್ಪಣ, ಧ್ವಜಾರೋಹಣ, ಕಲಶಾರ್ಚನೆ ನಡೆಯಿತು. ಬುಧವಾರ ಅಭಿಷೇಕ, ಪೂಜೆ, ಹೋಮ, ಹವನ, ಹೂವಿನ ಅಲಂಕಾರ ಮಹಾಮಂಗಳಾರತಿ ನಡೆದವು.

ಮೇ 16ರಂದು ಅಭಿಷೇಕ, ಗರುಡೋತ್ಸವ, ಮೇ 17ರಂದು ಅಭಿಷೇಕ, ಪೂಜೆ, ಹೋಮ ಹವನ, ಹೂವಿನ ಅಲಂಕಾರ ಗಜೇಂದ್ರ ಮೋಕ್ಷ ಕಾರ್ಯಕ್ರಮ ನಡೆಯಲಿದೆ.

ಶನಿವಾರ ಮಂಗಳ ವಾದ್ಯ, ತಮಟೆವಾದ್ಯ, ವೀರಗಾಸೆ, ಪೂಜಾ ಕುಣಿತ, ಕೀಲು ಕುದುರೆ ಸಕಲ ವಾದ್ಯಗಳೊಂದಿಗೆ ಸಾಗಿ ಊರಿನ ಪ್ರಮುಖ ಬೀದಿಗಳಲ್ಲಿ ಬ್ರಹ್ಮ ರಥೋತ್ಸವ ನಡೆಯಲಿದೆ. ಕೆ.ಆರ್. ಪುರ ಸುತ್ತ-ಮುತ್ತಲಿನ ಭಾಗದ ಗ್ರಾಮಸ್ಥರು ಪಾಲ್ಗೊಳ್ಳುವರು ಎಂದು ದೇವಸ್ಥಾನದ ಅಧ್ಯಕ್ಷ ಎಲ್.ಮುನಿಸ್ವಾಮಿ ಹೇಳಿದರು.

ಲಾಲ್‌ಬಾಗ್: ಸಸ್ಯ ಪ್ರಭೇದಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳಿಗೆ ಸಹಕಾರಿ

ಸಸ್ಯಗಳ ಮಾಹಿತಿಗೆ ಡಿಜಿಟಲ್ ರೂಪ

• ಖಲೀಲಅಹ್ಮದ ಶೇಖ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ನೂರಾರು ವರ್ಷಗಳಿಂದ ಬೆಳೆದು ನಿಂತಿರುವ ದೇಶ ವಿದೇಶಗಳ ಸಾವಿರಾರು ಸಸ್ಯ ಪ್ರಭೇದಗಳ ಮಾಹಿತಿ ಕೆಲವೇ ದಿನಗಳಲ್ಲಿ ಬೆರಳ ತುದಿಯಲ್ಲಿ ಸಿಗಲಿದೆ. ಇದಕ್ಕಾಗಿ 'ಸಸ್ಯಕಾಶಿ'ಗೆ ಡಿಜಿಟಲ್ ದಾಖಲಾತಿ ರೂಪ ನೀಡುವ ಕಾರ್ಯ ನಡೆಯುತ್ತಿದೆ.

ಲಾಲ್‌ಬಾಗ್ ಉದ್ಯಾನದಲ್ಲಿ-ರುವ ಸಸ್ಯ ಪ್ರಭೇದಗಳ ಸಂರಕ್ಷಿತ ಸಸ್ಯ ಮಾದರಿ ಸಂಗ್ರಹ ಮತ್ತು ವೈಜ್ಞಾನಿಕ ಅಧ್ಯಯನ ನಡೆಸಲು ಸಹಕಾರಿಯಾಗು-ವಂತೆ ಸಸ್ಯ ಪ್ರಭೇದಗಳ ಪರ್ಣ ಸಂಗ್ರಹ (ಹರ್ಬೇರಿಯಂ)' ಕೈಗೊಳ್ಳಲಾಗಿದೆ. ಉದ್ಯಾನದಲ್ಲಿನ ಎಲ್ಲ ಸಸ್ಯಗಳನ್ನು ಹೀಗೆ ಸಂಗ್ರಹಿಸುವ ಕೆಲಸ ನಡೆಯುತ್ತಿದೆ. ಈ ಹರ್ಬೇರಿಯಂ ಶೀಟ್‌ಗಳನ್ನು ಇಡಲು ಉತ್ತರಪ್ರದೇಶದ ಲಖನೌದಿಂದ ನಾಲ್ಕು ರ್‍ಯಾಕ್‌ಗಳನ್ನು ತರಿಸಲಾಗಿದೆ. ಅದರಲ್ಲಿ ಈ ಹರ್ಬೇರಿಯಂಗಳನ್ನು ಕ್ರಮ ಸಂಖ್ಯೆ ಆಧಾರಿತವಾಗಿ ಜೋಡಿಸಿಡಲಾಗುತ್ತಿದೆ.

ಸಸ್ಯದ ಮೂಲ ಹೆಸರು, ಉಗಮ ಸ್ಥಾನ, ದೇಶ, ಬೆಳವಣಿಗೆ, ಬೆಳೆಯುವ ಹವಾಗುಣ, ಹೂ–ಹಣ್ಣು ಮತ್ತು ಎಲೆಗಳು ಬಿಡುವ ಕಾಲ, ಅದರ ವೈಜ್ಞಾನಿಕ ಹೆಸರು ಸಹಿತ ಎಲ್ಲ ಮಾಹಿತಿಗಳು ಒಳಗೊಂಡಿರುತ್ತದೆ. ಜೊತೆಗೆ ಆ ಸಸ್ಯಗಳ ಜಿಪಿಎಸ್ ಆಧಾರಿತ ಛಾಯಾಚಿತ್ರಗಳನ್ನು ತೆಗೆದು ಸಂಗ್ರಹಿಸಿಡುವ ಕಾರ್ಯವೂ ನಡೆಯುತ್ತಿದೆ. ಇದು ಸಸ್ಯಗಳನ್ನು ಗುರುತಿಸಲು ಸಹಾಯಕವಾಗಲಿದೆ.

'ಜೀವವೈವಿಧ್ಯ ಶಾಸ್ತ್ರಜ್ಞ ಕೇಶವಮೂರ್ತಿ ಅವರ ನೇತೃತ್ವದ ವಿಜ್ಞಾನಿಗಳ ತಂಡವು ಕಳೆದ ಒಂದು ವರ್ಷದಿಂದ ದಾಖಲಾತಿ ಕಾರ್ಯ ನಡೆಸುತ್ತಿದೆ. ಇದು ಪೂರ್ಣಗೊಂಡ ಬಳಿಕ ಲಾಲ್‌ಬಾಗ್‌ನ ಸಸ್ಯ ಸಂಪತ್ತಿನ ಸಂಪೂರ್ಣ ಮಾಹಿತಿ 'ಪ್ಲಾಂಟ್ ವೆಲ್ತ್ ಆಫ್ ಲಾಲ್‌ಬಾಗ್' ಎಂಬ ಪುಸ್ತಕದ ಜೊತೆಗೆ ಕ್ಯೂ–ಆರ್ ಕೋಡ್ ರೂಪದಲ್ಲಿ ಲಭ್ಯವಾಗಲಿದೆ. ಇನ್ನು ಒಂದು ವರ್ಷದೊಳಗೆ ಈ ಕೆಲಸ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈಗಾಗಲೇ 950 ಹರ್ಬೇರಿಯಂಗಳನ್ನು ಸಂಗ್ರಹಿಸಲಾಗಿದೆ' ಎಂದು ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಎಂ. ಜಗದೀಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಸಸ್ಯವಿಜ್ಞಾನ ವಿದ್ಯಾರ್ಥಿಗಳಿಗೆ, ಗಿಡ–ಮರಗಳ ಬಗ್ಗೆ ಕುತೂಹಲ ಇರುವವರಿಗೆ, ಜೀವ ವೈವಿಧ್ಯ ಅಧ್ಯಯನಕಾರರಿಗೆ ಇದರಿಂದ ಅನುಕೂಲವಾಗಲಿದೆ. ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳನ್ನು ಸಂರಕ್ಷಿಸಲೂ ಈ ದಾಖಲಾತಿ ನೆರವಾಗಲಿದೆ. ಜಗತ್ತಿನ ಪ್ರಮುಖ ಸಸ್ಯೋದ್ಯಾನಗಳ ಜತೆ ಪ್ರಭೇದಗಳ ವಿನಿಮಯ ಯೋಜನೆ ನಡೆಸಲು ಸಹ ಸಾಧ್ಯವಾಗಲಿದೆ' ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಜಿ. ಕುಸುಮಾ ತಿಳಿಸಿದರು.





ಲಾಲ್‌ಬಾಗ್‌ನಲ್ಲಿ ಸಂಗ್ರಹಿಸಿರುವ ಹರ್ಬೇರಿಯಂ ಶೀಟ್‌ನ ಮಾದರಿಗಳು



ರ್‍ಯಾಕ್ ಒಂದರಲ್ಲಿ ಹರ್ಬೇರಿಯಂಗಳನ್ನು ಸಂಗ್ರಹಿಸಿ ಇಟ್ಟಿರುವುದು

ಹರ್ಬೇರಿಯಂ ಎಂದರೇನು?

'ಸಸ್ಯ ಪ್ರಭೇದಗಳ ವಿವಿಧ ಭಾಗಗಳನ್ನು ಒಣಗಿಸಿ ವ್ಯವಸ್ಥಿತವಾಗಿ ಸಂಗ್ರಹಿಸಿಡುವ ಮಾದರಿಗೆ ಹರ್ಬೇರಿಯಂ ಎಂದು ಕರೆಯಲಾಗುತ್ತದೆ. ಸಸ್ಯಗಳ ಹೂವು, ಹಣ್ಣು, ಕಾಯಿ, ಎಲೆಗಳನ್ನು ಸಂಗ್ರಹಿಸಿ ಅವುಗಳನ್ನು ಒಂದು ಹಾಳೆಯಲ್ಲಿ ಹೊಲಿಗೆ ಹಾಕಿ ಒಣಗಿಸಲಾಗುತ್ತದೆ. ಅದರಲ್ಲಿ ಸಸ್ಯದ ಕುರಿತ ಸಂಕ್ಷಿಪ್ತ ಮಾಹಿತಿ ಸೇರಿಸಲಾಗಿ-ರುತ್ತದೆ. ಸಸ್ಯಗಳನ್ನು ಗುರುತಿಸಲು ಈ ಪ್ರಕ್ರಿಯೆ ಸಹಾಯಕವಾಗುತ್ತದೆ' ಎಂದು ಕೇಶವಮೂರ್ತಿ ತಿಳಿಸಿದರು.

'ಒಂದು ಹರ್ಬೇರಿಯಂ ಶೀಟ್ ತಯಾರಿಸಲು 15ರಿಂದ 20 ದಿನಗಳು ಬೇಕಾಗುತ್ತದೆ' ಎಂದು ಮಾಹಿತಿ ನೀಡಿದರು.

ಅಂಕಿ ಅಂಶಗಳು

950 ಸಂಗ್ರಹಿಸಿರುವ ಹರ್ಬೇರಿಯಂಗಳ ಸಂಖ್ಯೆ

2,950 ಲಾಲ್‌ಬಾಗ್‌ನಲ್ಲಿರುವ ಸಸ್ಯ ಪ್ರಭೇದಗಳ ಸಂಖ್ಯೆ

₹6.50 ಲಕ್ಷ ಯೋಜನೆಗೆ ಈಗಾಗಲೇ ವಿನಿಯೋಗಿಸಿರುವ ಮೊತ್ತ

ತನಿಖೆ: ಸ್ಥಿತಿಗತಿ ವರದಿ ಕೇಳಿದ ಬಾಂಬೆ ಹೈಕೋರ್ಟ್

ಸಲ್ಮಾನ್ ನಿವಾಸದ ಬಳಿ ಗುಂಡಿನ ದಾಳಿ: ಆರೋಪಿ ಸಾವು



ಮುಂಬೈ(ಪಿಟಿಐ): ನಟ ಸಲ್ಮಾನ್ ಖಾನ್ ನಿವಾಸದ ಬಳಿ ಗುಂಡು ಹಾರಿಸಿದ ಪ್ರಕರಣದಲ್ಲಿ ಬಂಧಿತ ಆರೋಪಿಯೊಬ್ಬ ಪೊಲೀಸ್ ಕಸ್ಟಡಿಯಲ್ಲಿದ್ದಾಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಪ್ರಕರಣ ಕುರಿತು ನಡೆಯುತ್ತಿರುವ ತನಿಖೆಗೆ ಸಂಬಂಧಿಸಿದ ಸ್ಥಿತಿಗತಿ ವರದಿ ಸಲ್ಲಿಸುವಂತೆ ಬಾಂಬೆ ಹೈಕೋರ್ಟ್ ಬುಧವಾರ ಸೂಚಿಸಿದೆ.

ಬಂಧಿತ ಆರೋಪಿ ಆತ್ಮಹತ್ಯೆ ಮಾಡಿದ್ದಾರೆ ಎನ್ನಲಾದ ಪೊಲೀಸ್ ಠಾಣೆಗೆ ಸಂಬಂಧಿಸಿದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಪೊಲೀಸ್ ಅಧಿಕಾರಿಗಳ ಮೊಬೈಲ್ ಕರೆಗಳ ಮಾಹಿತಿಯನ್ನು ಸಂರಕ್ಷಿಸಿ ಇಡಬೇಕು ಎಂದೂ ಹೈಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಸಂದೀಪ್ ಮಾರ್ನೆ ಹಾಗೂ ನೀಲಾ ಗೋಖಲೆ ಅವರು ಇದ್ದ ರಜಾಕಾಲದ ನ್ಯಾಯಪೀಠ ಈ ನಿರ್ದೇಶನ ನೀಡಿತು.

ಮುಂಬೈ ಕ್ರೈಂ ಬ್ರ್ಯಾಂಚ್ ಪೊಲೀಸ್ ಲಾಕಪ್‌ನಲ್ಲಿದ್ದಾಗ, ಶೌಚಾಲಯದಲ್ಲಿ ಮೇ 1ರಂದು ಮೃತಪಟ್ಟಿದ್ದ ಆರೋಪಿ ಅನುಜ್ ಥಾಪನ್ ಎಂಬುವವರ ತಾಯಿ ರೀಟಾ ದೇವಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

ಅನುಜ್ ಆತ್ಮಹತ್ಯೆ ಮಾಡಿಕೊಂಡಿದ್ದಾಗಿ ಪೊಲೀಸರು ಹೇಳುತ್ತಿದ್ದರೆ, ಆತನನ್ನು ಹತ್ಯೆ ಮಾಡಲಾಗಿದೆ ಎಂದು ತಾಯಿ ರೀಟಾ ದೇವಿ ಆರೋಪಿಸಿದ್ದಾರೆ. ಈ ಕುರಿತು ಮೇ 3ರಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಅವರು, ಈ ಕೃತ್ಯವನ್ನು ಮುಚ್ಚಿ ಹಾಕಲು ಪೊಲೀಸರು ಯತ್ನಿಸುತ್ತಿದ್ದಾರೆ ಎಂದು ದೂರಿದ್ದಾರೆ.

ತನ್ನ ಮಗನ ಸಾವಿನ ಕುರಿತ ತನಿಖೆಯನ್ನು ಸಿಬಿಐಗೆ ವಹಿಸಲು ನಿರ್ದೇಶನ ನೀಡುವಂತೆಯೂ ಅವರು ಅರ್ಜಿಯಲ್ಲಿ ಕೋರಿದ್ದಾರೆ.

ಸಿಯುಇಟಿ–ಯುಜಿ: 75% ಹಾಜರಾತಿ

ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ–ಯುಜಿ) ಮೊದಲ ದಿನವಾದ ಬುಧವಾರ ಶೇ 75ಕ್ಕೂ ಹೆಚ್ಚು ಹಾಜರಾತಿ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ದೇಶದಾದ್ಯಂತ ನೂರಾರು ಕೇಂದ್ರಗಳಲ್ಲಿ ಪರೀಕ್ಷೆ ನಡೆಸಿತು.

ಆದರೆ, ತಾಂತ್ರಿಕ ದೋಷದ ಕಾರಣದಿಂದ ದೆಹಲಿಯ 258 ಕೇಂದ್ರಗಳಲ್ಲಿ ನಿಗದಿಯಾಗಿದ್ದ ನಾಲ್ಕು ಪತ್ರಿಕೆಗಳ ಪರೀಕ್ಷೆಯನ್ನು ಮೇ 29ಕ್ಕೆ ಮುಂದೂಡಲಾಗಿದೆ.

ಹಾಗೆಯೇ, ದೆಹಲಿಯಲ್ಲಿ ಮೇ 16,17 ಮತ್ತು 18ರಂದು ನಿಗದಿಯಾಗಿದ್ದ ಪರೀಕ್ಷೆ ಬರೆಯಲು ಸಿದ್ಧರಾಗಿದ್ದ ಅಭ್ಯರ್ಥಿಗಳು ಪರಿಷ್ಕೃತ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಸೂಚಿಸಿದೆ.

ರೆಫರಲ್ ಲ್ಯಾಬ್ಸ್: ಉಚಿತ ಆರೋಗ್ಯ ಶಿಬಿರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಸಂಬಂಧ ಇಲ್ಲಿನ ರೆಫರಲ್ ಲ್ಯಾಬ್ಸ್, ಸಮುದಾಯದ ನೆರವಿನಿಂದ ವಿವಿಧೆಡೆ ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿದ್ದು, ಈವರೆಗೆ 800ಕ್ಕೂ ಅಧಿಕ ಶಿಬಿರಗಳನ್ನು ನಡೆಸಿದೆ.

ಸಹಕಾರನಗರದಲ್ಲಿರುವ ಈ ಪ್ರಯೋಗಾಲಯ, ಎನ್‌ಎಬಿಎಲ್ (ನ್ಯಾಷನಲ್ ಅಕ್ರಿಡಿಯೇಶನ್ ಬೋರ್ಡ್ ಫಾರ್ ಲ್ಯಾಬರೋಟರೀಸ್) ಮಾನ್ಯತೆ ಪಡೆದಿದೆ. ಕೈಗಾರಿಕಾ ಪ್ರದೇಶ, ಕಾರ್ಪೊರೇಟ್ ಕಂಪನಿಗಳು, ಶಿಕ್ಷಣ ಸಂಸ್ಥೆಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳು, ಬ್ಯಾಂಕ್ ಒಳಗೊಂಡಂತೆ ವಿವಿಧ ಸರ್ಕಾರಿ ಮತ್ತು ಖಾಸಗಿ ಕಚೇರಿಗಳು ಸೇರಿ ವಿವಿಧ ಸಾರ್ವಜನಿಕ ಸ್ಥಳಗಳು ಹಾಗೂ ನೂರಕ್ಕೂ ಅಧಿಕ ಮಂದಿ ಒಂದೆಡೆ ಇರುವ ಕಡೆ ಈ ಪ್ರಯೋಗಾಲಯ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸುತ್ತಿದೆ.

ರಕ್ತ ಪರೀಕ್ಷೆ, ಅಧಿಕ ರಕ್ತದೊತ್ತಡ ಪರೀಕ್ಷೆ, ಇಸಿಜಿ, ಕಣ್ಣಿನ ತಪಾಸಣೆ, ದಂತ ಪರೀಕ್ಷೆ ಹಾಗೂ ವೈದ್ಯರೊಂದಿಗೆ ಸಮಾಲೋಚನೆಯನ್ನು ಶಿಬಿರದಲ್ಲಿ ನಡೆಸಲಾಗುತ್ತದೆ. ಈ ಎಲ್ಲ ಪರೀಕ್ಷೆ ಹಾಗೂ ಸಮಾಲೋಚನೆ ಉಚಿತವಾಗಿ ಇರಲಿದೆ. ಈ ತಪಾಸಣೆಗೆ ಒಳಗಾಗುವವರು ಸಮಗ್ರ ಪರೀಕ್ಷೆಗೆ ಇಚ್ಛಿಸಿದಲ್ಲಿ ನಿಗದಿತ ಶುಲ್ಕ ಪಡೆದು, ಪರೀಕ್ಷೆ ಮಾಡಲಾಗುತ್ತದೆ ಎಂದು ರೆಫರಲ್ ಲ್ಯಾಬ್ಸ್‌ನ ಬಿಸಿನೆಸ್ ಡೆವಲಪ್ಮೆಂಟ್ ಅಸೋಸಿಯೇಟ್ ಮಣಿಕಂದನ್ ಜೆ. ತಿಳಿಸಿದ್ದಾರೆ.

ಮಧುಮೇಹ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ ಹೆಚ್ಚಿನ ಚಿಕಿತ್ಸೆಯಿಲ್ಲದೆ ರೋಗವನ್ನು ವಾಸಿ ಮಾಡಬಹುದು. ಬೆಂಗಳೂರಿನಾದ್ಯಂತ ಮನೆಗೆ ತೆರಳಿ, ರಕ್ತದ ಮಾದರಿ ಪಡೆದು ಪರೀಕ್ಷೆ ಮಾಡುವ ವ್ಯವಸ್ಥೆಯೂ ನಮ್ಮಲ್ಲಿ ಇದೆ. ಉಚಿತ ಆರೋಗ್ಯ ತಪಾಸಣೆ ನಡೆಸಲು ಇಚ್ಛಿಸುವವರು ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

ಸಂಪರ್ಕಕ್ಕೆ: 9902160912 ಅಥವಾ 080 35216693

ಡಲ್ಲಾಸ್, ಅಟ್ಲಾಂಟ: ಜೋಯಾಲುಕ್ಕಾಸ್ ಹೊಸ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ಜೋಯಾಲುಕ್ಕಾಸ್ ಕಂಪನಿಯು ಎರಡು ಹೊಸ ಮಳಿಗೆ ಹಾಗೂ ಮೂರು ನವೀಕೃತ ಮಳಿಗೆಗಳ ಕಾರ್ಯಾರಂಭಕ್ಕೆ ಸಜ್ಜಾಗಿದೆ.

ಮೇ 18ರಂದು ಹೌಸ್ಟನ್‌ನಲ್ಲಿ ನವೀಕೃತ ಮಳಿಗೆಯ ಉದ್ಘಾಟನೆ ನಡೆಯಲಿದೆ. ಮೇ 26ರಂದು ಡಲ್ಲಾಸ್ ಹಾಗೂ ಜೂನ್ 2ರಂದು ಅಟ್ಲಾಂಟದಲ್ಲಿ ಹೊಸ ಮಳಿಗೆ ಲೋಕಾರ್ಪಣೆಗೊಳ್ಳಲಿದೆ. ಜೂನ್ 9ರಂದು ಷಿಕಾಗೊ ಹಾಗೂ ಜೂನ್ 15ರಂದು ನ್ಯೂಜೆರ್ಸಿಯಲ್ಲಿ ನವೀಕೃತ ಮಳಿಗೆಗಳ ಉದ್ಘಾಟನೆ ನಡೆಯಲಿದೆ. ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಆಲುಕ್ಕಾಸ್ ಅವರ ನೇತೃತ್ವದಡಿ ಅಮೆರಿಕದಲ್ಲಿ ಬ್ರ್ಯಾಂಡ್‌ನ ವಿಸ್ತರಣೆಯ ಕಾರ್ಯತಂತ್ರದ ಭಾಗವಾಗಿ ಮಹತ್ವದ ಹೆಜ್ಜೆ ಇದಾಗಿದೆ ಎಂದು ಕಂಪನಿ ತಿಳಿಸಿದೆ.

'ಅಮೆರಿಕದ ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಕಂಪನಿ ಮುಂದಾಗಿದೆ' ಎಂದು ಜೋಯಾಲುಕ್ಕಾಸ್ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಜಾನ್ ಪಾಲ್ ತಿಳಿಸಿದ್ದಾರೆ.

ಪುಣ್ಯಸ್ಮರಣೆಯಲ್ಲಿ ಭಾಗಿಯಾಗಲು ಅನ್ಸಾರಿಗೆ ಅನುಮತಿ

ನವದೆಹಲಿ (ಪಿಟಿಐ): ಜೈಲು ಶಿಕ್ಷೆಗೆ ಒಳಗಾಗಿರುವ ಉತ್ತರ ಪ್ರದೇಶ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ ಶಾಸಕ ಅಬ್ಬಾಸ್ ಅನ್ಸಾರಿ ಅವರಿಗೆ ಅವರ ತಂದೆ ಮುಖ್ತರ್ ಅನ್ಸಾರಿ ಅವರ ಪುಣ್ಯಸ್ಮರಣೆಯಲ್ಲಿ ಭಾಗವಹಿಸಲು ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ.

ಹಲವಾರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮುಖ್ತರ್ ಅನ್ಸಾರಿ ಅವರು ಮಾರ್ಚ್ 28ರಂದು ಹೃದಯಾಘಾತದಿಂದ ಮೃತಪಟ್ಟರು. ಅವರ ಪುಣ್ಯಸ್ಮರಣೆಯನ್ನು ಜೂನ್ 10ರಂದು ಉತ್ತರ ಪ್ರದೇಶದ ಗಾಜಿಪುರದಲ್ಲಿ ಆಯೋಜಿಸಲಾಗಿದೆ.

ಜೂನ್ 9ರಂದೇ ಅಬ್ಬಾಸ್ ಅವರನ್ನು ಗಾಜಿಪುರ ಜೈಲಿಗೆ ಸ್ಥಳಾಂತರಿಸಲು ಕೋರ್ಟ್ ಪೊಲೀಸರಿಗೆ ಸೂಚಿಸಿದೆ. ಜೂನ್ 11 ಮತ್ತು 12ರಂದು ಪೊಲೀಸ್ ವಶದಲ್ಲೇ ಅವರು ತಮ್ಮ ಕುಟುಂಬ ಸದಸ್ಯರ ಜೊತೆ ಸಮಯ ಕಳೆಯಲು ಅವಕಾಶ ಮಾಡಿಕೊಡುವಂತೆ ಮತ್ತು ಜೂನ್ 13ರಂದು ಕಾಸ್‌ಗಂಜ್ ಜೈಲಿಗೆ ಅವರನ್ನು ಮರಳಿಸುವಂತೆ ಕೂಡ ಕೋರ್ಟ್ ಸೂಚಿಸಿದೆ.

'ಅಪಘಾತ ಮಾರ್ಗ'ವಾದ ಬಳ್ಳಾರಿ ರಸ್ತೆ: ವರ್ಷದಿಂದ ವರ್ಷಕ್ಕೆ ಅಪಘಾತ ಪ್ರಕರಣಗಳು ಹೆಚ್ಚಳ

ವಿಮಾನ ನಿಲ್ದಾಣ: ತಲುಪುವುದೇ ಸಾಹಸ!

• ಆದಿತ್ಯ ಕೆ.ಎ.

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಬಳ್ಳಾರಿ ರಸ್ತೆಯು 'ಅಪಘಾತ ಮಾರ್ಗ'ವಾಗಿ ಬದಲಾಗಿದೆ. ಈ ರಸ್ತೆಯಲ್ಲಿ ವಾಹನ ದಟ್ಟಣೆ ಮಾತ್ರ ಇರುವುದಿಲ್ಲ. ದಿನದಿಂದ ದಿನಕ್ಕೆ ಅಪಘಾತ ಪ್ರಕರಣಗಳೂ ಹೆಚ್ಚುತ್ತಿವೆ. ಸಾವಿನ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಎಂದು ಸಂಚಾರ ಪೊಲೀಸರು ಆತಂಕ ವ್ಯಕ್ತಪಡಿಸಿದ್ದಾರೆ. ಮಾರ್ಗದ ಕೆಲವು ಜಂಕ್ಷನ್‌ಗಳಲ್ಲಿ ವಾಹನ ಚಾಲನೆಯು ಸವಾಲಿನಿಂದ ಕೂಡಿದೆ.

ದಟ್ಟಣೆ ನಿಯಂತ್ರಣಕ್ಕೆ ಸಂಚಾರ ಪೊಲೀಸರು ಬಿಗಿ ಕ್ರಮ ಕೈಗೊಂಡಿದ್ದರೂ ಅಪಘಾತ ಪ್ರಕರಣಗಳು ತಗ್ಗುತ್ತಿಲ್ಲ. ವಿಮಾನ ನಿಲ್ದಾಣವು ಮೆಜೆಸ್ಟಿಕ್‌ನಿಂದ 34 ಕಿ.ಮೀ ದೂರವಿದ್ದು ಈ ಮಾರ್ಗದ ಹಲವು ಜಂಕ್ಷನ್‌ಗಳಲ್ಲಿ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿವೆ.

ಹೆಬ್ಬಾಳ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಏರಿಕೆಯಾಗುತ್ತಿದ್ದು, ವಿಮಾನ ನಿಲ್ದಾಣ ಹಾಗೂ ಈ ಮಾರ್ಗದ ಅಕ್ಕಪಕ್ಕದ ತಮ್ಮ ವಾಸದ ಬಡಾವಣೆಗಳಿಗೆ ತಲುಪುವುದೇ ಸಾಹಸ ವಾಗುತ್ತಿದೆ! ಕೃಷಿ ವಿಶ್ವವಿದ್ಯಾಲಯ, ಯಲಹಂಕ ಉಪನಗರ, ಬಳ್ಳಾರಿ ಕಡೆಗೆ ತೆರಳವುದೂ ಕಷ್ಟವಾಗಿದೆ.

ವಾಹನಗಳು ಅತಿವೇಗವಾಗಿ ಚಲಿಸುತ್ತಿದ್ದು ಅಪಘಾತಕ್ಕೆ ಕಾರಣವೆಂದು ಪೊಲೀಸರು ಹೇಳಿದ್ದಾರೆ. ಅತಿವೇಗವಾಗಿ ತೆರಳುವ ವಾಹನಗಳನ್ನು ಪತ್ತೆಹಚ್ಚಲು 8 ಸ್ಥಳಗಳಲ್ಲಿ ಸ್ವಯಂ ಚಾಲಿತ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಅತಿವೇಗವಾಗಿ ಸಂಚರಿಸುವ ವಾಹನಗಳನ್ನು ಕ್ಯಾಮೆರಾಗಳೇ ಪತ್ತೆಹಚ್ಚುತ್ತಿವೆ. ಅಲ್ಲದೇ ದಟ್ಟಣೆ ನಿಯಂತ್ರಣಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಪೊಲೀಸರು ಹೇಳಿದರು.



ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಕಂಡುಬರುವ ವಾಹನ ದಟ್ಟಣೆ.



ವಿಮಾನ ನಿಲ್ದಾಣ ರಸ್ತೆಯಲ್ಲಿ ವಾಹನಗಳ ವೇಗಕ್ಕೆ ಮಿತಿ ಹಾಕಲಾಗಿದೆ. ಗಂಟೆಗೆ 80 ಕಿ.ಮೀಗಿಂತ ಹೆಚ್ಚು ವೇಗದಲ್ಲಿ ಸಾಗಿದರೆ ಸ್ವಯಂಚಾಲಿತವಾಗಿ ದಂಡ ಬೀಳಲಿದೆ.

ಎಂ.ಎನ್.ಅನುಚೇತ್, ಜಂಟಿ ಪೊಲೀಸ್ ಆಯುಕ್ತ, ಸಂಚಾರ ವಿಭಾಗ

2021ರಲ್ಲಿ ಹೆಬ್ಬಾಳ ರಸ್ತೆಯಲ್ಲಿ 43 ಮಂದಿ ಮೃತಪಟ್ಟಿದ್ದರು. ಅದೇ 2023ರಲ್ಲಿ 87 ಸವಾರರು ಮೃತಪಟ್ಟಿದ್ದಾರೆ. ಈ ವರ್ಷ ನಾಲ್ಕು ತಿಂಗಳ ಅವಧಿಯಲ್ಲೇ 30 ಮಂದಿ ಮೃತರಾಗಿದ್ದಾರೆ.

ಹೆಬ್ಬಾಳ ಮಾರ್ಗದಲ್ಲಿ ಮೆಟ್ರೊ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿದ್ದು, ಅಲ್ಲಲ್ಲಿ ಬ್ಯಾರಿಕೇಡ್ ಹಾಕಲಾಗಿದೆ. ಗುಂಡಿಗಳು ಬಿದ್ದು ರಸ್ತೆಯೂ ಅಧ್ವಾನ ಸ್ಥಿತಿಯಲ್ಲಿದೆ. ಇದೂ ಅಪಘಾತಕ್ಕೆ ಕಾರಣವಾಗುತ್ತಿದೆ ಎಂದು ಸವಾರರು ದೂರಿದ್ದಾರೆ.

ಸರಿಯಾದ ಸಮಯಕ್ಕೆ ವಿಮಾನ ನಿಲ್ದಾಣ ತಲುಪಬೇಕಿದ್ದರೆ ಪ್ರಯಾಣದ ಅವಧಿ ಹೊರತುಪಡಿಸಿ ಎರಡು ತಾಸು ಮೊದಲೇ ಮನೆಯಿಂದ ಹೊರಡಬೇಕಿದೆ ಎಂದು ಪ್ರಯಾಣಿಕರೊಬ್ಬರು ಅಳಲು ತೋಡಿಕೊಳ್ಳುತ್ತಾರೆ.

ಕಾಮಗಾರಿ ತಂದ ಫಜೀತಿ: ಹೆಬ್ಬಾಳ–ಕೆ.ಆರ್. ಪುರ ಮೇಲ್ಸೇತುವೆಗೆ ಎರಡು ಹೊಸ ಟ್ರ್ಯಾಕ್ ಅಳವಡಿಸುವ ಕಾಮಗಾರಿಯನ್ನು ಬಿ.ಡಿ.ಎ ಕೈಗೆತ್ತಿಕೊಂಡಿದ್ದು, ಹೆಬ್ಬಾಳ ಮೇಲ್ಸೇತುವೆಯ ಕೆ.ಆರ್. ಪುರ ಅಪ್ ರ್‍ಯಾಂಪ್ ಸಂಪೂರ್ಣ ಮುಚ್ಚಲಾಗಿದೆ. ಇದರಿಂದ ಸಮಸ್ಯೆ ಮತ್ತಷ್ಟು ತೀವ್ರವಾಗಿದೆ. ಕಾಮಗಾರಿ ಮುಕ್ತಾಯವಾಗಲು ನಾಲ್ಕರಿಂದ ಐದು ತಿಂಗಳು ಬೇಕಿದ್ದು ಅಲ್ಲಿಯವರೆಗೂ ಇದೇ ರೀತಿಯ ಸಮಸ್ಯೆ ಎದುರಿಸಬೇಕಾಗಿದೆ ಎಂದು ಚಾಲಕರು ಹೇಳುತ್ತಾರೆ.

ಈ ಮಾರ್ಗದಲ್ಲಿ ಹಲವು ಟ್ರಾವೆಲ್ ಕಂಪನಿಗಳ ಬಸ್‌ಗಳು ಪ್ರಮುಖ ರಸ್ತೆಯನ್ನೇ ಪ್ಲಾಟ್ ಫಾರ್ಮ್‌ನಂತೆ ಬಳಸುತ್ತಿವೆ. ಇದರಿಂದಲೂ ಸಮಸ್ಯೆ ಆಗುತ್ತಿದೆ. ವಿಂಡ್ಸರ್ ಮ್ಯಾನರ್ ಸೇತುವೆ, ಕಾವೇರಿ ಥಿಯೇಟರ್, ಗುಟ್ಟಹಳ್ಳಿ ಪ್ಯಾಲೇಸ್ ಸಮೀಪದಿಂದ ಮೇಖ್ರಿ ವೃತ್ತ ಮತ್ತು ಹೆಬ್ಬಾಳದ ವರೆಗೆ ಸಂಚಾರ ದಟ್ಟಣೆ ಸಾಮಾನ್ಯವಾಗಿದೆ.

ಕಳೆದ ಕೆಲವು ತಿಂಗಳಿಂದ ಮೇಖ್ರಿ ವೃತ್ತದಲ್ಲಿ ಬಸ್‌ಗಳ ನಿಲುಗಡೆಗೆ ಅವಕಾಶ ನೀಡುತ್ತಿಲ್ಲ. ಮೇಖ್ರಿ ವೃತ್ತದಿಂದ ಮುಂದಿರುವ ನಿಲ್ದಾಣಗಳಲ್ಲಿ ಬಸ್ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಈ ವೃತ್ತದ ಸುತ್ತಮುತ್ತ ತುಸು ಸಮಸ್ಯೆ ತಗ್ಗಿದೆ. ಆದರೆ, ಅರಮನೆ ಮೈದಾನದಲ್ಲಿ ಯಾವುದಾದರೂ ಪಕ್ಷದ ರಾಜಕೀಯ ಸಮಾವೇಶ ನಡೆದರೆ ವಾಹನ ದಟ್ಟಣೆಗೆ ಕಾರಣವಾಗುತ್ತಿದೆ.

ನಗರದಲ್ಲಿ ಸಂಭವಿಸಿದ ಅಪಘಾತ ಪ್ರಕರಣಗಳು, ಮೃತರ ಹಾಗೂ ಗಾಯಾಳು ಸಂಖ್ಯೆ

ವರ್ಷ	ಅಪಘಾತ ಪ್ರಕರಣಗಳು	ಗಂಭೀರ ಗಾಯಾಳು	ಮೃತರು	ಅಪಾಯದಿಂದ ಪಾರಾದವರು	ಗಾಯಾಳು
2021	3,213	621	654	2,592	2,820
2022	3,822	752	772	3,070	3,189
2023	4,974	882	910	4,092	4,191
2024(ಏಪ್ರಿಲ್ 30ರ ತನಕ)	1,633	304	310	1,329	1,376

ವಿಮಾನ ನಿಲ್ದಾಣ ರಸ್ತೆಯಲ್ಲಿ ಸಂಭವಿಸಿದ ಅಪಘಾತ ಪ್ರಕರಣಗಳು, ಮೃತರ ಹಾಗೂ ಗಾಯಾಳು ಸಂಖ್ಯೆ

ವರ್ಷ	ಅಪಘಾತ ಪ್ರಕರಣಗಳು	ಗಂಭೀರ ಗಾಯಾಳು	ಮೃತರು	ಅಪಾಯದಿಂದ ಪಾರಾದವರು	ಗಾಯಾಳು
2021	239	40	43	199	244
2022	278	70	73	208	247
2023	322	85	87	237	278
2024(ಏಪ್ರಿಲ್ 30ರ ತನಕ)	110	29	30	81	111

ಸುದ್ದಿ 2 ನಿಮಿಷ

ವಾಯು ಗುಣಮಟ್ಟ ಮಾಪನ ಕಡ್ಡಾಯ: ಹೈಕೋರ್ಟ್

ಬೆಂಗಳೂರು: 'ಕೈಗಾರಿಕಾ ಮತ್ತು ಜನಸಂದಣಿ ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟವನ್ನು ನಿರಂತರವಾಗಿ ಅಳೆಯಬಲ್ಲ ಸ್ವಯಂಚಾಲಿತ ನಿಗಾ ವ್ಯವಸ್ಥೆ ಕಡ್ಡಾಯವಾಗಿ ಜಾರಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು' ಎಂದು ಹೈಕೋರ್ಟ್, ರಾಜ್ಯ ಪರಿಸರ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಆದೇಶಿಸಿದೆ.

'ಬಾಳೆ ಕಾಯಿ ಚಿಪ್ಸ್ ತಯಾರಿಕೆ, ಕಾಫಿ ಬೀಜ ಪುಡಿ ಮಾಡುವ ಘಟಕದಿಂದ ಮಾಲಿನ್ಯ ಉಂಟಾಗುತ್ತಿದೆ' ಎಂದು ಆಕ್ಷೇಪಿಸಿ ಶೃಂಗೇರಿ ನಿವಾಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ಈ ಕುರಿತಂತೆ ಆದೇಶಿಸಿದರು.

'ದೇಶದ ನಿವಾಸಿಗಳು ಮಾಲಿನ್ಯಯುಕ್ತ ಪರಿಸರದಲ್ಲಿ ರೋಗದಿಂದ ಬಳಲಬಾರದು. ಎಲ್ಲರಿಗೂ ಮಾಲಿನ್ಯ ಮುಕ್ತ ವಾತಾವರಣ ಲಭ್ಯವಾಗಲು ಕೆಎಸ್‌ಪಿಸಿಬಿ ವಾಯು ಮತ್ತು ಜಲ ಕಾಯ್ದೆ ನಿರ್ವಹಿಸುವ ಸೂಕ್ತ ವ್ಯವಸ್ಥೆಯನ್ನು ಜಾರಿಗೆ ತರಬೇಕಿದೆ. ಆದ್ದರಿಂದ, ರಾಜ್ಯದಾದ್ಯಂತ ವಾಯು ಗುಣಮಟ್ಟ ನಿಗಾ ವ್ಯವಸ್ಥೆಯ ಕುರಿತಾದ ವಿಸ್ತೃತ ಯೋಜನಾ ವರದಿಯನ್ನು ಆರು ವಾರಗಳಲ್ಲಿ ಸಲ್ಲಿಸಿ' ಎಂದು ಕೆಎಸ್‌ಪಿಸಿಬಿಗೆ ಸೂಚಿಸಿದರು.

'ಅರ್ಜಿದಾರರು ಆಕ್ಷೇಪಿಸಿರುವ ಘಟಕವು ತನ್ನ ಕಾರ್ಯ ನಿರ್ವಹಿಸಲು ಸೂಕ್ತ ಪರವಾನಗಿ, ನಿರಾಕ್ಷೇಪಣಾ ಪ್ರಮಾಣ ಪತ್ರ ಅಥವಾ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಅಗತ್ಯವಿದೆ' ಎಂದು ನಿರ್ದೇಶಿಸಿದೆ.



ಪತ್ನಿಯ ಕ್ರೌರ್ಯ ಆರೋಪ ತಳ್ಳಿ ಹಾಕಿದ ನ್ಯಾಯಾಲಯ

ಬೆಂಗಳೂರು: 'ಪತ್ನಿ ಕ್ರೌರ್ಯ ಎಸಗುತ್ತಿದ್ದಾಳೆ' ಎಂದು ಆಕ್ಷೇಪಿಸಿ ಪತಿ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿ ವಿಚ್ಛೇದನ ಮಂಜೂರು ಮಾಡಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ತಳ್ಳಿ ಹಾಕಿದೆ. ಈ ಸಂಬಂಧ 46 ವರ್ಷದ ಮಹಿಳೆ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ಅನಂತ್ ರಾಮನಾಥ ಹೆಗ್ಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

'ಈ ಪ್ರಕರಣದಲ್ಲಿ ಪತ್ನಿ ಉದ್ದೇಶಪೂರ್ವಕವಾಗಿ ಪತಿಯನ್ನು ತೊರೆದಿದ್ದಾಳೆ ಮತ್ತು ಕ್ರೌರ್ಯದ ಆಧಾರದಲ್ಲಿ ಪತಿಗೆ ವಿಚ್ಛೇದನ ಸಿಗಲಿ ಎಂದು ಕೆಟ್ಟದಾಗಿ ವರ್ತಿಸಿದ್ದಾಳೆ ಎಂಬುದಕ್ಕೆ ಆಧಾರವಿಲ್ಲ. ವೈವಾಹಿಕ ಕ್ರೌರ್ಯ ಎಸಗಿರುವುದು ಸಾಬೀತಾದರೆ ಮಾತ್ರ ವಿಚ್ಛೇದನ ನೀಡಲು ಸಾಧ್ಯ. ಹಾಲಿ ಪ್ರಕರಣದಲ್ಲಿ ಅದು ಸಾಬೀತಾಗಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ವಿವಾಹ ಅನೂರ್ಜಿತಗೊಳಿಸುವಂತೆ ಕೋರಿ ಪತಿ ಸಲ್ಲಿಸಿದ್ದ ಅರ್ಜಿಯನ್ನು ಸ್ಥಳೀಯ ಕೌಟುಂಬಿಕ ನ್ಯಾಯಾಲಯ ಪುರಸ್ಕರಿಸಿತ್ತು. 'ಪತ್ನಿ, ಪತಿಯ ವಿರುದ್ಧ ಹಲವು ಪ್ರಕರಣ ದಾಖಲಿಸಿದ್ದಾರೆ. ಮಧ್ಯಸ್ಥಿಕೆಯ ಹೊರತಾಗಿಯೂ ಆಕೆ ಪತಿಯ ಜೊತೆ ಸೇರಲು ಬಯಸಿಲ್ಲ. ಹೀಗಾಗಿ, ಪತ್ನಿ ನನ್ನ ಮೇಲೆ ಕ್ರೌರ್ಯ ಎಸಗಿದ್ದಾಳೆ ಎಂಬ ಪತಿಯ ಆರೋಪ ಸಾಬೀತಾಗಿದೆ. ವಿಚ್ಛೇದನ ನೀಡಲಾಗಿದೆ' ಎಂದು ಕೌಟುಂಬಿಕ ನ್ಯಾಯಾಲಯ ಉಲ್ಲೇಖಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಉಪಟಳ ನೀಡುತ್ತಿದ್ದ ಕಾಡಾನೆ ಸೆರೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಸಿದ್ದಾಪುರ ಭಾಗದಲ್ಲಿ ಜನವಸತಿ ಪ್ರದೇಶಗಳತ್ತ ಪದೇ ಪದೇ ದಾಳಿ ನಡೆಸುತ್ತಿದ್ದ 'ದಕ್ಷ' ಎಂಬ ಹೆಸರಿನ ಗಂಡಾನೆಯನ್ನು ಬುಧವಾರ ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದರು.

30 ವರ್ಷದ ಈ ಆನೆ ಸೆರೆಗೆ ಮಂಗಳವಾರದಿಂದ ಒಟ್ಟು 8 ಸಾಕಾನೆಗಳ ನೆರವಿನಿಂದ ನೂರಕ್ಕೂ ಅಧಿಕ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದರು.

ಎಮ್ಮೆಗುಂಡಿ ಬಳಿ ಪತ್ತೆಯಾದ ಈ ಆನೆಯ ಬೆನ್ನತ್ತಿದ ಸಿಬ್ಬಂದಿ 5 ಕಿ.ಮೀ ದೂರದವರೆಗೂ ಸಾಗಿ, ಮಾಲ್ದಾರೆ ಅರಣ್ಯ ಪ್ರದೇಶದ ಗಡಿಯಲ್ಲಿ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿದಿದ್ದಾರೆ. ಸಮೀಪದ ಕೆರೆಯೊಂದರಲ್ಲಿ ಒರಗಿದ ಈ ಆನೆಗೆ ರೇಡಿಯೊ ಕಾಲರ್ ಅಳವಡಿಸಲಾಗಿದೆ. ಅಲ್ಲಿಂದ 80 ಕಿ.ಮೀ. ದೂರದ ನಾಗರಹೊಳೆಯ ಬಿಸಿಲವಾಡಿ ಕೆರೆಯ ಸಮೀಪ ಇದನ್ನು ಬಿಡಲಾಗುವುದು ಎಂದು ಡಿಸಿಎಫ್ ಜಗನ್ನಾಥ್ ತಿಳಿಸಿದರು.

'ಸಾಕಾನೆ ಶಿಬಿರಗಳಲ್ಲಿ ಆನೆಗಳ ಸಂಖ್ಯೆ ಹೆಚ್ಚಿರುವುದರಿಂದ ಈ ಕಾಡಾನೆಯನ್ನು ಮತ್ತೆ ಕಾಡಿಗೆ ಬಿಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಸಿದ್ದಾಪುರ ಭಾಗದಲ್ಲಿ ಉಪಟಳ ನೀಡುತ್ತಿರುವ 'ಆಕಾಂಕ್ಷಾ' ಮತ್ತು 'ಮೀರಾ' ಎಂಬ ಕಾಡಾನೆಗಳಿಗೂ ರೇಡಿಯೊ ಕಾಲರ್ ಅಳವಡಿಸಲು ಕಾರ್ಯಾಚರಣೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.



ಕೊಡಗು ಜಿಲ್ಲೆಯ ಸಿದ್ದಾಪುರ ಭಾಗದಲ್ಲಿ ಉಪಟಳ ನೀಡುತ್ತಿದ್ದ 'ದಕ್ಷ' (ಮಧ್ಯದಲ್ಲಿರುವುದು) ಹೆಸರಿನ ಕಾಡಾನೆಯನ್ನು 'ಮಹೇಂದ್ರ' ಮತ್ತು 'ಭೀಮ' ಸಾಕಾನೆಗಳ ಸಹಾಯದಿಂದ ಅರಣ್ಯ ಇಲಾಖೆ ಸಿಬ್ಬಂದಿ ಬುಧವಾರ ಸೆರೆ ಹಿಡಿದರು

6ನೇ ಮಹಡಿಯಿಂದ ಜಿಗಿದು ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯ ಕಾಲೇಜೊಂದರ ಕಟ್ಟಡದ 6ನೇ ಮಹಡಿಯಿಂದ ಜಿಗಿದು ಎಂಜಿನಿಯರಿಂಗ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆಂಧ್ರಪ್ರದೇಶದ ಕರ್ನೂಲಿನ ಕರಸಾಲ ರಾಹುಲ್ (21) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

ರಾಹುಲ್ ಅವರು ಬಿ.ಇ ಕಂಪ್ಯೂಟರ್ ಸೈನ್ಸ್‌ನಲ್ಲಿ 5ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಮಂಗಳವಾರ ಕಾಲೇಜಿನಲ್ಲಿ ಪರೀಕ್ಷೆಯಿತ್ತು. ಬೆಳಿಗ್ಗೆ ಎಂದಿನಂತೆಯೇ ಕಾಲೇಜಿಗೆ ಬಂದಿದ್ದರು. 10 ಗಂಟೆಯ ಸುಮಾರಿಗೆ ಕಾಲೇಜಿನ 6ನೇ ಮಹಡಿಗೆ ತೆರಳಿದ ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಪೋಷಕರು ದೂರು ನೀಡಿದ್ದು ತನಿಖೆ ನಡೆಸಲಾಗುತ್ತಿದೆ. ತನಿಖೆಯ ನಂತರವೇ ಸಾವಿಗೆ ಕಾರಣ ತಿಳಿಯಲಿದೆ ಎಂದು ಮೂಲಗಳು ಹೇಳಿವೆ.

ರಾಹುಲ್ ತಂದೆ ವಿದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಹುಲ್ ತನ್ನ ತಾಯಿಯೊಂದಿಗೆ ನಗರದ ಕೂಡ್ಲುವಿನ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಪರೀಕ್ಷೆಗೆ ತಡವಾಗಿ ಬಂದ ಕಾರಣ ಪ್ರವೇಶ ನಿರಾಕರಿಸಿರುವ ಆರೋಪವಿದೆ. ಪರೀಕ್ಷೆಗೆ ತಡವಾಗಿ ಬಂದಿದ್ದಕ್ಕಾಗಿ ನಿಂದಿಸಿದ್ದರಿಂದ ನೊಂದಿದ್ದ ಎನ್ನಲಾಗುತ್ತಿದೆ. ಆದರೆ, ಪೊಲೀಸರು ಈ ಬಗ್ಗೆ ದೃಢಪಡಿಸಿಲ್ಲ.

ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಅಪಘಾತದಲ್ಲಿ ಸಾವು

ಬೆಂಗಳೂರು: ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ನೇಪಾಳದ ಕವಿ ಸರ್ಕಿ (38) ಮೃತಪಟ್ಟವರು.

'ಕವಿ ಸರ್ಕಿ ಅವರು ಕೆಲಸದ ನಿಮಿತ್ತ ಉಡುಪಿಯಲ್ಲಿ ನೆಲೆಸಿದ್ದರು. ಬೆಂಗಳೂರಿನಲ್ಲಿ ನೆಲೆಸಿದ್ದ ಅವರ ಸ್ನೇಹಿತ ಅಪಘಾತದಲ್ಲಿ ಗಾಯಗೊಂಡಿದ್ದರು. ಅವರನ್ನು ನೋಡಲು ಉಡುಪಿಯಿಂದ ನಗರಕ್ಕೆ ಬಂದಿದ್ದರು. ಸ್ನೇಹಿತನ ಆರೋಗ್ಯ ವಿಚಾರಿಸಿಕೊಂಡು ಉಡುಪಿಗೆ ವಾಪಸ್ ಆಗುತ್ತಿದ್ದರು. ತನ್ನ ಮತ್ತೊಬ್ಬ ಸ್ನೇಹಿತ ಬಹದ್ದೂರ್ ಸರ್ಕಿ ಎಂಬುವರ ಜೊತೆ ಸ್ಕೂಟರ್‌ನಲ್ಲಿ ಬುಧವಾರ ಬೆಳಿಗ್ಗೆ 8.30ಕ್ಕೆ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದರು. ಮಾರ್ಗಮಧ್ಯದ ವಡ್ಡರಪಾಳ್ಯ ಸಿಗ್ನಲ್ ಬಳಿ ಟಿಪ್ಪರ್ ಹಾಗೂ ಸ್ಕೂಟರ್ ನಡುವೆ ಅಪಘಾತವಾಗಿದೆ. ಡಿಕ್ಕಿ ರಭಸಕ್ಕೆ ಇಬ್ಬರೂ ರಸ್ತೆಗೆ ಬಿದ್ದಿದ್ದರು. ಆ ವೇಳೆ ಕವಿ ಸರ್ಕಿ ಮೇಲೆ ಟಿಪ್ಪರ್ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಕೂಟರ್ ಸವಾರ ಬಹದ್ದೂರ್ ಸರ್ಕಿ ಅವರಿಗೆ ಸಣ್ಣಪುಟ್ಟ ಗಾಯವಾಗಿದೆ' ಎಂದು ಪೊಲೀಸರು ಹೇಳಿದರು.

ಹೆಣ್ಣೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳಪೆ ಆಹಾರ: ಕೆಎಸ್‌ಸಿಎ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಪಂದ್ಯ ವೀಕ್ಷಣೆಗೆ ಬಂದಿದ್ದ ವೇಳೆ ಕಳಪೆ ಆಹಾರ ವಿತರಣೆ ಮಾಡಲಾಗಿದೆ ಎಂದು ಆರೋಪಿಸಿ ಯುವಕ ದೂರು ನೀಡಿದ್ದು, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಕ್ಯಾಂಟೀನ್ ವ್ಯವಸ್ಥಾಪಕರ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮೇ 12ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ನಡುವೆ ನಡೆದ ಕ್ರಿಕೆಟ್ ಪಂದ್ಯ ವೀಕ್ಷಿಸಲು ಚೈತನ್ಯ ಅವರು ಬಂದಿದ್ದರು. ಪಂದ್ಯ ನಡುವೆ ಕ್ಯಾಂಟೀನ್‌ನಲ್ಲಿ ಊಟ ಸೇವಿಸಿದ್ದರು. ಊಟ ಸೇವಿಸಿದ ಕೆಲವೇ ಕ್ಷಣಗಳಲ್ಲಿ ಅವರಿಗೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು. ಬಳಿಕ ಅವರು ಕುಸಿದು ಬಿದ್ದಿದ್ದರು. ಸಿಬ್ಬಂದಿ ನೆರವಿನಿಂದ ಆಂಬುಲೆನ್ಸ್ ಪ್ರಾಥಮಿಕ ಚಿಕಿತ್ಸೆ ನೀಡಲಾಗಿತ್ತು. ಬಳಿಕ ಖಾಸಗಿ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಚೈತನ್ಯ ಅವರನ್ನು ಪರೀಕ್ಷಿಸಿದ್ದ ವೈದ್ಯರು ಫುಡ್ ಪಾಯಿಸನ್ ಆಗಿದೆ ಎಂದು ಹೇಳಿದ್ದರು.

ಆರೋಗ್ಯ ಹದಗೆಡಲು ಕ್ಯಾಂಟೀನ್‌ನಲ್ಲಿ ನೀಡಿದ ಆಹಾರವೇ ಕಾರಣ. ಹೀಗಾಗಿ ಕೆಎಸ್‌ಸಿಎ ಆಡಳಿತ ಮಂಡಳಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.



ಮಳೆ ಬಂದಾಗಲೆಲ್ಲ ನಗರದ ಕನ್ನಿಂಗ್ ಹ್ಯಾಮ್ ರಸ್ತೆಯ ಬಳಿ ಸ್ಯಾಂಕಿ ರಸ್ತೆಗೆ ಸಂಪರ್ಕ ಕಲ್ಪಿಸುವ ಅಂಡರ್‌ಪಾಸ್‌ನಲ್ಲಿ ನೀರು ನಿಂತು ಜನರ ಓಡಾಡಲು ಪರದಾಡುತ್ತಿದ್ದರು. ಅಂಡರ್‌ಪಾಸ್‌ಗೆ ಮಳೆ ನೀರು ಬಾರದಂತೆ ತಡೆಯಲು ಬಿಬಿಎಂಪಿ ತಗಡಿನ ಶೀಟ್‌ಗಳನ್ನು ಅಳವಡಿಸಿದೆ

ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬಿಸಿಗಾಳಿ: ವರ್ಷಕ್ಕೆ 1.53 ಲಕ್ಷ ಜನರ ಸಾವು

ನವದೆಹಲಿ (ಪಿಟಿಐ): ಜಾಗತಿಕವಾಗಿ ಪ್ರತಿವರ್ಷ 1.53 ಲಕ್ಷ ಜನ ಬಿಸಿಗಾಳಿಯಿಂದಾಗಿ ಮೃತಪಟ್ಟಿದ್ದಾರೆ. ಈ ರೀತಿ ಮೃತಪಡುವವರಲ್ಲಿ ಭಾರತೀಯರದ್ದೇ ಸಿಂಹಪಾಲು. ಒಟ್ಟು ಸಾವಿನ ಸಂಖ್ಯೆಯಲ್ಲಿ ಐದರಷ್ಟು ಮಂದಿ ಭಾರತೀಯರಿದ್ದಾರೆ ಎಂದು ಹೊಸ ಅಧ್ಯಯನವೊಂದರಿಂದ ತಿಳಿದುಬಂದಿದೆ.

ಆಸ್ಟ್ರೇಲಿಯಾದ ಮೊನಾಶ್ ವಿಶ್ವವಿದ್ಯಾಲಯವು ಈ ಅಧ್ಯಯನ ನಡೆಸಿದೆ. 1990ರಿಂದ 2019ರ ವರೆಗಿನ ಅವಧಿಯನ್ನು ಅಧ್ಯಯನಕ್ಕೆ ಪರಿಗಣಿಸಿದೆ. ಪ್ರತಿವರ್ಷ ಬೇಸಿಗೆಯಲ್ಲಿ 1.53 ಲಕ್ಷ ಜನರು ಮೃತಪಡುತ್ತಾರೆ. ಅಂದರೆ, 1 ಕೋಟಿ ಜನರಲ್ಲಿ 236 ಜನರು ಬಿಸಿಗಾಳಿಯಿಂದ ಸಾವಿಗೀಡಾಗುತ್ತಾರೆ. ಅವರಲ್ಲಿ ಅರ್ಧದಷ್ಟು ಜನರು ಏಷ್ಯಾದವರು. ಶೇ 30ರಷ್ಟು ಜನರು ಯುರೋಪ್‌ನವರು ಎಂದು ಅಧ್ಯಯನ ಬೊಟ್ಟು ಮಾಡಿದೆ.

ಒಣ ಹವೆ ಮತ್ತು ಕಡಿಮೆ ಅಥವಾ ಮಧ್ಯಮ ಆದಾಯವಿರುವ ದೇಶಗಳಲ್ಲೇ ಬಿಸಿಗಾಳಿಗೆ ಸಂಬಂಧಿಸಿದ ಸಾವುಗಳು ಹೆಚ್ಚು ಸಂಭವಿಸುತ್ತಿವೆ. ಭಾರತದ ನಂತರದ ಸ್ಥಾನದಲ್ಲಿ ಚೀನಾ ಮತ್ತು ರಷ್ಯಾ ದೇಶಗಳಿವೆ.

ಬಿಸಿಗಾಳಿಯ ಪರಿಣಾಮಗಳನ್ನು ಎದುರಿಸಲು ಸರ್ಕಾರಗಳು ಆರೋಗ್ಯ ವಲಯದಲ್ಲಿ ಸುಧಾರಣೆ ತಂದಿರುವುದು ಅಧ್ಯಯನದಲ್ಲಿ ತಿಳಿದುಬಂದಿದೆ. ಬಿಸಿಗಾಳಿಯಿಂದ ಉಂಟಾಗುವ ತಕ್ಷಣದ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ 'ಸಮಗ್ರ ಮಾರ್ಗಸೂಚಿ' ರೂಪಿಸುವ ಅಗತ್ಯವಿದೆ ಎಂದು ಅಧ್ಯಯನದಲ್ಲಿ ಹೇಳಲಾಗಿದೆ.

ಹವಾಮಾನ ಬದಲಾವಣೆ ತಗ್ಗಿಸುವ ಯೋಜನೆ, ಉಷ್ಣಾಂಶ ಕಾರ್ಯಯೋಜನೆ, ನಗರ ಯೋಜನೆ ಮತ್ತು ಹಸಿರು ವಲಯ, ಸಾಮಾಜಿಕ ಸಹಕಾರ ಕಾರ್ಯ ಕ್ರಮಗಳಂಥ ದೀರ್ಘಾವಧಿ ಕಾರ್ಯ ಸೂಚಿಗಳನ್ನು ರೂಪಿಸುವ ಅಗತ್ಯ ಇದೆ ಎಂದು ಸಂಶೋಧಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚಾರ್‌ಧಾಮ್ ಯಾತ್ರೆ ಮೇಲ್ವಿಚಾರಣೆಗೆ ಸೂಚನೆ

ಡೆಹ್ರಾಡೂನ್ (ಪಿಟಿಐ): ಉತ್ತರ ಕಾಶಿಯಲ್ಲಿ ಮೊಕ್ಕಾಂ ಹೂಡಿ ಚಾರ್‌ಧಾಮ್ ಯಾತ್ರೆಯ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ತಮ್ಮ ಕಾರ್ಯದರ್ಶಿಗೆ ಹೇಳಿದ್ದಾರೆ.

ಪ್ರಸಕ್ತ ವರ್ಷದ ಚಾರ್‌ಧಾಮ್ ಯಾತ್ರೆಗೆ ಅಭೂತಪೂರ್ವ ಸಂಖ್ಯೆಯಲ್ಲಿ ಭಕ್ತರು ತೆರಳುತ್ತಿದ್ದಾರೆ. ಪವಿತ್ರ ಕ್ಷೇತ್ರಗಳಾದ ಗಂಗೋತ್ರಿ ಹಾಗೂ ಯಮುನೋತ್ರಿಯಲ್ಲೂ ನಿರೀಕ್ಷೆಗೂ ಮೀರಿದ ದಟ್ಟಣೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿ ಧಾಮಿ ಅವರು ತಮ್ಮ ಕಾರ್ಯದರ್ಶಿ ಹಾಗೂ ಐಎಎಸ್ ಅಧಿಕಾರಿ ಆರ್. ಮೀನಾಕ್ಷಿ ಸುಂದರಂ ಅವರಿಗೆ ಭಕ್ತರ ನಿರ್ವಹಣೆಯ ಮೇಲ್ವಿಚಾರಣೆ ನೋಡಿಕೊಳ್ಳಲು ಸೂಚನೆ ನೀಡಿದ್ದಾರೆ ಎಂಬುದಾಗಿ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಚಾರ್‌ಧಾಮ್ ಮಹಾಪಂಚಾಯತ್ ಸದಸ್ಯ ಬ್ರಿಜೇಶ್ ಸಾತಿ ಮಾತನಾಡಿ, 'ಚಾರ್‌ಧಾಮ್ ಯಾತ್ರೆಗೆ ಈ ಬಾರಿ ಭಕ್ತರು ಮತ್ತು ಯಾತ್ರಿಗಳಷ್ಟೇ ಬರುತ್ತಿಲ್ಲ. ಬದಲಿಗೆ ಯುಟ್ಯೂಬರ್ಸ್, ವ್ಲಾಗರ್ಸ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡುವವರೂ ಬರುತ್ತಿದ್ದಾರೆ. ಅವರಿಗೆ ದೇವರ ದರ್ಶನಕ್ಕಿಂತಲೂ ಮನರಂಜನೆ ಹಾಗೂ ಹಿಮಾಲಯದ ತಪ್ಪಲಿನ ದೇವಾಲಯಗಳ ಆಸಕ್ತಿದಾಯಕ ವಿಡಿಯೊಗಳನ್ನು ಚಿತ್ರೀಕರಣ ಮಾಡುವುದು ಮುಖ್ಯ ಉದ್ದೇಶವಾಗಿದೆ' ಎಂದರು.

ಕರ್ತವ್ಯಲೋಪ: ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ವೀರಾಪುರ ಓಣಿ ನಿವಾಸಿ ಅಂಜಲಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬೆಂಡಿಗೇರಿ ಠಾಣೆ ಇನ್‌ಸ್ಪೆಕ್ಟರ್ ಸಿ.ಬಿ. ಚಿಕ್ಕೋಡಿ ಮತ್ತು ಮಹಿಳಾ ಹೆಡ್ ಕಾನ್‌ಸ್ಟಬಲ್ ರೇಖಾ ಹಾವರಡ್ಡಿ ಅವರನ್ನು ಕರ್ತವ್ಯಲೋಪ ಆರೋಪದ ಮೇಲೆ ಅಮಾನತು ಮಾಡಲಾಗಿದೆ.

ಅಂಜಲಿಗೆ ಆರೋಪಿಯಿಂದ ಜೀವ ಬೆದರಿಕೆಯಿದೆ ಎಂದು, ಕೆಲವು ದಿನಗಳ ಹಿಂದೆ ಬೆಂಡಿಗೇರಿ ಠಾಣೆ ಪೊಲೀಸರಿಗೆ ತಿಳಿಸಲಾಗಿತ್ತು ಎಂದು ಅಂಜಲಿ ಕುಟುಂಬಸ್ಥರು ಆರೋಪಿಸಿದ್ದರು. ಈ ಕುರಿತು ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ್ ಅವರು ಡಿಸಿಪಿ ನೇತೃತ್ವದಲ್ಲಿ ತನಿಖೆ ನಡೆಸಲು ಆದೇಶಿಸಿದ್ದಾರೆ.

ರಾಜಕಾಲುವೆ ಒತ್ತುವರಿ ಆರೋಪ: ಸ್ಯಾಮಿಸ್‌ಗೆ ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಯಲಹಂಕ ತಾಲ್ಲೂಕಿನ ಹೊಸಹಳ್ಳಿಯ ರಾಜಕಾಲುವೆ ಮತ್ತು ಸಾರ್ವಜನಿಕ ಮಾರ್ಗದಲ್ಲಿ 'ಸ್ಯಾಮಿಸ್ ಡ್ರೀಮ್ ಲ್ಯಾಂಡ್' ರಿಯಲ್ ಎಸ್ಟೇಟ್ ಸಂಸ್ಥೆಯು ರಾಜಕಾಲುವೆ ಒತ್ತುವರಿ ಮಾಡಿ ಬಡಾವಣೆ ಅಭಿವೃದ್ಧಿಪಡಿಸಿದೆ ಎಂಬ ಆಕ್ಷೇಪಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೊಸಹಳ್ಳಿಯ ಕೆ.ಕೆಂಪಣ್ಣ ಸೇರಿದಂತೆ 21 ಜನರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ರಜಾಕಾಲದ ನ್ಯಾಯ ಪೀಠದಲ್ಲಿದ್ದ ನ್ಯಾಯಮೂರ್ತಿ ಆರ್. ದೇವದಾಸ್ ನೇತೃತ್ವದ ವಿಭಾಗೀಯ ಪೀಠವು ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಕಾರ್ಯದರ್ಶಿ, ಬೆಂಗಳೂರು ಜಿಲ್ಲಾಧಿಕಾರಿ, ಬೆಂಗಳೂರು ಉತ್ತರ ಉಪ ವಲಯದ ಉಪ ವಿಭಾಗಾಧಿಕಾರಿ, ಯಲಹಂಕ ತಹಶೀಲ್ದಾರ್, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ಮತ್ತು 'ಸ್ಯಾಮಿಸ್ ಡ್ರೀಮ್ ಲ್ಯಾಂಡ್ ಪ್ರೈವೇಟ್ ಲಿಮಿಟೆಡ್'ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ಪ್ರಕರಣವೇನು?: 'ಹೊಸಹಳ್ಳಿಯ ವಿವಿಧ ಸರ್ವೆ ನಂಬರ್‌ಗಳಲ್ಲಿ ಹಾದು ಹೋಗಿರುವ ರಾಜಕಾಲುವೆ ಮತ್ತು ಸಾರ್ವಜನಿಕ ಮಾರ್ಗಗಳನ್ನು ಮುಚ್ಚಿ ಬಡಾವಣೆ ಅಭಿವೃದ್ಧಿಪಡಿಸಲಾಗಿದೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

ಈ ಒತ್ತುವರಿ ತೆರವುಗೊಳಿಸಲು ಕೋರಿ ರಾಜ್ಯ ಸರ್ಕಾರ ಮತ್ತು ಸಕ್ಷಮ ಪ್ರಾಧಿಕಾರಗಳಿಗೆ 2024ರ ಏಪ್ರಿಲ್ 12 ಹಾಗೂ ಮಾರ್ಚ್ 5ರಂದು ಮನವಿ ಸಲ್ಲಿಸಲಾಗಿದೆ. ಆದರೆ, ಒತ್ತುವರಿ ತೆರವರಿಗೆ ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

'ರಾಜಕಾಲುವೆ ಮತ್ತು ಸಾರ್ವಜನಿಕ ಮಾರ್ಗ ಜಾಗದಲ್ಲಿ ಬಡಾವಣೆ ಅಭಿವೃದ್ಧಿಪಡಿಸಲು ನೀಡಲಾಗಿರುವ ಅನುಮೋದನೆ ರದ್ದುಪಡಿಸಬೇಕು ಮತ್ತು ಒತ್ತುವರಿ ತೆರವುಗೊಳಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ನ್ಯಾಯಾಲಯವನ್ನು ಕೋರಿದ್ದಾರೆ.

ಶೋಕಿ ಜೀವನಕ್ಕಾಗಿ ಚಿನ್ನಾಭರಣ ದೋಚಿದ್ದ ಆರೋಪಿ

ಮನೆ ಮಾಲಕಿಯ ಕೊಂದ ಬಾಡಿಗೆದಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೋನಸಂದ್ರದಲ್ಲಿ ಮನೆ ಮಾಲಕಿ ದಿವ್ಯಾ (36) ಎಂಬುವರ ಕೊಲೆ ಪ್ರಕರಣದ ಆರೋಪಿಯನ್ನು ಬಂಧಿಸುವಲ್ಲಿ ಕೆಂಗೇರಿ ಪೊಲೀಸರು ಯಶಸ್ವಿ ಆಗಿದ್ದಾರೆ.

ಕೋಲಾರದ ಮೋನಿಕಾ (24) ಬಂಧಿತ ಆರೋಪಿ.

ಮೇ 10ರ ಮಧ್ಯಾಹ್ನ ದಿವ್ಯಾ ಅವರನ್ನು ಕೊಲೆ ಮಾಡಲಾಗಿತ್ತು. ಚಿನ್ನಾಭರಣದ ಆಸೆಗೆ ಹೊರಗಿನಿಂದ ಬಂದಿದ್ದ ದುಷ್ಕರ್ಮಿಗಳು ಆಕೆಯನ್ನು ಕೊಂದು ಪರಾರಿಯಾಗಿದ್ದಾರೆ ಎಂದು ಆರಂಭದಲ್ಲಿ ಪೊಲೀಸರು ಶಂಕಿಸಿದ್ದರು. ಆದರೆ, ತನಿಖೆಯಿಂದ ದಿವ್ಯಾ ಅವರ ಮನೆಯಲ್ಲಿ ಬಾಡಿಗೆಗಿದ್ದ ಆರೋಪಿಯೇ ಕೊಲೆ ಮಾಡಿದ್ದು ಎಂಬುದು ಗೊತ್ತಾಗಿ ಆಕೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಉದ್ಯೋಗ ಅರಸಿ ನಗರಕ್ಕೆ ಬಂದಿದ್ದ ಮೋನಿಕಾ ಕಂಪನಿಯೊಂದರಲ್ಲಿ ಡೇಟಾ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದಳು. ಬಾಡಿಗೆಗೆ ಮನೆ ಹುಡುಕಾಟ ನಡೆಸುತ್ತಿದ್ದಳು. ಮೂರು ತಿಂಗಳ ಹಿಂದಷ್ಟೇ ಕೋನಸಂದ್ರದಲ್ಲಿ ಮನೆಯೊಂದು ಬಾಡಿಗೆ ಇದೆ ಎನ್ನುವ ಮಾಹಿತಿ ತಿಳಿದು, ದಿವ್ಯಾ ಅವರನ್ನು ವಿಚಾರಿಸಿದ್ದಳು. ಮೋನಿಕಾ ಜೊತೆಗೆ ಬಂದಿದ್ದ ಪ್ರಿಯಕರನನ್ನು ತನ್ನ ಪತಿಯೆಂದು ದಿವ್ಯಾ–ಗುರುಮೂರ್ತಿ ದಂಪತಿಗೆ ಪರಿಚಯಿಸಿದ್ದಳು' ಎಂದು ಪೊಲೀಸರು ಹೇಳಿದರು.

'ಬಾಡಿಗೆಗೆ ಮನೆ ಪಡೆದ ಮೇಲೆ ಪ್ರಿಯಕರ ಆಗಾಗ್ಗೆ ಮನೆಗೆ ಬಂದು ಹೋಗುತ್ತಿದ್ದ. ಉಳಿದಂತೆ ಆರೋಪಿ ಒಬ್ಬಳೇ ಇರುತ್ತಿದ್ದಳು. ಆರೋಪಿ ಮೋಜಿನ ಜೀವನಕ್ಕೆ ಕೈಸಾಲ ಮಾಡಿಕೊಂಡಿದ್ದಳು. ಪ್ರಿಯಕರನಿಗೆ ವಾಹನ ಸಹ ಕೊಡಿಸಿದ್ದಳು. ವಾಹನ ಕೊಡಿಸಲು ಮಾಡಿದ್ದ ಸಾಲ ತೀರಿಸಲು ಹಣ ಹೊಂದಿಸುತ್ತಿದ್ದಳು. ಇದೇ ವೇಳೆ ಮನೆ ಮಾಲಕಿ ದಿವ್ಯಾ ಹಗಲು ವೇಳೆ ಒಬ್ಬರೇ ಇರುವುದನ್ನು ಗಮನಿಸಿದ್ದಳು. ಮನೆಯಲ್ಲಿ ಚಿನ್ನಾಭರಣವಿರುವ ಮಾಹಿತಿ ತಿಳಿದು ಕೊಲೆಗೆ ಸಂಚು ರೂಪಿಸಿದ್ದಳು' ಎಂದು ಪೊಲೀಸರು ಹೇಳಿದರು.



ಮೋನಿಕಾ

'ಮೇ 10ರಂದು ದಿವ್ಯಾ ತನ್ನ ಮಗುವಿನ ಜೊತೆಗೆ ಇರುವುದನ್ನು ಗಮನಿಸಿ, ಆರೋಪಿ ಮೋನಿಕಾ ಹಿಂಬಾಗಿಲಿನಿಂದ ಮನೆಯೊಳಗೆ ಬಂದಿದ್ದಳು. ದಿವ್ಯಾ ಕತ್ತು ಹಿಸುಕಿ ಕೊಲೆ ಮಾಡಿ, ಅವರ ಮೈಮೇಲಿದ್ದ 36 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದಳು. ಬಳಿಕ ತನ್ನ ಬಾಡಿಗೆಯ ಮನೆಗೆ ತೆರಳಿ ಸಹಜವಾಗಿಯೇ ಇದ್ದಳು. ಅನುಮಾನಗೊಂಡ ಪೊಲೀಸರು ಆಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ಪ್ರಕರಣ ಬಾಯ್ಬಿಟ್ಟಿದ್ದಾಳೆ' ಎಂದು ಮೂಲಗಳು ಹೇಳಿವೆ.

'ಶೋಕಿ ಜೀವನಕ್ಕಾಗಿ ಮನೆಯ ಮಾಲಕಿಯನ್ನು ಕೊಂದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಎಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ನೀರಿಗೆ ಪರದಾಟ!

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ಎಚ್.ಡಿ. ಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ನೀರಿಗಾಗಿ ಪರದಾಟ ಉಂಟಾಗಿದ್ದು, ಡಯಾಲಿಸಿಸ್ ಪ್ರಕ್ರಿಯೆ ಮೇಲೂ ವ್ಯತಿರಿಕ್ತ ಪರಿಣಾಮ ಆಗುತ್ತಿದೆ ಎಂದು ಆರೋಪಿಸಲಾಗಿದೆ.

ಅಲ್ಲಿನ ಕೆಲ ಸಿಬ್ಬಂದಿಯು ನೀರಿನ ಕೊರತೆ ಇರುವುದನ್ನು ತಿಳಿಸಿ, ಡಯಾಲಿಸಿಸ್ ರೋಗಿಗಳಿಗೆ ಚಿಕಿತ್ಸೆಗೆ ಸಹಕರಿಸದೇ ಕಳುಹಿಸಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಬುಧವಾರ ಹರಿದಾಡಿದೆ.

'ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗುವುದರಿಂದ ನೀರಿನ ಸಮಸ್ಯೆಯೂ ಎದುರಾಗುತ್ತಿದೆ. ಟ್ಯಾಂಕ್‌ಗೆ ನೀರು ತುಂಬಲು ಕಾಯಬೇಕಾಗುತ್ತದೆ' ಎಂದು ಅಲ್ಲಿನ ಸಿಬ್ಬಂದಿ ಹೇಳುವುದು ವಿಡಿಯೊದಲ್ಲಿದೆ. ಆಸ್ಪತ್ರೆಯ ಅವ್ಯವಸ್ಥೆ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.


ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಬಿಜೆಪಿಯು, 'ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಸರ್ಕಾರಿ ಆಸ್ಪತ್ರೆಗಳೆಲ್ಲಾ ಅನಾರೋಗ್ಯಕ್ಕೆ ಒಳಗಾಗಿವೆ. ಎಚ್. ಡಿ. ಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ನೀರು, ವಿದ್ಯುತ್ ಇಲ್ಲದಿರುವುದರಿಂದ ಡಯಾಲಿಸಿಸ್ ರೋಗಿಗಳು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಮೂಲಸೌಕರ್ಯ ಕುರಿತು ಮುತುವರ್ಜಿ ವಹಿಸಬೇಕಾದ ಆರೋಗ್ಯ ಇಲಾಖೆ ಮತ್ತು ಸಚಿವರು ಗಾಢ ನಿದ್ರೆಗೆ ಜಾರಿದ್ದರಿಂದ ಅಸಹಾಯಕ ರೋಗಿಗಳು ಪರದಾಡುವಂತಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದೆ.

'ಸರ್ಕಾರದಿಂದ ರೈತರಿಗೆ ದ್ರೋಹ'

ಪ್ರಜಾವಾಣಿ ವಾರ್ತೆ

ಹಾವೇರಿ: 'ಕೇಂದ್ರ ಸರ್ಕಾರ ನೀಡಿದ ಬರ ಪರಿಹಾರದಲ್ಲಿ ರಾಜ್ಯ ಸರ್ಕಾರ ₹2 ಸಾವಿರ ಕಡಿತ ಮಾಡಿ ರೈತರಿಗೆ ನೀಡುತ್ತಿದೆ. ಬರ ಪರಿಹಾರವನ್ನು ಸಾಲಕ್ಕೆ ಹೊಂದಾಣಿಕೆ ಮಾಡಿ ರೈತರಿಗೆ ಅನ್ಯಾಯ ಮಾಡುತ್ತಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

'ರೈತರು ಸಂಕಷ್ಟದಲ್ಲಿ ಇದ್ದಾರೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಪರಿಹಾರ ನೀಡಿದೆ. ಅದನ್ನು ರಾಜ್ಯ ಸರ್ಕಾರ ಸಾಲಕ್ಕೆ ಹೊಂದಾಣಿಕೆ ಮಾಡಿದರೆ, ಅದು ಹೇಗೆ ಪರಿಹಾರ ಆಗುತ್ತದೆ? ಇದನ್ನು ಕೂಡಲೇ ಸರಿಪಡಿಸದಿದ್ದರೆ ಹೋರಾಟ ಮಾಡಲಾಗುವುದು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.



ಬಸವರಾಜ ಬೊಮ್ಮಾಯಿ

'ರಾಜ್ಯ ಸರ್ಕಾರಕ್ಕೆ ರೈತರಿಗೆ ನೆರವಾಗುವ ಮನಸ್ಸಿದ್ದರೆ, ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ರೈತರ ಸಾಲ ಮನ್ನಾ ಮಾಡಲಿ. ಕಾಂಗ್ರೆಸ್ ಘೋಷಣಾ ಪತ್ರ ಕರ್ನಾಟಕದಿಂದ ಪ್ರಾರಂಭವಾಗಲಿ' ಎಂದರು.

ಅಪಘಾತ: 6 ಮಂದಿ ಸಜೀವ ದಹನ

ಅಮರಾವತಿ (ಪಿಟಿಐ) : ಆಂಧ್ರಪ್ರದೇಶದ ಪಾಲ್ನಾಡು ಜಿಲ್ಲೆಯ ಚಿಲಕಲುರಿಪೇಟ್ ಬಳಿ ಖಾಸಗಿ ಬಸ್ ಹಾಗೂ ಟಿಪ್ಪರ್ ನಡುವೆ ಡಿಕ್ಕಿ ಸಂಭವಿಸಿ ಹೊತ್ತಿಕೊಂಡ ಬೆಂಕಿಗೆ ಆರು ಜನ ಸಜೀವ ದಹನವಾಗಿದ್ದಾರೆ. ಮಂಗಳವಾರ ಮಧ್ಯರಾತ್ರಿ ಈ ಘಟನೆ ನಡೆದಿದೆ. 'ನಾವು ಘಟನಾ ಸ್ಥಳ ತಲುಪುವಷ್ಟರಲ್ಲಿ ಬಸ್ ಸುತ್ತ ಜ್ವಾಲೆ ವ್ಯಾಪಿಸಿತ್ತು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಒಂದು ವರ್ಷದಲ್ಲಿ ₹5.20 ಕೋಟಿ ವೆಚ್ಚ • 1,796 ರೋಗಿಗಳಿಗೆ ಚಿಕಿತ್ಸೆ

ಕ್ಯಾನ್ಸರ್ ಪೀಡಿತರ ಕೈಹಿಡಿದ 'ಯಶಸ್ವಿನಿ'

• ವರುಣ ಹೆಗಡೆ

ಬೆಂಗಳೂರು: ರಾಜ್ಯ ಸರ್ಕಾರವು 'ಯಶಸ್ವಿನಿ ಯೋಜನೆ'ಯಡಿ ಕಿಮೊಥೆರಪಿಯಂತಹ ಚಿಕಿತ್ಸೆಗಳನ್ನು ಸೇರ್ಪಡೆ ಮಾಡಿರುವುದರಿಂದಾಗಿ ಕ್ಯಾನ್ಸರ್ ಪೀಡಿತರ ಮೇಲಿನ ಆರ್ಥಿಕ ಭಾರ ಇಳಿದಿದ್ದು, ಒಂದು ವರ್ಷದ ಅವಧಿಯಲ್ಲಿ 1,796 ಮಂದಿ ₹5.20 ಕೋಟಿ ವೆಚ್ಚದಲ್ಲಿ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಪಡೆದಿದ್ದಾರೆ.

ಸಹಕಾರಿ ಇಲಾಖೆಯ ಮೂಲಕ 2003ರಲ್ಲಿ ಆರಂಭಗೊಂಡಿದ್ದ 'ಯಶಸ್ವಿನಿ' ಯೋಜನೆಯನ್ನು 2018ರ ಮೇ 31ರಂದು ಸ್ಥಗಿತಗೊಳಿಸಿ, ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಳಿಸಲಾಗಿತ್ತು. ಯೋಜನೆಯ ಮಹತ್ವ ಮನಗಂಡ ಸರ್ಕಾರ, 2023ರ ಜನವರಿಯಲ್ಲಿ 'ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ಯೋಜನೆಗೆ ಮರುಚಾಲನೆ ನೀಡಿತ್ತು. ಈ ವೇಳೆ ಕಿಮೊಥೆರಪಿ, ಸರ್ಜಿಕಲ್ ಆಂಕೊಲಾಜಿ ಹಾಗೂ ರೇಡಿಯೊಥೆರಪಿ ವಿಭಾಗದಿಂದ 261 ಚಿಕಿತ್ಸೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದರಿಂದಾಗಿ ಯೋಜನೆಯಡಿ ಬರುವ ಕ್ಯಾನ್ಸರ್ ಪೀಡಿತರು ನೆಟ್ವರ್ಕ್ ಆಸ್ಪತ್ರೆಗಳಲ್ಲಿ ದುಬಾರಿ ವೆಚ್ಚದ ಕ್ಯಾನ್ಸರ್ ಚಿಕಿತ್ಸೆಯನ್ನೂ ಪಡೆದುಕೊಂಡಿದ್ದಾರೆ.

ಜನವರಿ 2023ರಿಂದ ಜನವರಿ 2024ರ ಅವಧಿಯಲ್ಲಿ ಕಿಮೊಥೆರಪಿ ವಿಭಾಗದಲ್ಲಿ ಒಟ್ಟು ₹1.43 ಕೋಟಿ ವೆಚ್ಚದಲ್ಲಿ 1,097 ಮಂದಿಗೆ ಚಿಕಿತ್ಸೆ ಒದಗಿಸಲಾಗಿದೆ. ರೇಡಿಯೊಥೆರಪಿ ವಿಭಾಗದಲ್ಲಿ ₹1.87 ಕೋಟಿ ವೆಚ್ಚದಲ್ಲಿ 228 ಮಂದಿಗೆ ಹಾಗೂ ಸರ್ಜಿಕಲ್ ಆಂಕೊಲಾಜಿ ವಿಭಾಗದಲ್ಲಿ ₹1.90 ಕೋಟಿ ವೆಚ್ಚದಲ್ಲಿ 411 ಮಂದಿಗೆ ಚಿಕಿತ್ಸೆ ನೀಡಲಾಗಿದೆ.

ನೇರವಾಗಿ ತೆರಳಿ ಚಿಕಿತ್ಸೆ: 'ಯಶಸ್ವಿನಿ' ಯೋಜನೆಯಡಿ ಗರಿಷ್ಠ ₹ 5 ಲಕ್ಷದವರೆಗೆ ನಗದು ರಹಿತ ಚಿಕಿತ್ಸೆ ಪಡೆಯಬಹುದಾಗಿದೆ. 'ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ' ಯೋಜನೆಯಡಿಯೂ ಇಷ್ಟೇ ಮೊತ್ತದ ಚಿಕಿತ್ಸೆ ಪಡೆಯಲು ಅವಕಾಶವಿದೆ. ಆದರೆ, ವ್ಯಕ್ತಿಯು ಮೊದಲು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ, ಅಲ್ಲಿ ಚಿಕಿತ್ಸೆ ಲಭ್ಯವಿರದಿದ್ದಲ್ಲಿ ಮಾತ್ರ ಶಿಫಾರಸು ಆಧಾರದಲ್ಲಿ ಬೇರೆ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳಬೇಕಾಗುತ್ತದೆ. ಆದರೆ, ಯಶಸ್ವಿನಿ ಯೋಜನೆಯಡಿ ವ್ಯಕ್ತಿಯು ನೆಟ್ವರ್ಕ್ ಆಸ್ಪತ್ರೆಗಳಿಗೆ ನೇರವಾಗಿ ತೆರಳಿ, ಚಿಕಿತ್ಸೆ ಪಡೆದುಕೊಳ್ಳಬಹುದು. ಇದರಿಂದಾಗಿ ಯೋಜನೆಯ ಫಲಾನುಭವಿಗಳಿಗೆ ಚಿಕಿತ್ಸೆ ಸಾಧ್ಯವಾಗುತ್ತಿದೆ.

'ಯೋಜನೆಯಡಿ ಕ್ಯಾನ್ಸರ್‌ಗೆ ಸಂಬಂಧಿಸಿದ ಚಿಕಿತ್ಸೆಗಳನ್ನೂ ಅಳವಡಿಸಿರುವುದರಿಂದ ಕ್ಯಾನ್ಸರ್ ಪೀಡಿತರಿಗೆ ಚಿಕಿತ್ಸೆ ಸುಲಭವಾಗಿದೆ. ₹5 ಲಕ್ಷದವರೆಗೆ ನಗದು ರಹಿತ ಚಿಕಿತ್ಸೆ ಒದಗಿಸಲಾಗುತ್ತದೆ. ಬಹುತೇಕ ಕ್ಯಾನ್ಸರ್ ಪೀಡಿತರಿಗೆ ರೇಡಿಯೊಥೆರಪಿ ಅಗತ್ಯವಿರುತ್ತದೆ. ಇನ್ನಷ್ಟು ಆಸ್ಪತ್ರೆಗಳನ್ನು ಯೋಜನೆಯಡಿ ತರಲು ಕ್ರಮವಹಿಸಲಾಗಿದೆ' ಎಂದು ಸಹಕಾರ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ ಅಂಶ

1,650 'ಯಶಸ್ವಿನಿ' ಯೋಜನೆಯಡಿಯ ಚಿಕಿತ್ಸಾ ವಿಧಾನಗಳು

474 ಯೋಜನೆಯಡಿ ಬರುವ ನೆಟ್ವರ್ಕ್ ಆಸ್ಪತ್ರೆಗಳು

ವಿಭಾಗವಾರು ಲಭ್ಯವಿರುವ ಚಿಕಿತ್ಸೆಗಳು

ವಿಭಾಗ	ಚಿಕಿತ್ಸೆಗಳ ಸಂಖ್ಯೆ
ಕಿಮೊಥೆರಪಿ	143
ಸರ್ಜಿಕಲ್ ಆಂಕೊಲಾಜಿ	81
ರೇಡಿಯೊಥೆರಪಿ	37

ರಾಜ್ಯದಲ್ಲಿ ಕ್ಯಾನ್ಸರ್ ಪ್ರಕರಣ ಹೆಚ್ಚಳ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನೋಂದಣಿ ಪ್ರಕಾರ ಕ್ಯಾನ್ಸರ್ ಹೊಸ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಳವಾಗಿವೆ. ಕಳೆದ ನಾಲ್ಕು ವರ್ಷಗಳಲ್ಲಿ 72,956 ಮಂದಿಯಲ್ಲಿ ಕ್ಯಾನ್ಸರ್ ಪತ್ತೆಯಾಗಿದೆ. ವಾರ್ಷಿಕ 20 ಸಾವಿರಕ್ಕೂ ಅಧಿಕ ಹೊಸ ಪ್ರಕರಣಗಳು ದೃಢಪಡುತ್ತಿವೆ. ಈ ಸಂಸ್ಥೆಯಲ್ಲಿ ಪ್ರತಿ ವರ್ಷ 3 ಲಕ್ಷಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸಂಸ್ಥೆಯ ದಾಖಲಾತಿ ಪ್ರಕಾರ ಶೇ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3 ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ.

ಪೆನ್‌ಡ್ರೈವ್ ಪ್ರಕರಣದಲ್ಲಿ ಕಾಂಗ್ರೆಸ್ ಕೈವಾಡ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ಕಾಂಗ್ರೆಸ್ ಕೈವಾಡ ಇದೆ. ಇದನ್ನು ಬಿಜೆಪಿಯ ಮೇಲೆ ಹೊರಿಸುವ ಪ್ರಯತ್ನವನ್ನು ಕಾಂಗ್ರೆಸ್ ನಾಯಕರು ಮಾಡುತ್ತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಎಚ್.ಡಿ.ರೇವಣ್ಣ ಅವರನ್ನು ಕೂಡಲೇ ಬಂಧಿಸಿದರೂ, ಚಾಲಕನನ್ನು ಮಾತ್ರ ಈವರೆಗೂ ಬಂಧಿಸಿಲ್ಲ. ಎಸ್ಐಟಿ ಅಧಿಕಾರಿಗಳು ಪಕ್ಷಪಾತ ಧೋರಣೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಬುಧವಾರ ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ಎಚ್.ಡಿ.ಕುಮಾರಸ್ವಾಮಿ ಹೇಳಿದಂತೆ ಇಲ್ಲಿ ತಿಮಿಂಗಲವೇ ಇದೆ. ಅದನ್ನು ಬಡಿದು ತಿನ್ನಬೇಕಾ ಬೇಡವಾ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬವೇ ತೀರ್ಮಾನಿಸಲಿದೆ. ಆದರೆ, ಮಾಜಿ ಪ್ರಧಾನಿ ದೇವೇಗೌಡರ ಮೂಲಕ ಇಡೀ ಒಕ್ಕಲಿಗ ಸಮುದಾಯವನ್ನು ಅಪಮಾನಿಸಬೇಕಿತ್ತೇ ಎಂದು ಜನ ಮಾತನಾಡುತ್ತಿದ್ದಾರೆ ಎಂದರು.

ಕಾರು ಚಾಲಕ ಎಲ್ಲಿಂದಲೋ ಸಂದೇಶ ಕಳುಹಿಸುತ್ತಿದ್ದಾನೆ. ಶಾಸಕ ಎ. ಮಂಜು ಸೇರಿ ಹಲವರ ಮೇಲೆ ಆರೋಪ ಮಾಡಲಾಗಿದೆ. ಕಾಂಗ್ರೆಸ್‌ನವರೇ ಚಾಲಕನನ್ನು ಎಲ್ಲೋ ಇರಿಸಿದ್ದಾರೆ. ಹಾಸನದಲ್ಲಿ ಎಲ್ಲ ಕಡೆ ಪೆನ್‌ಡ್ರೈವ್ ಹಂಚಲಾಗಿದೆ ಎಂದರೆ ಬಿಜೆಪಿ ಕಾರ್ಯಕರ್ತರಿಗೂ ತಲುಪಿರಬಹುದು. ಕಾಂಗ್ರೆಸ್ ಕಾರ್ಯಕರ್ತರ ಬಳಿಯೂ ವಿಡಿಯೊ ಇದೆ. ಅವರನ್ನು ಏಕೆ ಬಂಧಿಸಿಲ್ಲ ಎಂದು ಪ್ರಶ್ನಿಸಿದರು. ಎಚ್.ಡಿ.ರೇವಣ್ಣ ಜೈಲಿಗೆ ಹೋಗಿದ್ದಕ್ಕೆ ಹೆಚ್ಚು ಖುಷಿ ಪಟ್ಟವರು ಕಾಂಗ್ರೆಸ್‌ನವರು. ಇದು ವ್ಯವಸ್ಥಿತ ಸಂಚು. ಚುನಾವಣೆ ಹಿನ್ನೆಲೆಯಲ್ಲಿ ಇದೆಲ್ಲ ಮಾಡಿದ್ದಾರೆ. ತಿಮಿಂಗಿಲ ಆಮ್ಲಜನಕಕ್ಕಾಗಿ ಹೊರಗೆ ಬರಲೇಬೇಕು ಎಂದರು.

ಸಂಪರ್ಕಕ್ಕೆ ಸಿಗದ ಪ್ರಜ್ವಲ್: ಜಿ.ಟಿ. ದೇವೇಗೌಡ

ಬೆಂಗಳೂರು: ವಿದೇಶಕ್ಕೆ ಹೋಗಿರುವ ಪ್ರಜ್ವಲ್ ರೇವಣ್ಣ ಇದುವರೆಗೂ ಅವರ ಕುಟುಂಬದವರ ಸಂಪರ್ಕಕ್ಕೂ ಸಿಕ್ಕಿಲ್ಲ ಎಂದು ಜೆಡಿಎಸ್ ಪ್ರಮುಖರ ಸಮಿತಿ ಅಧ್ಯಕ್ಷ ಜಿ.ಟಿ. ದೇವೇಗೌಡ ಹೇಳಿದರು. ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಪ್ರಜ್ವಲ್ ಮಾಹಿತಿ ನನಗೂ ಸೇರಿದಂತೆ ಯಾರಿಗೂ ಇಲ್ಲ. ಆರೋಪ ಕೇಳಿಬಂದ ತಕ್ಷಣ ಪಕ್ಷ ಅವರ ವಿರುದ್ಧ ಕ್ರಮ ಕೈಗೊಂಡಿದೆ. ಈಗ ಏನಿದ್ದರೂ ಸರ್ಕಾರದ ಕೆಲಸ. ಆರೋಪಗಳ ಕುರಿತು ಎಸ್ಐಟಿ ತನಿಖೆ ನಡೆಸುತ್ತಿದೆ. ಭಾರತಕ್ಕೆ ಕರೆ ತಂದು ವಿಚಾರಣೆ ನಡೆಸಲಿದೆ' ಎಂದರು.



ವಿದ್ಯಾರ್ಥಿಗೆ ಸನ್ಮಾನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಸರ್ಕಾರಿ ಶಾಲೆಗಳಲ್ಲೇ ಪ್ರಥಮ ಸ್ಥಾನಗಳಿಸಿದ ಯಂಟಗಾನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಎಂ.ಚಿನ್ಮಯಿ (ಶೇ 98.24) ಅವರನ್ನು ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಗಂಗಹನುಮಯ್ಯ ಅವರು ಲ್ಯಾಪ್‌ಟಾಪ್ ನೀಡಿ ಸನ್ಮಾನಿಸಿದರು. ಮುಖ್ಯಶಿಕ್ಷಕಿ ಎಚ್.ಶಾರದಾ, ಸಮಿತಿ ಸದಸ್ಯರಾದ ಸಂಪತ್ ಬಾಬು, ರಂಗಪ್ಪ, ಚಿಕ್ಕಹನುಮೇಗೌಡ, ನರಸಿಂಹಮೂರ್ತಿ, ಚಿಕ್ಕಣ್ಣ, ಹನುಮಂತರಾಜು, ಗ್ರಾ.ಪಂ.ಸದಸ್ಯ ಉಮೇಶ್ ಭಾಗವಹಿಸಿದ್ದರು. – ಪ್ರಜಾವಾಣಿ ಚಿತ್ರ

ಹರ್ಷ ಇಂಟರ್‌ನ್ಯಾಷನಲ್ ಶಾಲೆಗೆ ಶೇ100 ರಷ್ಟು ಫಲಿತಾಂಶ

ನೆಲಮಂಗಲ: ಪಟ್ಟಣದ ಹರ್ಷ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆಯು ಸಿಬಿಎಸ್‌ಇ 10ನೇ ತರಗತಿಪರೀಕ್ಷೆಯಲ್ಲಿ ಶೇ100 ಫಲಿತಾಂಶ ಪಡೆದಿದೆ.

ಒಟ್ಟು 68 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅತ್ಯುನ್ನತ ದರ್ಜೆಯಲ್ಲಿ 18, ಪ್ರಥಮ ದರ್ಜೆ 37 ಹಾಗೂ ದ್ವಿತೀಯ ದರ್ಜೆಯಲ್ಲಿ 13 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 10ನೇ ತರಗತಿಯಲ್ಲಿ ಎಸ್.ನಿಹಾರಿಕ ಶೇ 95, ಸಯ್ಯದ್ ಫವಾಜ್ ಜೈನ್ ಶೇ 94.40, ಪದ್ಮಜ ಸುನಿಲ್ ಪಾಟೀಲ್ ಶೇ 94, ಎನ್.ಸ್ನೇಹ ಶೇ 94, ಶರೋನ್ ಜೋಸೆಫ್ ಸಾಜು ಶೇ 91, ವಿ.ಜಯಂತ್ ಸೂರ್ಯ ಶೇ 90. 12ನೇ ತರಗತಿ ವಿಜ್ಞಾನ ವಿಭಾಗದಲ್ಲಿ ಕನಾವ್ ದುವಾ ಶೇ 94.2, ಪಿಹು ಓಜಾ ಶೇ 91.4 ಅಂಕಗಳನ್ನು ಪಡೆದಿದ್ದಾರೆ.



ಎನ್.ಭೂಮಿಕಾ

12ನೇ ತರಗತಿಯ ವಿಜ್ಞಾನ ವಿಭಾಗದಲ್ಲಿ ಕನಾವ್ ದುವಾ ಶೇ 94.2, ಪಿಹು ಓಜಾ ಶೇ 91.4, ವಾಣಿಜ್ಯ ವಿಭಾಗದಲ್ಲಿ ಎನ್.ಭೂಮಿಕಾ ಶೇ.97.6, ಅಫೀಫಾ ಆಲಿಯಾ ಶೇ 93 ಅಂಕಗಳನ್ನು ಪಡೆದಿದ್ದಾರೆ ಎಂದು ಶಾಲೆಯ ಅಧ್ಯಕ್ಷ ಎಸ್.ಶಿವಕುಮಾರ್ ಅವರು ತಿಳಿಸಿದ್ದಾರೆ.

ನೀರಿನ ಸಮಸ್ಯೆ: ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ರಜೆ ಕೊಟ್ಟ ಜಿಮ್ಸ್?

ಪ್ರಜಾವಾಣಿ ವಾರ್ತೆ

ಗದಗ: ನೀರಿನ ಸಮಸ್ಯೆ ಎದುರಾದ ಕಾರಣ ಇಲ್ಲಿನ ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಜಿಮ್ಸ್) ಹಾಸ್ಟೆಲ್‌ನಲ್ಲಿ ವಾಸವಿರುವ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ರಜೆ ಕೊಟ್ಟು ಮನೆಗೆ ಕಳುಹಿಸಲಾಗಿದೆ.

'ನೀರಿನ ಸಮಸ್ಯೆ ಕಾರಣಕ್ಕೆ ರಜೆ ಕೊಡಲಾಗಿದೆ. ಪ್ರಾಧ್ಯಾಪಕರ ವಸತಿಗೃಹಗಳಿಗೂ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ. ನೀರಿನ ಸಮಸ್ಯೆ ಬಗೆಹರಿಸಬೇಕು' ಎಂದು ಜಿಮ್ಸ್ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ರಜೆಗೆ ನೀರಿನ ಸಮಸ್ಯೆ ಕಾರಣವಲ್ಲ: 'ನೀರಿನ ಸಮಸ್ಯೆ ಉಂಟಾಗಿದ್ದಕ್ಕೆ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರಜೆ ಕೊಟ್ಟಿಲ್ಲ. ಎರಡು ಬ್ಯಾಚ್‌ನ ವಿದ್ಯಾರ್ಥಿಗಳ ಆಂತರಿಕ ಪರೀಕ್ಷೆಗಳು ಮುಗಿದಿದ್ದಕ್ಕೆ ಅವರಿಗೆ ಐದು ದಿನ ರಜೆ ನೀಡಲಾಗಿದೆ. ಸೋಮವಾರದಿಂದ ತರಗತಿಗೆ ಹಾಜರಾಗುವರು' ಎಂದು ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ 'ಪ್ರಜಾವಾಣಿ'ಗೆ ತಿಳಿಸಿದರು.

'ಜಿಲ್ಲಾ ಆಸ್ಪತ್ರೆಗೆ ನೀರಿನ ಸಮಸ್ಯೆ ಆಗದಂತೆ ಕ್ರಮ ವಹಿಸಲಾಗಿದೆ. ಇಲ್ಲಿಗೆ 24/7 ನೀರು ಪೂರೈಕೆ ಇಲ್ಲ. ಕೊಳವೆಬಾವಿ ನೀರನ್ನು ಒದಗಿಸಲಾಗಿದ್ದು, ರೋಗಿಗಳಿಗೆ ತೊಂದರೆ ಆಗಿಲ್ಲ. ಹಮ್ಮಿಗಿ ಬ್ಯಾರೇಜ್‌ನಲ್ಲಿ ಸ್ವಚ್ಛತಾ ಕಾರ್ಯ ನಡೆದಿರುವುದಕ್ಕೆ ಹಾಸ್ಟೆಲ್‌ಗೆ ನೀರು ಪೂರೈಕೆ ಆಗಿಲ್ಲ. ನೀರನ್ನು ಮಿತವಾಗಿ ಬಳಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ' ಎಂದರು.

ಬಸ್ ಸೀಟಿಗಾಗಿ ಚಪ್ಪಲಿಯಿಂದ ಹೊಡೆದಾಡಿದ ಮಹಿಳೆಯರು

ಪ್ರಜಾವಾಣಿ ವಾರ್ತೆ

ಬೀದರ್: ಸೀಟಿಗಾಗಿ ಮಹಿಳೆಯರು ಚಪ್ಪಲಿಯಿಂದ ಹೊಡೆದಾಡಿರುವ ಘಟನೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ನಡೆದಿದೆ. ಈ ಕುರಿತ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೆಎ 38, ಎಫ್ 1198 ಸಂಖ್ಯೆಯ ಬೀದರ್ ಡಿಪೊಗೆ ಸೇರಿದ ಬಸ್ಸಿನಲ್ಲಿ ಎರಡು ದಿನಗಳ ಹಿಂದೆ ಈ ಘಟನೆ ನಡೆದಿದೆ ಎಂದು ಗೊತ್ತಾಗಿದೆ. ಬೀದರ್ ಮತ್ತು ಕಲಬುರಗಿ ನಡುವೆ ಸಂಚರಿಸುವ ಬಸ್, ಮಾರ್ಗಮಧ್ಯೆ ನಿಲ್ದಾಣದಲ್ಲಿ ನಿಂತಿದ್ದಾಗ ಮಹಿಳೆಯರು ಸೀಟಿಗಾಗಿ ಪರಸ್ಪರ ವಾಗ್ವಾದಕ್ಕಿಳಿದಿದ್ದಾರೆ. ಅನಂತರ ಕೈಯಲ್ಲಿ ಚಪ್ಪಲಿ ಹಿಡಿದುಕೊಂಡು ಹೊಡೆದಾಡಿದ್ದಾರೆ. ಪರಸ್ಪರ ಬಟ್ಟೆ ಹಿಡಿದು ಎಳೆದಾಡಿಕೊಂಡು ನಿಂದಿಸಿದ್ದಾರೆ. ಸಹ ಪ್ರಯಾಣಿಕರು ಜಗಳ ಬಿಡಿಸಲು ನಡೆಸಿದ ಪ್ರಯತ್ನ ಫಲಕೊಟ್ಟಿಲ್ಲ. ಘಟನೆ ನಡೆದಾಗ ಬಸ್ಸಿನಲ್ಲಿ ಚಾಲಕ, ಕಂಡಕ್ಟರ್ ಇರಲಿಲ್ಲ. 'ಶಕ್ತಿ' ಯೋಜನೆ ಜಾರಿಗೆ ಬಂದ ನಂತರ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಸೌಲಭ್ಯ ಕಲ್ಪಿಸಲಾಗಿದೆ. ಇದರಿಂದಾಗಿ ಬಸ್‌ಗಳಲ್ಲಿ ಮಹಿಳೆಯರ ಸಂಚಾರ ಹೆಚ್ಚಾಗಿದೆ.

'ಬಸ್ಸಿನಲ್ಲಿ ಇಂತಹ ಘಟನೆ ನಡೆದಿರುವುದು ನನ್ನ ಗಮನಕ್ಕೆ ಬಂದಿಲ್ಲ' ಎಂದು ಬೀದರ್ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಕಾಂತ ಫುಲೇಕರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.



ಮಹಿಳೆಯರು ಬಸ್‌ನಲ್ಲಿ ಪರಸ್ಪರ ಚಪ್ಪಲಿಯಿಂದ ಹೊಡೆದಾಡಿಕೊಂಡಿರುವ ದೃಶ್ಯದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ

'ಅಭಿವೃದ್ಧಿ ಶೂನ್ಯ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಒಂದು ವರ್ಷ ತುಂಬುತ್ತಿದ್ದು, ಈವರೆಗೆ ಒಂದೇ ಒಂದು ಅಭಿವೃದ್ಧಿ ಕೆಲಸವೂ ನಡೆದಿಲ್ಲ. ಅನುದಾನವೂ ಬಿಡುಗಡೆ ಆಗುತ್ತಿಲ್ಲ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕ ವಿ.ಸುನಿಲ್‌ಕುಮಾರ್ ಟೀಕಿಸಿದರು.

ಈ ಸರ್ಕಾರದ ಆಡಳಿತ ಕೆಲವೇ ಕುಟುಂಬಗಳ ಹಿಡಿತದಲ್ಲಿದೆ. ಇವೆಂಟ್ ಮ್ಯಾನೇಜ್‌ಮೆಂಟ್ ಸದಸ್ಯರು ಸರ್ಕಾರ ನಡೆಸುತ್ತಿದ್ದಾರೆ. ಇದೊಂದು ಅಸಮರ್ಥ ಸಂಪುಟ ಮತ್ತು ಅಭಿವೃದ್ಧಿ ಶೂನ್ಯ ಸರ್ಕಾರ ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಅಧಿಕಾರಕ್ಕೆ ಬಂದ ಒಂದು ವರ್ಷದ ಅವಧಿಯಲ್ಲಿ ರಾಜ್ಯ ಮಟ್ಟದಲ್ಲಿ ಯಾವ ಯೋಜನೆಗೆ ಎಷ್ಟು ಅನುದಾನ ಕೊಟ್ಟಿದ್ದಾರೆ. ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಯಾವ ಯೋಜನೆಗಳಿಗೆ ಎಷ್ಟು ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ನೀಡಿದ್ದಾರೆ ಎನ್ನುವುದನ್ನು ಬಹಿರಂಗಪಡಿಸಲಿ ಎಂದು ಸವಾಲು ಹಾಕಿದರು.

ಗೊತ್ತು ಗುರಿ ಇಲ್ಲದ ಆಡಳಿತವನ್ನು ಕರ್ನಾಟಕದ ಜನತೆ ಕಳೆದ ಒಂದು ವರ್ಷದಲ್ಲಿ ನೋಡಿದ್ದಾರೆ. ಇಂಥ ಕೆಟ್ಟ ಸರ್ಕಾರವನ್ನು ರಾಜ್ಯದ ಜನರು ಹಿಂದೆಂದೂ ನೋಡಿರಲಿಲ್ಲ. ವಿಧಾನ ಸಭಾ ಕ್ಷೇತ್ರಗಳು, ಇಲಾಖೆಗಳಿಗೆ ಒಂದು ರೂಪಾಯಿ ಅನುದಾನ ಕೊಡದೇ ಒಂದು ವರ್ಷ ಕಳೆದಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಂದು ಗುದ್ದಲಿ ಪೂಜೆಯನ್ನೂ ಶಾಸಕರು ಮಾಡಲಾಗಿಲ್ಲ ಎಂದು ಹೇಳಿದರು.

ಕಾನೂನು, ಸುವ್ಯವಸ್ಥೆ ನಿಭಾಯಿಸುವುದರಲ್ಲಿ ಗೃಹ ಸಚಿವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಬರ ಪರಿಹಾರ ನಿರ್ವಹಣೆಯಲ್ಲಿ ಕಂದಾಯ ಸಚಿವರು ದೊಡ್ಡ ಪ್ರಮಾಣದಲ್ಲಿ ವೈಫಲ್ಯ ಕಂಡಿದ್ದಾರೆ. ರೈತರಿಗೆ ಹೊಸ ಸಾಲ ಸಿಗುತ್ತಿಲ್ಲ. ರೈತರಿಗೆ ಬಡ್ಡಿ ಮನ್ನಾ ಮಾಡಿದ್ದಾಗಿ ಘೋಷಣೆ ಮಾಡಿ, ₹496 ಕೋಟಿ ಅನುದಾನವನ್ನು ಬಿಡುಗಡೆ ಮಾಡದ ಕಾರಣ ಪಿಎಲ್‌ಡಿ ಬ್ಯಾಂಕ್, ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳಲ್ಲಿ ರೈತರಿಗೆ ಮರುಸಾಲ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಕೃಷಿ ಮತ್ತು ಸಹಕಾರ ಸಚಿವರ ಅಸಮರ್ಥತೆಯೇ ಕಾರಣ ಎಂದರು.

ಈ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ಒಬ್ಬನೇ ಒಬ್ಬ ರೈತನ ಹೊಸ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ರೈತರು ಹಣ ಕಟ್ಟಿದರೂ ಹೊಸ ಸಂಪರ್ಕ ಕೊಡುತ್ತಿಲ್ಲ. 24 ಗಂಟೆ ನಿರಂತರ ವಿದ್ಯುತ್ ಪೂರೈಕೆ ಮಾತು ಬಿಡಿ, ಗ್ರಾಮೀಣ ಪ್ರದೇಶದಲ್ಲಿ 10 ರಿಂದ 12 ಗಂಟೆ ವಿದ್ಯುತ್ ಕೊಡಲಾಗದ ಸ್ಥಿತಿ ಇದೆ ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸಿಲ್ಲ. ಮೊಟ್ಟೆ ವಿತರಣೆಯೂ ಸರಿಯಾಗಿ ನಡೆಯುತ್ತಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ವೈಫಲ್ಯ ಎದ್ದು ಕಾಣುತ್ತಿದೆ ಎಂದರು.

'ಬಂಡಾಯ ಅಭ್ಯರ್ಥಿಗಳ ಮನವೊಲಿಕೆ'

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಗೆ ಬಂಡಾಯವಾಗಿ ಸ್ಪರ್ಧಿಸಿರುವವರ ಮನವೊಲಿಸುವ ಕಾರ್ಯ ನಡೆದಿದೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಹೇಳಿದರು.

'ಈಗಾಗಲೇ ನಾನು ರಘುಪತಿ ಭಟ್ ಅವರ ಜತೆ ಮಾತನಾಡಿದ್ದೇನೆ. ಅವರು ಪಕ್ಷದ ಜತೆಗೆ ಇರುತ್ತಾರೆ, ಪಕ್ಷದ ವಿರುದ್ಧ ಹೋಗುವುದಿಲ್ಲ ಎಂದು ಭಾವಿಸುತ್ತೇನೆ. ಟಿಕೆಟ್‌ಗೆ ಪ್ರಯತ್ನಿಸಿ ಸಿಗದಿದ್ದಾಗ ಅಸಮಾಧಾನಗೊಳ್ಳುವುದು ಸಹಜ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪರ್ಯಾಯ ಗಿಡ ನೆಡಲು ನಿರ್ಧಾರ: ಕೆ–ರೈಡ್

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಅನುಷ್ಠಾನಕ್ಕಾಗಿ ಒಟ್ಟು 32,572 ಮರಗಳನ್ನು ಕಡಿಯಬೇಕಿದ್ದು, ಪ್ರತಿ ಮರಕ್ಕೆ 10 ಗಿಡ ನೆಡಲಾಗುವುದು ಎಂದು ಕೆ–ರೈಡ್ ತಿಳಿಸಿದೆ.

ಒಟ್ಟು ಕಡಿಯಬೇಕಿರುವ ಮರಗಳಲ್ಲಿ 17,505 ಮರಗಳು ದೇವನಹಳ್ಳಿ ಪ್ರದೇಶದ ಅಕ್ಕುಪೇಟೆ ಡಿಪೊ ವ್ಯಾಪ್ತಿಯಲ್ಲಿದ್ದು, ಹೆಚ್ಚಾಗಿ ನೀಲಗಿರಿ ಮತ್ತು ಅಕೇಶಿಯಾ ಆಗಿವೆ. ಉಳಿದ 15,067 ಮರಗಳ ಪೈಕಿ 1071 ಮರಗಳು ಬಿಬಿಎಂಪಿ ವ್ಯಾಪ್ತಿಯಿಂದ ಹೊರಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿರುವ 13,996 ಮರಗಳಲ್ಲಿ 2098 ಅನ್ನು ಕತ್ತರಿಸಲು ಹಾಗೂ 178 ಮರಗಳನ್ನು ಕಸಿ ಮಾಡಲು ಬಿಬಿಎಂಪಿಗೆ ಈಗಾಗಲೇ ವಹಿಸಲಾಗಿದೆ. 1ಕ್ಕೆ 10 ಗಿಡಗಳನ್ನು ನೆಡುವುದಕ್ಕಾಗಿ ಬಿಬಿಎಂಪಿಗೆ ಕೆ–ರೈಡ್ ವತಿಯಿಂದ ₹ 8.07 ಕೋಟಿ ಪಾವತಿಸಲಾಗಿದೆ. ಗಿಡಗಳನ್ನು ನೆಡುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ಕೆ–ರೈಡ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸುಸ್ಥಿರ ನಗರ ಸಂಚಾರಕ್ಕಾಗಿ ಬಿಎಸ್‌ಆರ್‌ಪಿ ಬದ್ಧವಾಗಿದ್ದು, ಎಲ್ಲ 58 ನಿಲ್ದಾಣಗಳಲ್ಲಿ ಹಸಿರು ಶಕ್ತಿ ಬಳಸಲು ನಿರ್ಧರಿಸಲಾಗಿದೆ. ಕಾರ್ಯಸಾಧ್ಯ ಸ್ಥಳಗಳಲ್ಲಿ ಸೌರಫಲಕ ಅಳವಡಿಸಲಾಗುವುದು. ಮಳೆ ನೀರು ಸಂಗ್ರಹ ವ್ಯವಸ್ಥೆಅಳವಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.



ಬ್ಯಾಟರಾಯನಪುರ ಕ್ಷೇತ್ರದ ಕೋಡಗಲಹಟ್ಟಿ ಗ್ರಾಮದಲ್ಲಿ ಗ್ರಾಮದೇವರುಗಳ ಜಾತ್ರಾ ಮಹೋತ್ಸವ(ಊರಹಬ್ಬ)ವಿಜೃಂಭಣೆಯಿಂದ ನಡೆಯಿತು.

ಕೋಡಗಲಹಟ್ಟಿ: ಜಾತ್ರಾ ಮಹೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕೋಡಗಲಹಟ್ಟಿ ಗ್ರಾಮದಲ್ಲಿ ಗ್ರಾಮ ದೇವರುಗಳ ಜಾತ್ರಾ ಮಹೋತ್ಸವ(ಊರಹಬ್ಬ) ಮೂರು ದಿನ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವದ ಪ್ರಯುಕ್ತ ಸೋಮವಾರ ರಾಮಾಂಜನೇಯ, ಓಂಶಕ್ತಿ ಹಾಗೂ ಮಾರ್ಗದಾಂಬ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ದೀಪಗಳ ಆರತಿ ಹಾಗೂ ವಿವಿಧ ಪೂಜಾಕೈಂಕರ್ಯಗಳನ್ನು ನೆರವೇರಿಸಿದ ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮಂಗಳವಾರ ಸಂಜೆ ಅಣ್ಣಮ್ಮ, ಮುತ್ಯಾಲಮ್ಮ, ಸಫಲಮ್ಮ ಹಾಗೂ ಚೌಡೇಶ್ವರಿ ದೇವತೆಗಳ ಹೂವಿನ ಪಲ್ಲಕ್ಕಿ ಉತ್ಸವ ನಡೆಯಿತು.

ಬುಧವಾರ ಬೆಳಿಗ್ಗೆ ಪ್ರತಿ ಮನೆಯಿಂದ ಮಹಿಳೆಯರು ಆರತಿ ಹೊತ್ತು ಗ್ರಾಮದಲ್ಲಿ ಮೆರವಣಿಗೆ ನಡೆಸಿದರು. ನಂತರ ದೇವತೆಗಳಿಗೆ ದೀಪದ ಆರತಿ ಬೆಳಗಲಾಯಿತು. ವಿವಿಧ ಜಾನಪದ ಕಲಾತಂಡಗಳ ಪ್ರದರ್ಶನ ಜನರ ಗಮನ ಸೆಳೆಯಿತು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆದ 74ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಕರ್ನಾಟದ ಬಾಲಕಿಯರ ತಂಡವನ್ನು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ (ಕೆಎಸ್‌ಬಿಬಿಎ) ಅಧಿಕಾರಿಗಳು ಆತ್ಮೀಯವಾಗಿ ಬರಮಾಡಿಕೊಂಡರು. ಪ್ರಶಸ್ತಿ ವಿಜೇತ ಕರ್ನಾಟಕ ತಂಡಕ್ಕೆ ಎಫ್‌ಐಬಿಎ ಏಷ್ಯಾ ಅಧ್ಯಕ್ಷ ಕೆ.ಗೋವಿಂದರಾಜ್ ಬಹುಮಾನ ಮೊತ್ತವನ್ನು ₹7.5 ಲಕ್ಷಕ್ಕೆ ಹೆಚ್ಚಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಎಚ್‌ಬಿಇಪಿಎಲ್‌ಗೆ 'ಸುಪ್ರೀಂ' ನಿರ್ದೇಶನ

ಗುಜರಾತ್: ಮಾಲಿನ್ಯ ಬಾಧಿತ 6 ಗ್ರಾಮಗಳಿಗೆ ₹ 25 ಲಕ್ಷ ಪರಿಹಾರ

ಅಹಮದಾಬಾದ್(ಪಿಟಿಐ): ಘನತ್ಯಾಜ್ಯ ವಿಲೇವಾರಿಯಿಂದ ಮಾಲಿನ್ಯ ಸಮಸ್ಯೆ ಎದುರಿಸುತ್ತಿರುವ ರಾಜಕೋಟ್ ಜಿಲ್ಲೆಯ ಆರು ಗ್ರಾಮಗಳು ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಒಟ್ಟು ₹ 25 ಲಕ್ಷ ಪರಿಹಾರ ಪಡೆಯಲಿವೆ ಎಂದು 'ಪರ್ಯಾವರಣ ಮಿತ್ರ' ಎಂಬ ಎನ್‌ಜಿಒ ಬುಧವಾರ ತಿಳಿಸಿದೆ.

'2013ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಆದೇಶಿಸಿರುವಂತೆ, ಈ ಪರಿಹಾರ ಮೊತ್ತವನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ಠೇವಣಿ ಇಡುವಂತೆ ಹೆಂಜರ್ ಬಯೊಟೆಕ್ ಎನರ್ಜೀಸ್ ಪ್ರೈವೇಟ್ ಲಿಮಿಟೆಡ್ (ಎಚ್‌ಬಿಇಪಿಎಲ್) ಎಂಬ ಕಂಪನಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ' ಎಂದು ಎನ್‌ಜಿಒ ತಿಳಿಸಿದೆ.

'ಈ ಪರಿಹಾರ ಮೊತ್ತವನ್ನು ಬಾಧಿತ ಗ್ರಾಮ ಪಂಚಾಯಿತಿಗಳಿಗೆ ಜಿಲ್ಲಾಧಿಕಾರಿ ಹಂಚಿಕೆ ಮಾಡಬೇಕು ಎಂದೂ ಸುಪ್ರೀಂ ಕೋರ್ಟ್ ಸೂಚಿಸಿದ್ದು, ಈ ಹಣ ಬಿಡುಗಡೆಯಾಗುವ ಬಗ್ಗೆಯೂ ಗಮನ ನೀಡಲಾಗುವುದು' ಎಂದು ತಿಳಿಸಿದೆ.

ನಾಕ್ರವಾಡಿ, ಪಿಯಾಲಿಯಾ, ನಾಗಲ್ಪಾರ, ಹದ್ಮತಿಯಾ, ಖಿಜಾದಿಯಾ ಹಾಗೂ ರಾಜಗಢ ಗ್ರಾಮಗಳು ಪರಿಹಾರ ಪಡೆಯಲಿವೆ. ಈ ಗ್ರಾಮಗಳಲ್ಲಿ ಅಂದಾಜು 7,500 ಜನರು ವಾಸಿಸುತ್ತಿದ್ದಾರೆ. ಎಚ್‌ಬಿಇಪಿಎಲ್ ಕಂಪನಿಯು ರಾಜಕೋಟ್ ನಗರದ ಘನತ್ಯಾಜ್ಯ ವಿಲೇವಾರಿಗಾಗಿ ಸಮೀಪದ ನಾಕ್ರವಾಡಿ ಗ್ರಾಮದಲ್ಲಿ ಭೂಭರ್ತಿ ಸೌಲಭ್ಯ ಸ್ಥಾಪಿಸಿದೆ. ಘನತ್ಯಾಜ್ಯ ವಿಲೇವಾರಿಯನ್ನು ಸಮರ್ಪಕವಾಗಿ ಮಾಡದೇ ಇರುವುದು ಹಾಗೂ ಸಂಸ್ಕರಣೆ ಮಾಡದ ತ್ಯಾಜ್ಯವನ್ನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಕಿದ್ದರಿಂದ ಈ ಆರು ಗ್ರಾಮಗಳ ಜನರು ಆರೋಗ್ಯ ಸಮಸ್ಯೆ ಎದುರಿಸುವಂತಾಗಿತ್ತು.

ಅಂತರ್ಜಲ ಕಲುಷಿತವಾಗುವುದು ಹಾಗೂ ಕೃಷಿ ಜಮೀನುಗಳು ಫಲವತ್ತತೆ ಕಳೆದುಕೊಂಡಿದ್ದವು ಎಂದು ಎನ್‌ಜಿಒ ನಿರ್ದೇಶಕ ಮಹೇಶ ಪಾಂಡ್ಯ ಹೇಳಿದ್ದಾರೆ.

₹ 25 ಲಕ್ಷ ಪರಿಹಾರ ನೀಡುವಂತೆ ಎನ್‌ಜಿಟಿ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಎಚ್‌ಬಿಇಪಿಎಲ್, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಎನ್‌ಜಿಟಿ ಆದೇಶಿಸಿರುವಂತೆ ಪರಿಹಾರ ಮೊತ್ತ ನೀಡುವಂತೆ ನಿರ್ದೇಶಿಸಿ ಮೇ 7ರಂದು ಆದೇಶಿಸಿದೆ.

ವಾಟ್ಸ್‌ಆ್ಯಪ್ ಡಿ.ಪಿ.ಯಲ್ಲಿ ಜಿಲ್ಲಾಧಿಕಾರಿ ಫೋಟೊ

ಡಿ.ಸಿ ಹೆಸರಲ್ಲಿ ಹಣಕ್ಕೆ ಬೇಡಿಕೆ!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವಾಟ್ಸ್‌ಆ್ಯಪ್ ಡಿ.ಪಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎನ್. ಶಿವಶಂಕರ ಭಾವಚಿತ್ರ ಬಳಸಿ ಪೊಲೀಸ ಅಧಿಕಾರಿಗಳ ಬಳಿಯೇ ಹಣಕ್ಕೆ ಬೇಡಿಕೆ ಇಡಲಾಗಿದೆ.

ಮೇ 9ರ ಮಧ್ಯಾಹ್ನ ವಾಟ್ಸ್‌ಆ್ಯಪ್ ಡಿ.ಪಿ.ಯಲ್ಲಿ ಜಿಲ್ಲಾಧಿಕಾರಿ ಭಾವಚಿತ್ರ ಹಾಕಿಕೊಂಡಿದ್ದ ವ್ಯಕ್ತಿಯೊಬ್ಬ ವಿಜಯಪುರ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಶಾಂತ್ ನಾಯಕ್, ಚನ್ನರಾಯಪಟ್ಟಣ ಠಾಣೆಯ ಪಿಎಸ್ಐ ಅಪ್ಪಣ್ಣ, ವಿಶ್ವನಾಥಪುರದಲ್ಲಿ ಈ ಹಿಂದೆ ಕೆಲಸ ನಿರ್ವಹಿಸಿದ್ದ ಪಿಎಸ್ಐ ನಂದೀಶ್ ಅವರಿಗೆ ಹಣ ನೀಡುವಂತೆ ಸಂದೇಶ ರವಾನಿಸಿದ್ದಾನೆ.



ಎನ್. ಶಿವಶಂಕರ

'ನಾನು ಮೀಟಿಂಗ್‌ನಲ್ಲಿ ಇರುವುದರಿಂದ ಯಾವುದೋ ಪ್ರಾಜೆಕ್ಟ್‌ಗೆ ಹಣ ಬೇಕಿದೆ. ₹50 ಸಾವಿರ ಹಣವನ್ನು ಕನಕರಾಜು ಎಂಬಾತನಿಗೆ ಕಳುಹಿಸಿ' ಎಂದು ಪೊಲೀಸರಿಗೆ ಸಂದೇಶ ಕಳುಹಿಸಿದ್ದ ಅಪರಿಚಿತ ವ್ಯಕ್ತಿ ತಿಳಿಸಿದ್ದಾನೆ.

ಇದೇ ರೀತಿಯ ಸಂದೇಶವನ್ನು ಹಲವು ಸರ್ಕಾರಿ ಅಧಿಕಾರಿಗಳಿಗೂ ಕಳುಹಿಸಿರುವ ಆರೋಪಿ ಅವರಿಂದಲೂ ತಲಾ ₹50 ಸಾವಿರ ಹಣಕ್ಕೆ ಬೇಡಿಕೆ ಇಟ್ಟಿದ್ದ. ಕನಕರಾಜು ಎಂಬಾತನಿಗೆ ಹಣ ವರ್ಗಾಹಿಸುವಂತೆ ತಿಳಿಸಿದ್ದ. ಇದರಿಂದ ಅಧಿಕಾರಿಗಳಿಗೆ ಸಂಶಯ ಬಂದಿತ್ತು. ಇದು ಜಿಲ್ಲಾಧಿಕಾರಿ ಆಪ್ತ ಸಹಾಯಕ ಎಚ್.ಡಿ. ಅಭಿಷೇಕ್ ಗಮನಕ್ಕೆ ಬಂದಿದ್ದು ದೂರು ನೀಡಿದ್ದಾರೆ. ಜಿಲ್ಲಾಧಿಕಾರಿ ಭಾವಚಿತ್ರವನ್ನು ವಾಟ್ಸ್‌ಆ್ಯಪ್ ಡಿ.ಪಿ.ಯಲ್ಲಿ ಹಾಕಿಕೊಂಡು ಪೊಲೀಸರು ಸೇರಿದಂತೆ ಇತರ ಸರ್ಕಾರಿ ಅಧಿಕಾರಿಗಳಿಗೆ ಮೋಸ ಮಾಡಲು ಸಂಚು ರೂಪಿಸಿದ್ದ ಅಪರಿಚಿತ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ತಾಲ್ಲೂಕಿನ ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಬೀದರ್: ಬಸ್‌ನಲ್ಲಿ ಪ್ರಯಾಣಿಸಿದ ನ್ಯಾಯಾಧೀಶ

ಪ್ರಜಾವಾಣಿ ವಾರ್ತೆ

ಬೀದರ್: ನಗರದಿಂದ ಸಿದ್ಧೇಶ್ವರ ಮಾರ್ಗವಾಗಿ ಭಾಲ್ಕಿಗೆ ಬಸ್ ಓಡಿಸಬೇಕೆಂಬ ಗ್ರಾಮಸ್ಥರ ಬಹುದಿನಗಳ ಬೇಡಿಕೆ ನ್ಯಾಯಾಧೀಶರ ಮಧ್ಯಸ್ಥಿಕೆಯಲ್ಲಿ ಈಡೇರಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್.ಕೆ. ಕನಕಟ್ಟೆ ಅವರು ಬಸ್ ಸಂಚಾರಕ್ಕೆ ಬುಧವಾರ ನಗರದಲ್ಲಿ ಚಾಲನೆ ನೀಡಿ, ಸಾಮಾನ್ಯ ಪ್ರಯಾಣಿಕರಂತೆ ಟಿಕೆಟ್ ಪಡೆದು ಬಸ್‌ನಲ್ಲಿ ಸಂಚರಿಸಿದರು.

'ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಬೀದರ್‌ನಿಂದ ಸಿದ್ಧೇಶ್ವರ ಮಾರ್ಗವಾಗಿ ಭಾಲ್ಕಿಗೆ ಬಸ್ ಓಡಿಸಬೇಕು ಎಂದು ಸಿದ್ಧೇಶ್ವರ ಗ್ರಾಮಸ್ಥರು ನನಗೆ ಮನವಿ ಸಲ್ಲಿಸಿದ್ದರು. ವ್ಯಾಜ್ಯ ಪೂರ್ವ ಪ್ರಕರಣ ದಾಖಲಿಸಿಕೊಂಡು, ಈ ಕುರಿತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಅವರ ಗಮನಕ್ಕೆ ತಂದಿದ್ದೆ. ಎರಡು ಗಂಟೆಗಳಲ್ಲೇ ಬೀದರ್–ಭಾಲ್ಕಿ ವಯಾ ಸಿದ್ಧೇಶ್ವರ ಹೊಸ ಬಸ್ ವ್ಯವಸ್ಥೆ ಮಾಡಿದ್ದಾರೆ' ಎಂದು ಕನಕಟ್ಟೆ ತಿಳಿಸಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೀದರ್ ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಕಾಂತ ಫುಲೇಕರ್, ಕರ್ನಾಟಕ ಲೋಕಾಯುಕ್ತದ ವಿಶೇಷ ಸಾರ್ವಜನಿಕ ಅಭಿಯೋಜಕ ಕೇಶವರಾವ್ ಶ್ರೀಮಾಳೆ, ಗಣೇಶ ಮೂಕಡೆ ಹಾಜರಿದ್ದರು.



ಸಿದ್ಧೇಶ್ವರ ಮಾರ್ಗವಾಗಿ ಸಂಚರಿಸುವ ಬೀದರ್–ಭಾಲ್ಕಿ ಬಸ್‌ಗೆ ಚಾಲನೆ ನೀಡಿದ ಹಿರಿಯ ಸಿವಿಲ್ ನ್ಯಾಯಾಧೀಶ ಎಸ್.ಕೆ. ಕನಕಟ್ಟೆ ಅವರು ಟಿಕೆಟ್ ಪಡೆದು ಅದೇ ಬಸ್‌ನಲ್ಲಿ ಸಂಚರಿಸಿದರು

ಹಿಮಸರೋವರಗಳ ವಿಸ್ತರಣೆ ದಿಢೀರ್ ಪ್ರವಾಹದ ಆಪತ್ತು!

ಚನ್ನಬಸಪ್ಪ ರೊಟ್ಟಿ

ಹಿಮಾಲಯ ಪರ್ವತ ಪ್ರದೇಶದಲ್ಲಿ ಇಲ್ಲಿಯವರೆಗೆ ಗುರುತಿಸಿರುವ ಹಿಮಸರೋವರಗಳ (Glacial) ಪೈಕಿ ಶೇ 27ಕ್ಕಿಂತ ಹೆಚ್ಚು ಹಿಮಸರೋವರಗಳು ಗಮನಾರ್ಹವಾಗಿ ವಿಸ್ತಾರಗೊಂಡಿವೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ವರದಿ ಮಾಡಿದೆ. 1984ರಿಂದ 2023ರವರೆಗೆ ನಡೆಸಿದ ದೀರ್ಘಾವಧಿಯ ಉಪಗ್ರಹ ಆಧರಿತ ಮೇಲ್ವಿಚಾರಣಾ ವರದಿಯನ್ವಯ ಇಸ್ರೊ ಈ ಮಾಹಿತಿ ನೀಡಿದೆ. ಹಿಮಾಲಯ ಪ್ರದೇಶದಲ್ಲಿರುವ 10 ಹೆಕ್ಟೇರ್‌ಗಿಂತ ದೊಡ್ಡದಾದ 2,431 ಹಿಮಸರೋವರಗಳ ಗಾತ್ರದಲ್ಲಿನ ಹೆಚ್ಚಳವನ್ನು ವಿಶ್ಲೇಷಿಸಿ ಈ ನಿರ್ಣಯಕ್ಕೆ ಬಂದಿದೆ.

ಹಿಮಾಲಯ ಪ್ರದೇಶದಲ್ಲಿ ಒಟ್ಟಾರೆ 676 ಹಿಮಸರೋವರಗಳು ವಿಸ್ತರಣೆಗೊಳ್ಳುತ್ತಿದ್ದು, ಇವುಗಳ ಪೈಕಿ 130 ಹಿಮಸರೋವರಗಳು ಭಾರತದ ವ್ಯಾಪ್ತಿಗೊಳಪಟ್ಟಿವೆ. ಈ 130 ಹಿಮಸರೋವರಗಳ ಪೈಕಿ 65 ಸಿಂಧೂ ನದಿ ಜಲಾನಯನ ಪ್ರದೇಶದಲ್ಲಿ, 7 ಗಂಗಾ ನದಿ ಜಲಾನಯನ ಪ್ರದೇಶದಲ್ಲಿ ಮತ್ತು 58 ಬ್ರಹ್ಮಪುತ್ರಾ ನದಿ ಜಲಾನಯನ ಪ್ರದೇಶದಲ್ಲಿವೆ. ಹಿಮಸರೋವರಗಳ ವಿಸ್ತರಣೆಯು ಮಾನವ-ಪ್ರೇರಿತ ಹವಾಮಾನ ಬದಲಾವಣೆ ಹಾಗೂ ತಾಪಮಾನ ಹೆಚ್ಚಳದಿಂದ ಉಂಟಾಗುತ್ತಿದೆ ಎಂದು ಇಸ್ರೊ ತಿಳಿಸಿದೆ.

ವಿಸ್ತರಿಸುತ್ತಿರುವ ಒಟ್ಟಾರೆ 676 ಹಿಮಸರೋವರಗಳ ಪೈಕಿ 601 ಹಿಮಸರೋವರಗಳು ಈಗಾಗಲೇ ತಮ್ಮ ಮೂಲ ಗಾತ್ರದ ಎರಡು ಪಟ್ಟು ಹೆಚ್ಚು ಗಾತ್ರಕ್ಕೆ ಬೆಳೆದಿವೆ. 10 ತಮ್ಮ ಮೂಲ ಗಾತ್ರದ 1.5 ಪಟ್ಟು ಅಥವಾ ಅದಕ್ಕಿಂತ ಹೆಚ್ಚಿನ ಗಾತ್ರಕ್ಕೆ ಬೆಳೆದಿವೆ. 65 ತಮ್ಮ ಮೂಲ ಗಾತ್ರಕ್ಕಿಂತ 1.5 ಪಟ್ಟು ವಿಸ್ತರಿಸಿವೆ. ಈ 676 ಹಿಮಸರೋವರಗಳ ಪೈಕಿ 314 ಹಿಮಸರೋವರಗಳು 4000 ಮೀಟರ್‌ನಿಂದ 5000 ಮೀಟರ್ ಎತ್ತರದಲ್ಲಿ ನೆಲೆಗೊಂಡಿವೆ. ಇನ್ನುಳಿದವು 2965 ಮೀಟರ್‌ನಿಂದ 4000 ಮೀಟರ್ ಎತ್ತರದಲ್ಲಿ ನೆಲೆಗೊಂಡಿವೆ. ವಿಸ್ತರಿಸುತ್ತಿರುವ 676 ಹಿಮಸರೋವರಗಳ ಪೈಕಿ 307 ಹಿಮಸರೋವರಗಳು ಈಗಾಗಲೇ ಹಿಮದ ಕರಗುವಿಕೆಯಿಂದ ಹೊರಬಂದ ನೀರಿನಿಂದ ತುಂಬಿದ ಜಲಸಂಗ್ರಹ ತಾಣಗಳಾಗಿ (moraine-dammed) ಮಾರ್ಪಟ್ಟಿವೆ. 265 ಹಿಮಸರೋವರಗಳು ಪೂರ್ಣಕರಗುವಿಕೆ ಅಥವಾ ಸವಕಳಿಯ ಸ್ಥಿತಿಯಲ್ಲಿದ್ದು ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದ ನೀರು ಹಾಗೂ ಅರ್ಧಕ್ಕಿಂತ ಕಡಿಮೆ ಪ್ರಮಾಣದ ಮಂಜುಗಡ್ಡೆಗಳಿಂದ ತುಂಬಿ ಕೊಂಡಿರುವ (erosion-dammed) ತಾಣಗಳಾಗಿವೆ. 96 ಹಿಮಸರೋವರಗಳು ಅರೆಕರಗುವಿಕೆಯ ಅಥವಾ ಅರೆಸವಕಳಿಯ ಸ್ಥಿತಿಯಲ್ಲಿದ್ದು ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದ ಮಂಜುಗಡ್ಡೆ ಹಾಗೂ ಅರ್ಧಕ್ಕಿಂತ ಕಡಿಮೆ ಪ್ರಮಾಣದ ನೀರಿನಿಂದ ತುಂಬಿಕೊಂಡಿರುವ (partially erosion-dammed) ತಾಣಗಳಾಗಿವೆ. ಇನ್ನುಳಿದ 8 ಹಿಮಸರೋವರಗಳು ಮೇಲ್ನೋಟಕ್ಕೆ ಮಂಜುಗಡ್ಡೆಯಿಂದ ತುಂಬಿರುವ (ice-dammed) ತಾಣಗಳಾಗಿ ಗೋಚರ ಆಗುತ್ತಿವೆ. ಆದರೆ, ಅವು ತಮ್ಮ ಮೂಲಗಾತ್ರಕ್ಕಿಂತ ಗಮನಾರ್ಹವಾಗಿ ವಿಸ್ತರಣೆಗೊಳಪಟ್ಟಿವೆ. ಇದು ಅವುಗಳಲ್ಲಿ ಮಂಜುಗಡ್ಡೆ ಕರಗುವಿಕೆ ಪ್ರಕ್ರಿಯೆ ವ್ಯಾಪಕವಾಗಿ ನಡೆದಿರುವುದನ್ನು ಸೂಚಿಸುತ್ತಿದೆ. ವಿಷಮ ಹವಾಮಾನದ ಕಾರಣದಿಂದ ಹಿಮಸರೋವರಗಳ ಸ್ಥಿತಿಗತಿಯ ನೇರ ಅಧ್ಯಯನ ಅಸಾಧ್ಯ. ಹೀಗಾಗಿ, ಉಪಗ್ರಹ ಆಧಾರಿತ ಅವಲೋಕನ ಮತ್ತು ವಿಶ್ಲೇಷಣೆಯೇ ಹಿಮಸರೋವರಗಳ ವಾಸ್ತವಿಕ ಸ್ಥಿತಿಗತಿಗಳನ್ನು, ವಿಸ್ತರಣೆಯ ಪ್ರಮಾಣ, ಸಂಭವನೀಯ ಗ್ಲೋಫ್(Glacial Lake Outburst Flood) ಅಪಾಯಗಳನ್ನು ಅರಿತುಕೊಳ್ಳಲು ಉತ್ತಮ ಕ್ರಮವಾಗಿದೆ. 'ಗ್ಲೋಫ್' ಎಂಬುದು, ಹಿಮ ಸರೋವರದಲ್ಲಿನ ಮಂಜುಗಡ್ಡೆಯ ನೈಸರ್ಗಿಕ ಅಣೆಕಟ್ಟು ತೀವ್ರ ಒತ್ತಡದಿಂದ ಸ್ಫೋಟಗೊಂಡು ನೀರು ಪ್ರವಾಹೋಪಾದಿಯಲ್ಲಿ ಹೊರಹೊಮ್ಮುವ ಅಪಾಯಕಾರಿ ಸ್ಥಿತಿಯಾಗಿದೆ. ಗ್ಲೋಫ್‌ನಂಥ ಅಪಾಯಕರ ಸನ್ನಿವೇಶದಲ್ಲಿ ವರಸ್ವರೂಪಿಯಾದ ಈ ಹಿಮಸರೋವರಗಳೇ ಜನರ ಜೀವ-ಜೀವನಕ್ಕೆ ಎರವಾಗುತ್ತವೆ. ಈ ಅಪಾಯಗಳನ್ನು ತಗ್ಗಿಸಲು ಮತ್ತು ಹಿಮಾಲಯ ಪ್ರದೇಶದ ಸೂಕ್ಷ್ಮ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಲು ನಿರ್ಣಾಯಕ ಕ್ರಮಗಳನ್ನು ವಹಿಸಬೇಕು ಎಂದು ಇಸ್ರೊ ವರದಿ ಆಗ್ರಹಿಸಿದೆ.

ಅಪಾಯ ಕಟ್ಟಿಟ್ಟ ಬುತ್ತಿ: ಹಿಮಗಡ್ಡೆಗಳಿಂದ ನಿರ್ಮಿತವಾದ ನೈಸರ್ಗಿಕ ಅಣೆಕಟ್ಟುಗಳ ಕರಗುವಿಕೆಯಿಂದ ದಿಢೀರ್ ಪ್ರವಾಹಗಳು ಸಂಭವಿಸುತ್ತವೆ. ಈ ರೀತಿಯ ಅವಾಂತರಕ್ಕೆ ಉದಾಹರಣೆಯಾಗಿ ಸಿಕ್ಕಿಂನಲ್ಲಿ 2023 ಅಕ್ಟೋಬರ್ 4ರಂದು ಚುಂಗ್‌ಥಾಂಗ್‌ನಿಂದ ಉತ್ತರಕ್ಕೆ 50 ಕಿಲೋ ಮೀಟರ್ ದೂರದಲ್ಲಿ 5,200 ಮೀಟರ್‌ಗಳಷ್ಟು ಎತ್ತರದಲ್ಲಿರುವ ಲೊನಾಕ್ ಹಿಮಸರೋವರ ಇಂಥ ದಿಢೀರ್ ಪ್ರವಾಹಕ್ಕೆ ಕಾರಣವಾಗಿ ಅವಾಂತರ ಉಂಟು ಮಾಡಿದ್ದನ್ನು ನಾವು ಸ್ಮರಿಸಬಹುದು. ಲೊನಾಕ್ ಹಿಮಸರೋವರದಲ್ಲಿ ಉಂಟಾದ ಈ ಹಠಾತ್ ಸ್ಫೋಟಕ ಪ್ರವಾಹದಿಂದ ಅಲ್ಲಿಂದ ಉಗಮವಾಗುವ ಲಾಚೆನ್ ನದಿಯಲ್ಲಿ ತೀವ್ರ ಪ್ರಮಾಣದ ನೀರು ರಭಸವಾಗಿ ಹರಿದು ಬಂದಿತು. ಉಕ್ಕೇರಿದ ಹಠಾತ್ ಪ್ರವಾಹ ಅಪಾರ ಹಾನಿಗೆ ಕಾರಣವಾಗಿದ್ದು, ಕೇವಲ 10 ನಿಮಿಷಗಳಲ್ಲಿ ಚುಂಗ್ಥಾಂಗ್ ಅಣೆಕಟ್ಟು ಒಡೆಯಲು ಕಾರಣವಾಯಿತು. ಮುಂದಿನ ಅರ್ಧ ಗಂಟೆಯಲ್ಲಿ ಲಾಚೆನ್ ನದಿ ಇನ್ನೊಂದು ಉಪನದಿ ಲಾಚುಂಗ್ ಅನ್ನು ಸಂಧಿಸಿ ನಂತರ ಮುಖ್ಯ ನದಿ ತೀಸ್ತಾವನ್ನು ಸೇರಿ ಅವೆರಡೂ ನದಿಗಳಲ್ಲಿಯೂ ದಿಢೀರ್ ಪ್ರವಾಹ ಉಂಟಾಗಲು ಕಾರಣವಾಯಿತು. ಹಲವಾರು ಸೇತುವೆಗಳು, NH-10 ರ ಭಾಗಗಳು ಪ್ರವಾಹದಲ್ಲಿ ಕೊಚ್ಚಿ ಹೋದವು. ಮಂಗನ್, ಗ್ಯಾಂಗ್ಟಾಕ್, ಪಕ್ಯೋಂಗ್ ಮತ್ತು ನಾಮ್ಚಿ ಜಿಲ್ಲೆಗಳ ಸಾವಿರಾರು ಹಳ್ಳಿ ಮತ್ತು ಪಟ್ಟಣಗಳು ಈ ದಿಢೀರ್ ಪ್ರವಾಹದಿಂತ ಬಾಧಿತವಾದವು. ಪ್ರವಾಹಕ್ಕೆ ಸಿಲುಕಿದ ಭಾರತೀಯ ಸೇನೆಯ 22 ಯೋಧರು ಸೇರಿ 40 ಮಂದಿ ಸಾವಿಗೀಡಾದರು. 70ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದು, ಈವರೆಗೂ ಅವರ ಸುಳಿವು ಲಭಿಸಿಲ್ಲ. ಇಂಥದರಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ 2000ಕ್ಕೂ ಹೆಚ್ಚು ಜನರನ್ನು ಪ್ರಾಣಾಪಾಯದಿಂದ ರಕ್ಷಿಸಿತು. 2017ರಲ್ಲಿ ನಿರ್ಮಿಸಿದ್ದ 817 ಮೀಟರ್ ಎತ್ತರದ ಚುಂಗ್ಥಾಂಗ್ ಅಣೆಕಟ್ಟೆಯಲ್ಲಿ 'ರನ್ ಆಫ್ ದ ರಿವರ್' ತಂತ್ರಜ್ಞಾನ ಆಧರಿಸಿ 1200 MW ಜಲ ವಿದ್ಯುತ್ ಉತ್ಪಾದಿಸಲಾಗುತ್ತಿತ್ತು. ಈ ಅಣೆಕಟ್ಟೆಯಿಂದ ಸಿಕ್ಕಿಂ ಮತ್ತು ಪಶ್ಚಿಮ ಬಂಗಾಳಕ್ಕೆ ವಿದ್ಯುತ್ ಪೂರೈಸಲಾಗುತ್ತಿತ್ತು. ದಿಢೀರ್ ಪ್ರವಾಹದಿಂದ ಕೋಟ್ಯಂತರ ರೂಪಾಯಿ ವೆಚ್ಚದ ಈ ಯೋಜನೆಯು ನೀರುಪಾಲಾಯಿತು. ಮತ್ತೊಂದೆಡೆ ಮರು ನಿರ್ಮಾಣದ ಹೊರೆಯೂ ಹೆಚ್ಚಿತು. ❖



ಹಿಮಾಲಯ ಪರ್ವತದಲ್ಲಿ ಕರಗಿದ ಹಿಮ ಸಂಗ್ರಹಚಿತ್ರ

'ಫೆಪಾಂಗ್ ಘಾಟ್' ಗಾತ್ರದಲ್ಲಿ ವಿಸ್ತರಣೆ!

ಹಿಮಾಚಲ ಪ್ರದೇಶ ರಾಜ್ಯದ ವ್ಯಾಪ್ತಿಗೊಳಪಟ್ಟು 4068 ಮೀಟರ್ ಎತ್ತರದಲ್ಲಿ ನೆಲೆಗೊಂಡಿರುವ ಸಿಂಧೂ ನದಿ ಜಲಾನಯನ ಪ್ರದೇಶದಲ್ಲಿರುವ 'ಫೆಪಾಂಗ್ ಘಾಟ್' ಹಿಮಸರೋವರವನ್ನು ISRO ಪ್ರತ್ಯೇಕ 'ಕೇಸ್ ಸ್ಟಡಿ' ಆಗಿ ಅಭ್ಯಸಿಸಿದ್ದು, ಅದು ಗಣನೀಯ ಬದಲಾವಣೆಗಳಿಗೆ ಒಳಪಟ್ಟಿರುವುದನ್ನು ಎತ್ತಿ ತೋರಿಸಿದೆ. 'ಫೆಪಾಂಗ್ ಘಾಟ್' ಸರೋವರ 1989ರಲ್ಲಿ 36.49 ಹೆಕ್ಟೇರ್‌ಗಳಷ್ಟು ಪ್ರದೇಶದಲ್ಲಿ ವ್ಯಾಪಿಸಿತ್ತು. 2022 ರವರೆಗೆ ಈ ಸರೋವರದ ವ್ಯಾಪ್ತಿ 101.30 ಹೆಕ್ಟೇರ್‌ಗಳಿಗೆ ವಿಸ್ತೃತಗೊಂಡಿದ್ದು, ವರ್ಷಕ್ಕೆ ಸರಿಸುಮಾರು 1.96 ಹೆಕ್ಟೇರ್‌ಗಳಷ್ಟು ವಿಸ್ತರಿಸಿದೆ ಎಂದು ಮಾಹಿತಿ ನೀಡಿದೆ.

ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ..

1. ಕೋಕೋ ಬೀಜದ ಉತ್ಪಾದನೆಯನ್ನು ಭಾರತದಲ್ಲಿ ಹೆಚ್ಚಿಸಲು ಕೆಳಗಿನ ಯಾವ ಕೇಂದ್ರ ಸಂಸ್ಥೆ ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ?

ಎ. ಸೆಂಟ್ರಲ್ ಪ್ಲಾಂಟೇಶನ್ ಕ್ರಾಪ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್.
ಬಿ. ರಾಷ್ಟ್ರೀಯ ತೋಟಗಾರಿಕೆ ಸಂಶೋಧನಾ ಕೇಂದ್ರ.
ಸಿ. ರಾಷ್ಟ್ರೀಯ ಕೃಷಿ ಉತ್ಪನ್ನಗಳ ಸಂಶೋಧನಾ ಕೇಂದ್ರ.
ಡಿ. ಈಶಾನ್ಯ ತೋಟಗಾರಿಕೆ ಸಂಶೋಧನಾ ಕೇಂದ್ರ.

ಉತ್ತರ : ಎ

2. ಭಾರತದ ಕೆಳಗಿನ ಯಾವ ರಾಜ್ಯಗಳಲ್ಲಿ ಕೋಕೋ ಬೇಸಾಯವನ್ನು ಹೆಚ್ಚಾಗಿ ಕಾಣಬಹುದಾಗಿದೆ?

1. ಆಂಧ್ರಪ್ರದೇಶ. 2. ಮಹಾರಾಷ್ಟ್ರ.
3. ಕರ್ನಾಟಕ. 4. ತಮಿಳುನಾಡು.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 1, 3 ಮತ್ತು 4
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಬಿ

3. 2019ರಲ್ಲಿ ಕೆಳಗಿನ ಯಾವ ರಾಜ್ಯದ ಕಾರ್ಮಿಕರು ಇಲಿ ರಂಧ್ರ ಮಾದರಿಯ ಗಣಿಗಾರಿಕೆಯಲ್ಲಿ ಸಿಲುಕಿಕೊಂಡಿದ್ದರು?

ಎ. ಉತ್ತರಾಖಂಡ್. ಬಿ. ಛತ್ತೀಸ್‌ಗಡ
ಸಿ. ಮೇಘಾಲಯ. ಡಿ. ಮಣಿಪುರ.

ಉತ್ತರ : ಎ

4. ಇಲಿ ರಂಧ್ರ ಮಾದರಿಯ ಗಣಿಗಾರಿಕೆಯನ್ನು ನಡೆಸಲು ಕೆಳಗಿನ ಯಾವ ಪರವಾನಗಿಯನ್ನು ನೀಡಲಾಗುತ್ತದೆ?

ಎ. ಲಾರ್ಜ್ ಪಾಕೆಟ್ ಡೆಪಾಸಿಟ್ ಲೈಸೆನ್ಸ್.
ಬಿ. ಸ್ಮಾಲ್ ಪಾಕೆಟ್ ಡೆಪಾಸಿಟ್ ಲೈಸೆನ್ಸ್.
ಸಿ. ಇಲಿ ರಂಧ್ರ ಮಾದರಿ ಗಣಿಗಾರಿಕೆ ಪರವಾನಗಿ.
ಡಿ. ರಂಧ್ರ ಗಣಿಗಾರಿಕೆ ಪರವಾನಗಿ.

ಉತ್ತರ : ಬಿ

5. ಕೆಳಗಿನ ಯಾವ ಕಾಯ್ದೆಯ ಅನ್ವಯ ಭಾರತೀಯ ಔಷಧೀಯ ವಲಯವನ್ನು ಪ್ರಸ್ತುತ ಸಂದರ್ಭದಲ್ಲಿ ನಿರ್ವಹಿಸಲಾಗುತ್ತಿದೆ?

ಎ. ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ಆ್ಯಕ್ಟ್-1940.
ಬಿ. ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ನಿಯಮಾವಳಿಗಳು-1980.
ಸಿ. ಆರೋಗ್ಯದ ಉದ್ದೇಶಗಳಿಗಾಗಿ ಔಷಧಿಗಳ ನಿಯಮಾವಳಿ-1967.
ಡಿ. ಇಂಡಿಯನ್ ಪೇಟೆಂಟ್ ಆ್ಯಕ್ಟ್-1976.

ಉತ್ತರ : ಎ

6. ಭಾರತೀಯ ಔಷಧೀಯ ವಲಯದ ಉತ್ಪನ್ನಗಳ ಪ್ರಸ್ತುತ ಸ್ಥಿತಿಗತಿ ಮತ್ತು ಭವಿಷ್ಯದ ಅಂದಾಜಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. 2022-23ರ ಹಣಕಾಸು ವರ್ಷದಲ್ಲಿ ಭಾರತ 50 ಶತಕೋಟಿ ಡಾಲರ್ ಮೌಲ್ಯದ ಔಷಧ ಉತ್ಪನ್ನಗಳನ್ನು ರಫ್ತು ಮಾಡಿದೆ.
2. 2024ರ ಹಣಕಾಸು ವರ್ಷದ ಅಂತ್ಯದ ವೇಳೆಗೆ 65 ಶತಕೋಟಿ ಡಾಲರ್ ಮೌಲ್ಯದ ಔಷಧ ಉತ್ಪನ್ನಗಳನ್ನು ರಫ್ತು ಮಾಡುವ ಸಾಧ್ಯತೆ ಇದೆ.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ ಸಿ. 1 ಮತ್ತು 2
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿದೆ.

ಉತ್ತರ : ಸಿ

7. ಕೆಳಗಿನ ಯಾವ ಆಯೋಗದ ವರದಿಯ ನಂತರ ಜನರಲ್ ಡಯರ್ ಅವರನ್ನು ಬ್ರಿಟಿಷ್ ಸರ್ಕಾರದ ಸೇವೆಯಿಂದ ವಜಾಗೊಳಿಸಲಾಯಿತು?

ಎ. ಹಂಟರ್ ಆಯೋಗ.
ಬಿ. ವಿಲ್ಲಿಂಗ್ ಟನ್ ಆಯೋಗ.
ಸಿ. ವಿಲಿಯಂ ಸನ್ ಆಯೋಗ.
ಡಿ. ಸೈಮನ್ ಆಯೋಗ.

ಉತ್ತರ : ಎ

8. ಕೆಳಗಿನ ಯಾವ ಸ್ವಾತಂತ್ರ್ಯ ಹೋರಾಟಗಾರರನ್ನು ರೌಲತ್ ಕಾಯ್ದೆಯ ಅಡಿಯಲ್ಲಿ ಬಂಧಿಸಿದ ಕಾರಣದಿಂದ ಜಲಿಯನ್ ವಾಲಾಬಾಗ್ ನಲ್ಲಿ ಸಭೆ ಸೇರಲಾಯಿತು?

1. ಸೈಫ್‌ಉದ್ದಿನ್ ಲೀವ್.
2. ಡಾ ಸತ್ಯಪಾಲ್. 3. ಮಹಾತ್ಮ ಗಾಂಧಿ.
4. ಸುಭಾಷ್ ಚಂದ್ರ ಬೋಸ್.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. 2 ಮತ್ತು 4

ಉತ್ತರ : ಸಿ

9. ಭಾರತ ಕೆಳಗಿನ ಯಾವ ರಾಷ್ಟ್ರವನ್ನು ಹಿಂದಿಕ್ಕಿ ಸೌರ ವಿದ್ಯುತ್ ಶಕ್ತಿ ಉತ್ಪಾದನೆಯಲ್ಲಿ ಮೂರನೇ ಸ್ಥಾನವನ್ನು ಅಲಂಕರಿಸಿದೆ?

ಎ. ಜಪಾನ್. ಬಿ. ಅಮೆರಿಕ.
ಸಿ. ಫ್ರಾನ್ಸ್. ಡಿ. ನೆದರ್ಲೆಂಡ್ಸ್

ಉತ್ತರ : ಎ

10. ಕವಚ್ ಅಪಘಾತ ನಿಯಂತ್ರಣ ವ್ಯವಸ್ಥೆಯನ್ನು ಕೆಳಗಿನ ಯಾವ ಸಂಸ್ಥೆ ಅಭಿವೃದ್ಧಿಪಡಿಸಿದೆ?

ಎ. ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್.
ಬಿ. ರಿಸರ್ಚ್ ಡಿಸೈನ್ ಅಂಡ್ ಸ್ಟ್ಯಾಂಡರ್ಡ್ ಆರ್ಗನೈಸೇಷನ್.
ಸಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಾಂಬೆ.
ಡಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಬೆಂಗಳೂರು.

ಉತ್ತರ : ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಇಂಗ್ಲಿಷ್

Second Language ENGLISH
Unit-1 Prose : A Hero

21. Did Swami muster up courage to sleep alone after the burglar's incident?

Answer: No, Swami did not muster courage to sleep alone after burglar's incident. He pretended to sleep at his usual place beside granny at 7.30 pm much before the return of his father.

22. Who supported Swami?

Answer: Swami's mother supported him by showing her anger against his father. She asked Swami's father to let him sleep where he likes and need not risk his life again.

23. A report about a boy in the newspaper was an unexpected event in Swami's life. Justify.

Answer: The report generated a difference of opinion between Swami and his father. Swami felt it may not be a boy but a strong grown up man, who could fight with tiger. But his father was angry about Swami questioning the veracity of news report and also for emphasizing more on strength of person than courage to fight a tiger. Hence Swami's father challenged him to prove his courage by sleeping alone in the office room. This was a frightening proposal for twelve years old Swami who was habituated to sleep beside his granny. This was an unexpected event in Swami's life.

24. Swami made a comment on the newspaper report. Was he right? How did his view differ from that of his father?

Answer: When Swami's father read the report of the courage of young boy who faced a tiger bravely, Swami did not agree with his father. Swami felt it may not be a boy but a strong grown up man, who could fight with tiger.

Swami's father was angry about Swami questioning the veracity of news report and also for emphasizing more on strength of person than courage to fight a tiger. Given age of Swami being approximately 12 years his experience compared to his father's was small, he is right in his comment.

25. What desperate attempts did Swami make to escape from his father?

Answer: When his father challenged Swami to sleep alone in his office room that night, Swami tried various attempts to escape. Swami first tried to change the subject by talking loudly and enthusiastically about another matter, but his father was not diverted. Then Swami tiptoed into the bed beside his granny, pulled the blanket over his face and pretended to sleep by snoring. When his father started making him shift to room, Swami throwed a look of appeal at his mother to save him. His mother's appeal to allow him sleep in the hall was rejected by his father. Swami's repeated his request of not shifting saying that there may be scorpions behind the law books since the room is dusty. Thus Swami desperately tried to escape from his father proposition.

26. Why did Swami conclude that his father's proposition was frightful?

Answer: Swami was habituated to sleep beside his granny in the passage and any change in this practice kept him trembling and awake all night. Hence he concluded his father's proposition was frightful.

27. As the night advanced, Swami felt that something terrible would happen to him. What would it be? How would it happen?

Answer: As the night advanced and the silence in the house deepened, Swami's heart began beating faster and he felt something terrible would happen to him. Swami remembered stories of devils and ghosts. Every moment he expected devils to come up and carry him away; there was the instance of his old friend in fourth class who suddenly disappeared and was said to have been carried off by a ghost to Siam or Nepal.

28. There was absolute silence in the room. In spite of, some noises reached Swami's ears. What were they?

Answer: In spite of absolute silence, Swami was able to hear ticking off the clock, rustle of the trees, snoring sounds and vague insects humming.

29. Narrate Swami's dreadful experience when he was lying under the bench

Answer: In sleep under the bench Swami was racked with nightmares. A tiger was chasing him. His feet stuck to the ground. He desperately tried to escape but his feet would not move; the tiger was at his back, and he could hear its claws scratch the ground; it became louder with every moment. Swami tried open eyes but his eye lids would not open and nightmare continued. Swami groaned in despair.

30. How was Swami honoured by his classmates, teacher and headmaster?

Answer: Congratulations were showered on Swami. His classmates looked him with respect and teacher patted his back. The headmaster said he is a true scout. (The Police Inspector invited him to join police.)

31. Why did father want Swami to sleep alone in the office room?

Answer: Swami's father wanted him sleep alone in the office room to prove that he is a courageous boy as despite being in second form, he was habituated to sleep beside his granny. Father wanted him become independent person.

32. Who do you think was wiser, Swami or his father? Justify your preference.

Answer: Swami's father was wiser as he used a comment by Swami about a news report to improve his personality by showing courage of sleeping alone in office room and make him independent person.

33. Why did Swami feel relieved at the end?

Answer: Swami's father wanted him to continue sleep independently without being at granny's side. But clever Swami slept beside granny before father returned home. Swami's mother expressed anger at his father for not letting him sleep wherever he likes and asked him not to risk Swami's life again.

(Contd…….)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Solutions

16. If 15g of urea is dissolved in 90g of water, find (a) the relative lowering of vapour pressure of the solution.

(b) the vapour pressure of the solution if the vapour pressure of pure water at that temperature is 3000 Pa.

Ans:- According to Raoult's law, the relative lowering of vapour pressure is given by,

$$\frac{P^0 - P}{P^0} = \frac{n_2}{n_1 + n_2}$$

(a) $\text{Number of moles} = \frac{\text{mass}}{\text{molecular mass}}$

$\therefore n_2$ the number of moles of urea

$$= \frac{15}{60} = 0.25$$

and n_1 the number of moles of the solvent water is $= \frac{90}{18} = 5$

$$\therefore \frac{P^0 - P}{P^0} = \frac{0.25}{5 + 0.25} = 0.04762$$

$\therefore$ the relative lowering of the vapour pressure is 0.04762.

(b) $P^0 = 3000\,\text{Pa (given)}$

$$P^0 - P = 0.04762 \times P^0$$
$$= 0.04762 \times 3000$$
$$= 142.8\ \text{Pa}$$

$$\therefore P = P^0 - 142.8 = 3000 - 142.8$$
$$= 2857.14\ \text{Pa}$$

$\therefore$ Vapour pressure of the solution

$$= 2857.14\ \text{Pa}$$

17. State the Van't Hoff's theory of dilute solutions

Ans:- The Van't Hoff's theory of dilute solutions states that – The osmotic pressure of a dilute solution is equal to the pressure which the solute would exert if it can be converted into a gas at the same temperature occupying the same volume as that of the solution.

18. What is meant by a semipermeable membrane? Give examples.

Ans:- A membrane which allows only the solvent molecules to pass through it but not he solute particles is called a semipermeable membrane. *Eg:* Plant membranes, animal membranes like pig's bladder skin and artificial membranes like cupric ferrocyanide deposited on a porous wall etc.,

19. Components of a binary mixture of two liquids A and B were being separated by distillation. After some time, separation of components stopped and composition of vapour phase became same as that of liquid phase. Both the components started coming in the distillate. Explain why this happened.

Ans:- When the composition of a binary mixture of two liquids A and B in the liquid state and in the vapour phase is the same, the mixture is known as azeotropic mixture. In any azeotropic mixture, the components cannot be separated any more.

20. Explain why on addition of 1 mole of NaC*l* to 1 litre of water, the boiling point of water increases, while addition of 1 mole of methyl alcohol to one litre of water decreases its boiling point.

Ans:- Sodium chloride (NaCl) is a non-volatile solute. When added to water taken in a beaker, the solute occupies some surface area. As a result, the vapour pressure decreases and the boiling point of solution increases. On the other hand, methyl alcohol is more volatile than water. The addition of methyl alcohol to water increases the total vapour pressure of the solution. The boiling point of the solution decreases.

21. Concentration terms such as mass percentage, ppm, mole fraction and molality are independent of temperature; however molarity is a function of temperature. Explain.

Ans. By definition, molarity takes into account the volume of the solution which changes with change in temperature. All other terms, for expressing the concentration of a solution involve the mass of the solvent which is not influenced by the temperature.

22. What is the significance of Henry's Law constant K_H?

Ans:- Henry's Law constant (K_H) helps in comparing the relative solubilities of different gases in the same solvent (e.g. water). In general, lesser the value of K_H, more is the solubility of a gas.

23. Why are aquatic species more comfortable in cold water in comparison to warm water?

Ans:- For breathing, aquatic species need oxygen. In general the solubility of a gas in water or any other solvent decreases with the rise in temperature. Therefore, oxygen is more soluble in cold water than in warm water. As a result, aquatic species feel more comfortable in cold water compared to warm water.

24. Why is vapour pressure of an aqueous solution of glucose lower than that of water?

Ans:- Evaporation of liquid is a surface phenomenon. More the surface area available, more is the evaporation of the liquid. Now glucose is a non-volatile solute. It occupies certain surface area of water. This means evaporation of water from the surface gets reduced and its vapour presence also gets lowered.

25. How does sprinkling of salt help in clearing the snow covered roads in hilly areas? Explain the phenomenon involved in the process.

Ans:- The phenomenon involved in the melting of snow in snow covered roads is the depression in freezing point which is caused by the addition of non-volatile impurities to a liquid. Addition of salt (sodium chloride) lowers the freezing point temperature of water and thus, helps in the melting of snow.

26. How can the hard calcium carbonate layer of the egg be removed without damaging its semipermeable membrane? Can this egg be inserted into a bottle with a narrow neck without distorting its shape? Explain the process involved.

Ans:- The hard layer of egg white in colour, consists of calcium carbonate.

It can be removed by placing the egg in dilute hydrochloric acid for sometime. It dissolves calcium carbonate, leaving behind the egg without damaging its soft semipermeable membrane. The size of the egg can be reduced or it shrinks by placing in saline water (contains NaC*l*) for sometime. The fluid from the egg slowly escapes and passes into saline water which is at higher osmotic pressure (hypertonic in nature). Now, the egg with reduced size can be inserted in a bottle with narrow neck. If the bottle contains water, the egg will regain its original shape and size due to osmosis of water (hypotonic) through the semipermeable membrane.

ಸೇಡು ತೀರಿಸಿಕೊಳ್ಳಲು ತಹತಹ, ಬಿಜೆಪಿಯಲ್ಲಿ ಅತೃಪ್ತರ ಸೇಡಿನ ಜ್ವಾಲೆ ಸ್ಫೋಟಿಸಲಿದೆ: ಸಿ.ಎಂ

‘ವಿಜಯೇಂದ್ರ ತಲೆದಂಡಕ್ಕೆ ವ್ಯೂಹ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಬಿಜೆಪಿಯಲ್ಲಿ ಅತೃಪ್ತರ ಸೇಡಿನ ಜ್ವಾಲೆ ಸ್ಫೋಟಿಸಲಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಲೆದಂಡಕ್ಕೆ ಹಲವರು ಕಾದಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂಬ ಬಿಜೆಪಿ ನಾಯಕರ ಹೇಳಿಕೆಗೆ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ನಮ್ಮ ಸರ್ಕಾರ ಐದು ವರ್ಷ ಪೂರ್ಣಗೊಳಿಸಲಿದೆ. ಆ ಬಗ್ಗೆ ಚಿಂತೆ ಮಾಡುವುದನ್ನು ಬಿಡಿ’ ಎಂದಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ವಂಚಿತ ಅತೃಪ್ತ ನಾಯಕರು ತಮಗೆ ಆಗಿರುವ ಅನ್ಯಾಯದ ವಿರುದ್ಧ ಸೇಡು ತೀರಿಸಿಕೊಳ್ಳಲು ತಹತಹಿಸುತ್ತಿದ್ದಾರೆ. ಚುನಾವಣಾ ಫಲಿತಾಂಶ ಹೊರಬಿದ್ದ ತಕ್ಷಣ ಈ ಸೇಡಿನ ಜ್ವಾಲೆ ಧಗಧಗಿಸಿದರೆ ಆಶ್ಚರ್ಯವಿಲ್ಲ ಎಂದು ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಮುಕ್ಕಾಲು ಪಾಲು ನಾಯಕರು ವಿಜಯೇಂದ್ರ ತಲೆದಂಡಕ್ಕೆ ವ್ಯೂಹ ರಚನೆಯಲ್ಲಿ ನಿರತರಾಗಿದ್ದಾರೆ. ಚುನಾವಣೆಯ ಹಿನ್ನಡೆಯನ್ನು ತಂದೆ– ಮಕ್ಕಳ ತಲೆಗೆ ಕಟ್ಟಿ, ಅವರನ್ನು ಮೂಲೆಗೆ ತಳ್ಳಲು ಕಸರತ್ತಿನ ತಯಾರಿ ಭರದಿಂದ ನಡೆಯುತ್ತಿದೆ. ಈ ಪ್ರಯತ್ನಕ್ಕೆ ಆರ್‌ಎಸ್‌ಎಸ್‌ನ ಒಂದು ಬಣದ ಆಶೀರ್ವಾದ ಕೂಡ ಇದೆ ಎಂಬುದಾಗಿ ಹೇಳಲಾಗುತ್ತಿದೆ ಎಂದಿದ್ದಾರೆ.

‘ಬಿಜೆಪಿ ಟಿಕೆಟ್ ವಂಚಿತ ನಾಯಕರು ಪಕ್ಷದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಭಾಗವಹಿಸಿಲ್ಲ. ಯಡಿಯೂರಪ್ಪ ಮತ್ತು ಅವರ ಮಕ್ಕಳು ಶಾಶ್ವತವಾಗಿ ಮೂಲೆಗೆ ಸೇರುವ ಆತಂಕದಲ್ಲಿದ್ದಾರೆ. ಚುನಾವಣಾ ಫಲಿತಾಂಶದ ಬಳಿಕ ಬಿಜೆಪಿ ರಾಜ್ಯ ಘಟಕದಲ್ಲಿ ಭಿನ್ನಮತದ ಮಹಾಸ್ಫೋಟ ಆಗಲಿದೆ’ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪತನಗೊಳ್ಳಲಿದೆ ಎಂದು ಹೇಳಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ತಮ್ಮ ಭವಿಷ್ಯದ ಬಗ್ಗೆ ಮೊದಲು ಯೋಚಿಸಲಿ. ಪಕ್ಷದ್ರೋಹಿಯಾಗಿರುವ ಅವರ ಪಕ್ಷ ಈ ಚುನಾವಣೆಯಲ್ಲಿ ದೂಳೀಪಟವಾಗಲಿದೆ. ಚುನಾವಣೆ ಬಳಿಕ ಶಿಂದೆ ಕೂಡ ಮೂಲೆ ಸೇರುವುದು ಖಚಿತ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

‘ಬಂಡೆ’ ಸದ್ದು ಮಾಡುತ್ತಿದೆ ಎಚ್ಚರ: ವಿಜಯೇಂದ್ರ



ವಿಜಯೇಂದ್ರ

‘ಹೈಕಮಾಂಡ್ ಸೂತ್ರ ಧಿಕ್ಕರಿಸುವ ನಿಮ್ಮ ತಂತ್ರದ ಜಾಡು ಹಿಡಿದಿರುವ ನಿಮ್ಮ ವಿರೋಧಿ ಬಣ ಸುಮ್ಮನೆ ಕುಳಿತಿಲ್ಲ. ಅಧಿಕಾರ ಹಂಚಿಕೆ ಕಾಲ ಹತ್ತಿರವಾಗುತ್ತಿದ್ದಂತೆ ಪರಿಸ್ಥಿತಿ ಯಾವ ರೀತಿ ಬಿಗಡಾಯಿಸುತ್ತದೆ ಎನ್ನುವುದರ ಸೂಚನೆಯಂತೆ ಕಾಂಗ್ರೆಸ್‌ನ ‘ಬಂಡೆ’ಯೊಂದು ಈಗಾಗಲೇ ಸದ್ದು ಮಾಡುತ್ತಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಲೋಕಸಭೆ ಚುನಾವಣೆ ಬಳಿಕ ತಂದೆ– ಮಕ್ಕಳನ್ನು ಬಿಜೆಪಿಯಲ್ಲಿ ಮೂಲೆಗುಂಪು ಮಾಡುತ್ತಾರೆ. ವಿಜಯೇಂದ್ರ ತಲೆದಂಡಕ್ಕಾಗಿ ಹಲವರು ಕಾದಿದ್ದಾರೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ.


‘ನೀವು ಮುಖ್ಯಮಂತ್ರಿ ಆಗುವ ವೇಳೆ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಬದಿಗೊತ್ತಿದ್ದೀರಿ. ಅತಿ ಶೀಘ್ರವೇ ನಿಮ್ಮ ಬಣ ರಾಜಕೀಯದ ಕಿತ್ತಾಟದ ಬಣ್ಣ ಬಯಲಿಗೆ ಬರಲಿದೆ. ದೀಪ ಆರುವ ಮುನ್ನ ಜೋರಾಗಿ ಉರಿಯುತ್ತದೆ. ಕಾಲವೇ ನಿಮಗೆ ಉತ್ತರ ಹೇಳಲಿದೆ. ಯಾರು ಯಾರ ವಿರುದ್ಧ ಮುಗಿಬೀಳುತ್ತಾರೆ? ಯಾರು ಎಲ್ಲಿರುತ್ತಾರೆ ಎಂಬುದನ್ನು ಕೆಲವೇ ದಿನಗಳು ಕಾದು ನೋಡಿ. ಕಾಂಗ್ರೆಸ್ ಪಡಸಾಲೆಯಲ್ಲೇ ನಿಮಗೆ ಉತ್ತರ ಸಿಗಲಿದೆ’ ಎಂದರು.

‘ಭಾರತೀಯ ಜನತಾ ಪಕ್ಷ ತತ್ವ, ಸಿದ್ಧಾಂತ ಆಧರಿಸಿದ ಶಿಸ್ತಿನ ಪಕ್ಷ. ಕಳೆಯಿಲ್ಲದೆ ಬೆಳೆದು ನಿಂತಿರುವ ಸಮೃದ್ಧ ತೋಟ. ಕಾಂಗ್ರೆಸ್‌ನಲ್ಲಿರುವ ಪಾರ್ಥೇನಿಯಂ ಗಿಡಗಳು ನಮ್ಮಲ್ಲಿಲ್ಲ. ಅಧಿಕಾರಕ್ಕಾಗಿ ಹಪಹಪಿಸುವ ಕಳ್ಳಿ ಗಿಡಗಳಾವುವೂ ನಮ್ಮ ಪಕ್ಷದಲ್ಲಿ ತಲೆಯೆತ್ತಲು ಸಾಧ್ಯವಿಲ್ಲ. ತಲೆ ಎತ್ತಲು ಹೋದರೆ ಅದಕ್ಕೆ ಮದ್ದು ಅರೆಯಲು ನಮ್ಮ ವರಿಷ್ಠ ಮಂಡಳಿಯು ಸಶಕ್ತವಾಗಿದೆ’ ಎಂದಿದ್ದಾರೆ.

‘ಭಾರತದ ರಾಜಕೀಯ ಭೂಪಟದಲ್ಲಿ ಮಾಸಿ ಹೋಗುತ್ತಿರುವ ನಿಮ್ಮ ಕಾಂಗ್ರೆಸ್ ಪಕ್ಷ ಅಧಿಕಾರ ಕಬಳಿಸುವುದನ್ನಷ್ಟೇ ಕೇಂದ್ರೀಕರಿಸಿ ಸುಳ್ಳು ಭರವಸೆಗಳು ಹಾಗೂ ಆಮಿಷಗಳ ಬಲೆ ಹೆಣೆದು ಕರ್ನಾಟಕದಲ್ಲಿ ಅಧಿಕಾರ ದಕ್ಕಿಸಿಕೊಂಡಿದೆ. ಲೋಕಸಭಾ ಚುನಾವಣೆಯ ನಂತರ ಈ ಟೊಳ್ಳು ಬಲೆಯನ್ನು ಜನರೇ ತುಂಡರಿಸಲಿದ್ದಾರೆ’ ಎಂದು ವಿಜಯೇಂದ್ರ ಹೇಳಿದ್ದಾರೆ.

ಡಿಕೆಶಿಗೆ ಶುಭಾಶಯ ಕೋರಿದ ಧನಕರ್

ಪ್ರಜಾವಾಣಿ ವಾರ್ತೆ



ಜಗದೀಪ್ ಧನಕರ್

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬುಧವಾರ ಜನ್ಮದಿನದ ಶುಭಾಶಯ ಕೋರಿರುವ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ‘ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದಕ್ಕಾಗಿ ನಿಮಗೆ ದೀರ್ಘ ಆಯುಸ್ಸು ದೊರಕಲಿ’ ಎಂದು ಹಾರೈಸಿದ್ದಾರೆ.

ಬುಧವಾರ ಶಿವಕುಮಾರ್ ಅವರ ಜನ್ಮದಿನ. ಅವರಿಗೆ ಪತ್ರ ಬರೆದಿರುವ ಉಪ ರಾಷ್ಟ್ರಪತಿ, ‘ನಿಮಗೆ ಜನ್ಮದಿನದ ಶುಭಾಶಯಗಳು. ದೇವರು ನಿಮಗೆ ಸಂತೋಷ, ಆರೋಗ್ಯ ಕರುಣಿಸಲಿ’ ಎಂದು ಶುಭ ಕೋರಿದ್ದಾರೆ.

ಶಿವಕುಮಾರ್ ಅವರು ಉಪ ರಾಷ್ಟ್ರಪತಿಯವರ ಪತ್ರವನ್ನು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ. ಧನಕರ್ ಅವರಿಗೆ ಮರೋಲೆ ಬರೆದಿರುವ ಉಪ ಮುಖ್ಯಮಂತ್ರಿ, ಶುಭಾಶಯ ಕೋರಿರುವುದಕ್ಕೆ ಧನ್ಯವಾದ ಹೇಳಿದ್ದಾರೆ.

ಸಿಎಂ, ಗೃಹ ಸಚಿವರ ರಾಜೀನಾಮೆಗೆ ಆಗ್ರಹ

ಬೆಂಗಳೂರು: ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಸಾಧ್ಯವಾಗದಿದ್ದರೆ, ರಾಜೀನಾಮೆ ನೀಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಅಂಜಲಿ ಎಂಬ ಯುವತಿಯ ಹತ್ಯೆಯ ಹಿನ್ನೆಲೆಯಲ್ಲಿ ‘ಎಕ್ಸ್’ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ಇನ್ನೂ ಎಷ್ಟು ಹೆಣ್ಣು ಮಕ್ಕಳ ಬಲಿಯಾಗಬೇಕು ಎಂದು ನಿಮ್ಮ ಸರ್ಕಾರ ಕಾಯುತ್ತಿದೆ ಎಂದು ರಾಜ್ಯದ ಜನ ನಿಮ್ಮನ್ನು ಪ್ರಶ್ನಿಸುತ್ತಿದ್ದಾರೆ’ ಎಂದಿದ್ದಾರೆ.

‘ಪೊಲೀಸ್ ವ್ಯವಸ್ಥೆ ನಿಷ್ಕ್ರಿಯಗೊಳಿಸಿರುವ ನಿಮ್ಮ ಸರ್ಕಾರದ ನೆರಳಲ್ಲಿ ಅಮಾಯಕ ಹೆಣ್ಣುಮಕ್ಕಳು ರಕ್ಷಣೆಗಾಗಿ ಪರಿತಪಿಸಿ ಪ್ರಾಣ ಭೀತಿಯಿಂದ ತತ್ತರಿಸುತ್ತಿದ್ದಾರೆ. ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ ಹತ್ಯೆಯ ಬೆನ್ನಲ್ಲೇ ಕೊಡಗಿನಲ್ಲಿ ಅಪ್ರಾಪ್ತೆ ಮೀನಾಳ ರುಂಡ ಕಡಿದು ರಾಕ್ಷಸನೊಬ್ಬ ಅಟ್ಟಹಾಸ ಮೆರೆದು, ಆಕೆಯ ರಕ್ತ ಆರುವ ಮುನ್ನವೇ ಅಂಜಲಿ ಎಂಬ ಯುವತಿಯನ್ನು ಚಾಕುವಿನಿಂದ ಇರಿದು ಕೊಂದಿರುವ ದಾರುಣ ಘಟನೆ ಹುಬ್ಬಳ್ಳಿಯಲ್ಲಿ ಘಟಿಸಿದೆ’ ಎಂದಿದ್ದಾರೆ.

ವಿಮಾನ ಟಿಕೆಟ್ ಬುಕ್ ಮಾಡಿದ್ದರೂ ಕೊನೆ ಕ್ಷಣದಲ್ಲಿ ಮನಸ್ಸು ಬದಲು

ಇನ್ನೂ ವಾಪಸ್ ಬಾರದ ಪ್ರಜ್ವಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಅವರು ಜರ್ಮನಿಯಲ್ಲಿ ತಲೆಮರೆಸಿಕೊಂಡಿದ್ದಾರೆ. ಅಲ್ಲಿಂದ ಬೆಂಗಳೂರಿಗೆ ವಾಪಸ್ ಆಗುವುದನ್ನು ಮತ್ತೆ ಮುಂದೂಡಿದ್ದಾರೆ.

ಪ್ರಜ್ವಲ್, ಜರ್ಮನಿಯ ಮ್ಯೂನಿಕ್ ನಗರದಿಂದ ಬೆಂಗಳೂರಿಗೆ ಬುಧವಾರ ಮಧ್ಯಾಹ್ನ ಹೊರಡುತ್ತಾರೆ. ವಿಮಾನದ ಟಿಕೆಟ್ ಬುಕ್ ಮಾಡಿದ್ದಾರೆ ಎಂಬ ಮಾಹಿತಿ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ಲಭಿಸಿತ್ತು. ಗುರುವಾರ ಮಧ್ಯರಾತ್ರಿ ವೇಳೆಗೆ ಬೆಂಗಳೂರು ತಲುಪುವ ನಿರೀಕ್ಷೆಯಿತ್ತು. ಬೆಂಗಳೂರಿನ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಎಸ್‌ಐಟಿ ಅಧಿಕಾರಿಗಳು ನಿಗಾ ವಹಿಸಿದ್ದರು.

ಆದರೆ, ಜರ್ಮನಿಯಿಂದ ಬುಧವಾರ ಮಧ್ಯಾಹ್ನ ಹೊರಟ ವಿಮಾನದಲ್ಲಿ ಪ್ರಜ್ವಲ್ ಪ್ರಯಾಣಿಸಿಲ್ಲ ಎಂಬ ಮಾಹಿತಿ ಸಂಜೆ ವೇಳೆಗೆ ಎಸ್‌ಐಟಿಗೆ ಲಭಿಸಿತು. ಈ ಹಿಂದೆಯೂ ಎರಡು ಬಾರಿ ವಿಮಾನ ಟಿಕೆಟ್ ಬುಕ್ ಮಾಡಿದ್ದ ಪ್ರಜ್ವಲ್ ಕೊನೆಕ್ಷಣದಲ್ಲಿ ರದ್ದುಪಡಿಸಿದ್ದರು.

ಮಹಿಳೆ ಅಪಹರಣ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ಷರತ್ತುಬದ್ಧ ಜಾಮೀನು ಸಿಕ್ಕಿದ್ದು ಜೈಲಿನಿಂದ ಬಿಡುಗಡೆ ಆಗಿದ್ದಾರೆ. ನಂತರದ ಬೆಳವಣಿಗೆಯಲ್ಲಿ ಪ್ರಜ್ವಲ್ ಅವರು ವಾಪಸ್ ಆಗುವ ಮಾಹಿತಿ ತನಿಖಾ ತಂಡಕ್ಕೆ ಸಿಕ್ಕಿತ್ತು ಎಂದು ಮೂಲಗಳು ಹೇಳಿವೆ.

ರೇವಣ್ಣ ಅವರು ಹೊಳೆನರಸೀಪುರಕ್ಕೆ ತೆರಳದೆ ನಗರದಲ್ಲೇ ಇದ್ದು ಪ್ರಕರಣದ ಕುರಿತು ವಕೀಲ ಸಿ.ವಿ.ನಾಗೇಶ್ ಅವರ ಜೊತೆಗೆ ಬುಧವಾರ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಪ್ರಜ್ವಲ್ ವಿರುದ್ಧ ಯುಎಪಿಎ: ಪ್ರಗತಿಪರರ ಆಗ್ರಹ

ಬೆಂಗಳೂರು: ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕು. ಯುಎಪಿಎ ಕಾಯ್ದೆಯ ಅಡಿಯೂ ಪ್ರಕರಣ ದಾಖಲಿಸಬೇಕು ಎಂದು 100ಕ್ಕೂ ಹೆಚ್ಚು ಮಂದಿ ಪ್ರಗತಿಪರ ಚಿಂತಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ಪ್ರಜ್ವಲ್ ವಿರುದ್ಧ ಆರೋಪ ಕೇಳಿ ಬಂದ ತಕ್ಷಣ ಅವರ ಚಲನವಲನಗಳ ಮೇಲೆ ನಿಗಾ ವಹಿಸದೇ ಸರ್ಕಾರ ನಿರ್ಲಕ್ಷ್ಯ ಮಾಡಿದ್ದು ಸರಿಯಲ್ಲ. ಸರಣಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಯನ್ನು ವಿದೇಶಕ್ಕೆ ಪಲಾಯನ ಮಾಡಲು ಅವಕಾಶ ನೀಡಿದ್ದೇ ತಪ್ಪು. ಇದರಿಂದ ಮಹಿಳೆಯರು ಸರ್ಕಾರದ ಮೇಲೆ ಇಟ್ಟ ವಿಶ್ವಾಸಕ್ಕೆ ಚ್ಯುತಿಯಾಗಿದೆ. ಹಾಸನ ಕ್ಷೇತ್ರದ ಚುನಾವಣೆಯನ್ನು ಸ್ಥಗಿತಗೊಳಿಸದೆ ಆರೋಪಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಒದಗಿಸಿದ್ದು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಮಾಡಿದ ಅಪಚಾರ’ ಎಂದು ಕುಂ.ವೀರಭದ್ರಪ್ಪ, ಜಿ. ರಾಮಕೃಷ್ಣ, ವಸುಂಧರ ಭೂಪತಿ, ಕೆ. ಶರೀಫಾ, ಮೀನಾಕ್ಷಿ ಬಾಳಿ, ಎಂ.ಆರ್. ಕಮಲಾ, ಕೆ. ಫಣಿರಾಜ್, ನಾಗೇಶ ಹೆಗಡೆ, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರಗೋಡು, ರತಿರಾವ್ ಮತ್ತಿತರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇಂತಹ ಪ್ರಕರಣದಲ್ಲಿ ರಾಜಕೀಯ ನಾಯಕರು ಜಾತಿ ಆಧಾರಿತ, ಲಿಂಗತ್ವ ಸೂಕ್ಷ್ಮತೆ ಇಲ್ಲದ ಹೇಳಿಕೆ ನೀಡುತ್ತಿದ್ದಾರೆ. ಸಮೂಹ ಮಾಧ್ಯಮಗಳು ಸಂತ್ರಸ್ತೆಯರನ್ನೇ ಅಪರಾಧಿಗಳಂತೆ ಬಿಂಬಿಸುತ್ತಿವೆ. ಅವರ ಮಾನಸಿಕ ನೆಮ್ಮದಿ ಹಾಳುಮಾಡಿವೆ. ಸಂತ್ರಸ್ತೆಯರ ಘನತೆಯನ್ನು ಕುಂದಿಸುತ್ತಿವೆ. ಗುರುತು ಬಯಲಾದ ಕುಟುಂಬಗಳು ತೀವ್ರ ಮಾನಸಿಕ ಯಾತನೆಗೆ ಗುರಿಯಾಗಿವೆ. ಇಂತಹ ಕುಟುಂಬಗಳ ಸದಸ್ಯರು ಮತ್ತು ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗಿದ್ದಾರೆ. ಕೆಲವರು ಆತ್ಮಹತ್ಯೆಗೂ ಪ್ರಯತ್ನಿಸಿದ್ದಾರೆ. ಸಂತ್ರಸ್ತರು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿದ್ದು, ದೂರು ಕೊಡುವುದಕ್ಕೆ ಹಿಂಜರಿಯುತ್ತಿದ್ದಾರೆ. ಇಂತಹ ಸಮಯದಲ್ಲಿ ಸರ್ಕಾರ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಶಾಸಕ ಎಚ್.ಡಿ.ರೇವಣ್ಣ ಲೈಂಗಿಕ ದೌರ್ಜನ್ಯ, ಸಂತ್ರಸ್ತ ಮಹಿಳೆ ಅಪಹರಣದ ಆರೋಪ ಹೊತ್ತಿದ್ದಾರೆ. ತನಿಖೆ ಪೂರ್ಣಗೊಳ್ಳುವವರೆಗೂ ಅವರ ವಿಧಾನಸಭಾ ಸದಸ್ಯತ್ವ ಅಮಾನತು ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

‘ಸಾಹಿತಿಗಳ ಪತ್ರವನ್ನು ಗಂಭೀರವಾಗಿ ಪರಿಗಣಿಸುತ್ತೇವೆ’

ಬೆಂಗಳೂರು: ‘ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಹಿತಿಗಳು ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರವನ್ನು ಗಂಭೀರವಾಗಿ ಪರಿಗಣಿಸುತ್ತೇವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಈ ಕುರಿತು ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಸಾಹಿತಿಗಳು ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರವನ್ನು ತರಿಸಿಕೊಂಡು ನೋಡುತ್ತೇನೆ. ಪತ್ರದಲ್ಲಿ ಉಲ್ಲೇಖಿಸಿರುವ ಸಂಗತಿಗಳ ಕುರಿತು ವಿಶೇಷ ತನಿಖಾ ತಂಡ (ಎಸ್‌ಐಟಿ) ಕೂಡ ಪರಿಗಣಿಸಲಿದೆ’ ಎಂದರು. ‘ಪೆನ್ ಡ್ರೈವ್ ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲ ಇದೆ’ ಎಂಬ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಕೇಳಿದಾಗ, ‘ತಿಮಿಂಗಿಲ ಯಾರು ಎಂಬುದನ್ನು ಕುಮಾರಸ್ವಾಮಿ ಹೇಳಲಿ. ಅವರಿಗೆ ಗೊತ್ತಿದ್ದರೆ ಹೇಳದಿರುವುದು ದೊಡ್ಡ ತಪ್ಪು. ಅವರು ಮೊದಲು ದಾಖಲೆ ಕೊಡಲಿ, ಆ ಬಳಿಕ ತನಿಖೆ ನಡೆಸುತ್ತೇವೆ’ ಎಂದರು.

ದೇವರಾಜೇಗೌಡ ಕಚೇರಿಯಲ್ಲಿ ಎಸ್‌ಐಟಿ ಶೋಧ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ: ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿರುವ ವಕೀಲ ದೇವರಾಜೇಗೌಡರ ಬಿಜೆಪಿ ಕಚೇರಿಗೆ ಮಂಗಳವಾರ ಭೇಟಿ ನೀಡಿದ ಎಸ್‌ಐಟಿ ಅಧಿಕಾರಿಗಳು ಪ್ರಜ್ವಲ್, ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ, ದಾಖಲೆಗಳನ್ನು ವಶಪಡಿಸಿಕೊಂಡರು.

ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣ ಸಂಬಂಧ ಆರೋಪಿಯಾಗಿರುವ ವಕೀಲ ದೇವರಾಜೇಗೌಡರನ್ನು ಮೇ 14ರ ಬೆಳಿಗ್ಗೆ 9 ಗಂಟೆಯಿಂದ ಮೇ 15ರ ರಾತ್ರಿ ತನಕ ಎರಡು ದಿನ ಪೊಲೀಸ್ ಕಸ್ಟಡಿಗೆ ಜೆಎಂಎಫ್‌ಸಿ ನ್ಯಾಯಾಲಯ ನೀಡಿತ್ತು.

ಪುರಸಭೆ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಎಚ್.ವಿ.ಪುಟ್ಟರಾಜು (ಪುಟ್ಟಿ) ಮನೆಯಲ್ಲೂ ಎಸ್‌ಐಟಿ ತಂಡದ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಪೆನ್‌ಡ್ರೈವ್ ಹಂಚಿಕೆ: 18 ಕಡೆ ಎಸ್‌ಐಟಿ ಪರಿಶೀಲನೆ

ಹಾಸನ: ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸೇರಿದ್ದು ಎನ್ನಲಾದ ಅಶ್ಲೀಲ ವಿಡಿಯೊ ಹೊಂದಿದ ಪೆನ್‌ಡ್ರೈವ್ ಹಂಚಿಕೆ ಪ್ರಕರಣ ಸಂಬಂಧ ಮಂಗಳವಾರದಿಂದ ಬುಧವಾರ ಬೆಳಗಿನ ಜಾವದವರೆಗೆ ಎಸ್‌ಐಟಿ ಅಧಿಕಾರಿಗಳು ನಗರದ 18 ಕಡೆಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದ್ದಾರೆ.

ಎಸ್‌ಐಟಿ ಅಧಿಕಾರಿಗಳ ತಂಡ ಬುಧವಾರ ಬೆಳಗಿನ ಜಾವ 3.30ರವರೆಗೂ ಶೋಧ ನಡೆಸಿದೆ. ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಆಪ್ತರಾದ ಕ್ವಾಲಿಟಿ ಬಾರ್ ಶರತ್, ಪುನೀತ್, ಎಚ್.ಪಿ.ಕಿರಣ್, ಕಾಂಗ್ರೆಸ್ ಕಾರ್ಯಕರ್ತರಾದ ಪುಟ್ಟರಾಜು, ನವೀನ್ ಗೌಡ, ಪ್ರಜ್ವಲ್ ರೇವಣ್ಣ ಮಾಜಿ ಕಾರುಚಾಲಕ ಕಾರ್ತಿಕ್, ಶಶಿ, ಚೇತನ್‌ಗೌಡ ನಿವಾಸದ ಮೇಲೂ ಎಸ್‌ಐಟಿ ತಂಡಗಳು ಪ್ರತ್ಯೇಕವಾಗಿ ದಾಳಿ ನಡೆಸಿವೆ.

ಕಾಂಗ್ರೆಸ್ಸಿಗರ ಮನೆ ಮೇಲೂ ದಾಳಿ: ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಆರೋಪಿ ಕಾಂಗ್ರೆಸ್ ಕಾರ್ಯಕರ್ತ, ಸಚಿವ ಜಮೀರ್ ಅಹಮದ್ ಅವರ ಆಪ್ತ ನವೀನ್‌ಗೌಡ ಅವರ ನೆಲ್ಕೆ ಗ್ರಾಮದ ನಿವಾಸದ ಮೇಲೆಯೂ ಎಸ್‌ಐಟಿ ಅಧಿಕಾರಿಗಳಿಂದ ದಾಳಿ ನಡೆದಿದೆ. ಪೆನ್‌ಡ್ರೈವ್ ಹಂಚಿದ ಸಂಬಂಧ ಸಾಕ್ಷ್ಯ ಸಂಗ್ರಹಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರಾಕಾರ ಮಳೆ: ಮರ ಬಿದ್ದು ಮಹಿಳೆ ಸಾವು

ಮುಂದುವರಿದ ಮಳೆ: ಕುಸಿದ ತಾಪಮಾನ

ಪ್ರಜಾವಾಣಿ ವಾರ್ತೆ

ಹೊಸಪೇಟೆ/ಬಳ್ಳಾರಿ: ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಹರಪನಹಳ್ಳಿ ಸಹಿತ ಜಿಲ್ಲೆಯ ಕೆಲವೆಡೆ ಮಂಗಳವಾರ ರಾತ್ರಿ ಮತ್ತು ಬುಧವಾರ ಮಧ್ಯಾಹ್ನ ಮಳೆಯಾಗಿದೆ.

ಹರಪನಹಳ್ಳಿ ತಾಲ್ಲೂಕು ಮಾಚಿಹಳ್ಳಿ ತಾಂಡದಲ್ಲಿ ಗಾಳಿ, ಮಳೆಗೆ 10ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಒಂದು ಮನೆ, ದೇವರಾಜ ಅರಸ್ ಪ್ರೌಢಶಾಲೆಯ ಚಾವಣಿ ತಗಡುಗಳು ಹಾರಿ ಹೋಗಿವೆ.

ಬಳ್ಳಾರಿ ಜಿಲ್ಲೆಯ ಕುಡತಿನಿ ಪಟ್ಟಣ ಮತ್ತು ಸಿರುಗುಪ್ಪ ತಾಲ್ಲೂಕುಗಳಲ್ಲೂ ಉತ್ತಮ ಮಳೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ದಿನವಿಡೀ ಮೋಡ ಕವಿದ ವಾತಾವರಣ ಇತ್ತು. ಹೀಗಾಗಿ ತಾಪಮಾನದ ಪ್ರಮಾಣ ಗಣನೀಯವಾಗಿ ಕುಸಿದಿದೆ.

ವಿಜಯಪುರ ವರದಿ: ವಿಜಯಪುರ ನಗರ ಸೇರಿ ಜಿಲ್ಲೆಯ ಆಲಮಟ್ಟಿ, ಬಸವನಬಾಗೇವಾಡಿ, ಇಂಡಿ, ಸಿಂದಗಿ, ಮುದ್ದೇಬಿಹಾಳ ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ಮಳೆಯಾಗಿದೆ.

ಚಿಕ್ಕಮಗಳೂರು ವರದಿ: ಜಿಲ್ಲೆಯಲ್ಲಿ ಎನ್.ಆರ್.ಪುರ, ಮೂಡಿಗೆರೆ, ಕೊಪ್ಪ, ತರೀಕೆರೆ, ಕಡೂರು ಸೇರಿ ಎಲ್ಲೆಡೆ ಮಂಗಳವಾರ ಮಧ್ಯರಾತ್ರಿ ಮಳೆ ಸುರಿದಿದೆ. ಅಜ್ಜಂಪುರ ತಾಲ್ಲೂಕಿನ ಶಿವನಿ ಹೋಬಳಿಯ ಹಲವು ಹಳ್ಳಿಗಳಲ್ಲಿ ಮೊದಲ ಮಳೆಯಾಗಿದೆ.



ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಮಾಚಿಹಳ್ಳಿ ತಾಂಡಾದಲ್ಲಿ ಗಾಳಿಗೆ ಮನೆಯೊಂದರ ಚಾವಣಿ ತಗಡುಗಳು ಹಾರಿ ಕೆಳಗೆ ಬಿದ್ದಿವೆ

ಚಿಕ್ಕಮಗಳೂರು ತಾಲ್ಲೂಕಿನ ಕಳಸಾಪುರ ಸುತ್ತಮುತ್ತ ಕೂಡ ಹಳ್ಳಗಳಲ್ಲಿ ನೀರು ಹರಿಯುವಷ್ಟು ಮಳೆಯಾಗಿದೆ. ಸಿಂದಿಗೆರೆ ಬಳಿ ರಸ್ತೆ ಮೇಲೆ ನೀರು ಹರಿಯಿತು. ಹಲವು ವರ್ಷಗಳ ನಂತರ ಈ ನೀರು ಕಂಡ ಜನ ಸಂತಸಪಟ್ಟರು. ಬಾಳೆಹೊನ್ನೂರು, ಶೃಂಗೇರಿಯಲ್ಲಿ ಕೂಡ ಮಳೆಯಾಗಿದೆ.

ಮಳೆ ಎಲ್ಲಿ, ಎಷ್ಟು? (ಸೆಂ.ಮೀ.ಗಳಲ್ಲಿ)

ಕೊಪ್ಪಳ ಜಿಲ್ಲೆ	
ಕುಷ್ಟಗಿ	4
ಬೀದರ್ ಜಿಲ್ಲೆ	
ನಿರ್ಣಾ ಹೋಬಳಿ, ಹುಮನಾಬಾದ್ ತಾಲ್ಲೂಕು	4.5
ಹುಲಸೂರು ತಾಲ್ಲೂಕು	2.6
ಚಿಟಗುಪ್ಪ	1.8
ಬೀದರ್	1.4
ದಾವಣಗೆರೆ ಜಿಲ್ಲೆ	
ಚನ್ನಗಿರಿ	3
ರಾಯಚೂರು ಜಿಲ್ಲೆ	
ಉಮಲೂಟಿ, ಸಿಂಧನೂರು ತಾಲ್ಲೂಕು	2.5
ಗುಡದೂರ	2.2
ಕಲ್ಮಂಗಿ	2
ಕನ್ನಾಳ, ಮಸ್ಕಿ ತಾಲ್ಲೂಕು	2.2
ತಲೇಖಾನ	2.1
ಪೈದೊಡ್ಡಿ	2.2
ಗುರಗುಂಟಾ, ಲಿಂಗಸುಗೂರು ತಾಲ್ಲೂಕು	2
ಕಲಬುರಗಿ ಜಿಲ್ಲೆ	
ಆಂದೋಲ	5.2
ಜೇವರ್ಗಿ	4.7
ನೆಲೋಗಿ	3.2
ಯಡ್ರಾಮಿ	3.3

ದಾವಣಗೆರೆ ವರದಿ: ನಗರ ಸೇರಿದಂತೆ ಜಿಲ್ಲೆಯ ಚನ್ನಗಿರಿ, ನ್ಯಾಮತಿ, ಹರಿಹರ ತಾಲ್ಲೂಕಿನ ಮಲೇಬೆನ್ನೂರು, ಕಡರನಾಯ್ಕನಹಳ್ಳಿ ಭಾಗಗಳಲ್ಲಿ ಬುಧವಾರ ಮಳೆಯಾಗಿದೆ.

ಮಲೇಬೆನ್ನೂರಿನಲ್ಲಿ, ಶಿವಮೊಗ್ಗ ಜಿಲ್ಲೆಯ ಕುಂಸಿ ಹಾಗೂ ಶಿಕಾರಿಪುರ ಭಾಗದಲ್ಲೂ ಮಳೆಯಾಗಿದೆ. ದಾವಣಗೆರೆ ನಗರದಲ್ಲಿ ಸಂಜೆ ಮಳೆ ಸುರಿಯಿತು.

ಸುಬ್ರಹ್ಮಣ್ಯ ವರದಿ: ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ, ಸುಳ್ಯ, ಕಡಬ, ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಬುಧವಾರ ಸಂಜೆ ಧಾರಾಕಾರ ಮಳೆಯಾಗಿದೆ. ಸುಬ್ರಹ್ಮಣ್ಯ ಸಮೀಪದ ಕುಲ್ಕುಂದ ಬಸವನಮೂಲೆಯಲ್ಲಿ ಗಾಳಿಯಿಂದ ಕೂಡಿದ ಮಳೆಗೆ ಮರ ಬಿದ್ದು ಮೀನಾಕ್ಷಿ (65) ಎಂಬುವರು ಮೃತಪಟ್ಟಿದ್ದಾರೆ.

ಬೆಳ್ತಂಗಡಿ ತಾಲ್ಲೂಕಿನ ಕೊಯ್ಯೂರು ಗ್ರಾಮದ ಮೈಂದಕೋಡಿ ಲೋಕಯ್ಯ ಗೌಡರ ಮನೆ ಸಮೀಪದ ತೆಂಗಿನ ಮರಕ್ಕೆ ಸಿಡಿಲು ಬಡಿದ ಪರಿಣಾಮ ಗರಿಗಳ ನಡುವೆ ಬೆಂಕಿ ಕಾಣಿಸಿಕೊಂಡಿದೆ. ಅರೆ ಕ್ಷಣದಲ್ಲಿ ತೆಂಗಿನ ಮರ ಹೊತ್ತಿ ಉರಿದಿದೆ.

ಕೊಡಗು ಜಿಲ್ಲೆಯ ಕುಶಾಲನಗರ, ಮಡಿಕೇರಿ ಹಾಗೂ ವಿರಾಜಪೇಟೆ, ಹಾಸನ ಜಿಲ್ಲೆಯ ಆಲೂರು ಹಾಗೂ ಚಾಮರಾಜನಗರ ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ.

ಕಾರಟಗಿಯಲ್ಲಿ 8 ಸೆಂ.ಮೀ ಮಳೆ

ಕೊಪ್ಪಳ: ಬುಧವಾರ ಬೆಳಗಿನಜಾವದ ತನಕ ಜಿಲ್ಲೆಯ ಹಲವು ಕಡೆ ಉತ್ತಮ ಮಳೆಯಾಗಿದ್ದು, ಕಾರಟಗಿ ತಾಲ್ಲೂಕಿನಲ್ಲಿ 8 ಸೆಂ.ಮೀ. ಮಳೆ ದಾಖಲಾಗಿದೆ.

ಮಂಗಳವಾರ ಮಧ್ಯರಾತ್ರಿ ಆರಂಭವಾದ ಮಳೆ ಬೆಳಗಿನ ತನಕವೂ ಸುರಿಯಿತು.

ರಾಯಚೂರು ಜಿಲ್ಲೆಯ ಕೆಲ ಪ್ರದೇಶಗಳಲ್ಲಿ ಬುಧವಾರ ಬೆಳಗಿನಜಾವ ಸಾಧಾರಣ ಮಳೆಯಾಗಿದೆ. ಜಿಲ್ಲೆಯಲ್ಲಿ ವಾತಾವರಣ ತಂಪಾದ ಕಾರಣ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ.

ಪರಿಷತ್: ಮೈತ್ರಿಯಲ್ಲಿ ಅಪಸ್ವರ!

ಪ್ರಜಾವಾಣಿ ವಾರ್ತೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ವಿವೇಕಾನಂದ (ಎಡದಿಂದ ಎರಡನೆಯವರು) ಅವರಿಗೆ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಬುಧವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ‘ಬಿ ಫಾರಂ’ ನೀಡಿದರು. ಮುಖಂಡ ನಾಗಣ್ಣ ಗೌಡ, ಪಕ್ಷದ ಪ್ರಮುಖರ ಸಮಿತಿಯ ಅಧ್ಯಕ್ಷ ಜಿ.ಟಿ. ದೇವೇಗೌಡ ಹಾಗೂ ಮುಖಂಡ ನಿರಂಜನಮೂರ್ತಿ ಜತೆಗಿದ್ದರು

ಮೈಸೂರು: ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಗೆ ‘ಒಮ್ಮತದ ಅಭ್ಯರ್ಥಿ’ ಆಯ್ಕೆ ಮಾಡುವುದು ಎನ್‌ಡಿಎ ಮೈತ್ರಿಕೂಟಕ್ಕೆ ಸಾಧ್ಯವಾಗದಿರುವುದರಿಂದ ಗೊಂದಲ ಏರ್ಪಟ್ಟಿದೆ. ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಯಾರು ಎನ್ನುವ ಪ್ರಶ್ನೆಯೂ ಎದುರಾಗಿದೆ.

ಈ ಕ್ಷೇತ್ರಕ್ಕೆ ಬಿಜೆಪಿಯಿಂದ ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ಈ.ಸಿ. ನಿಂಗರಾಜ್‌ಗೌಡ ಅವರಿಗೆ ಮೇ 12ರಂದು ಟಿಕೆಟ್ ಘೋಷಿಸಲಾಗಿತ್ತು. ಅದರಂತೆ ಅವರು, ಬಿ–ಫಾರಂ ಇಲ್ಲದೇ ಬುಧವಾರ ನಾಮಪತ್ರ ಸಲ್ಲಿಸಿದ್ದಾರೆ. ‘ನಾನೇ ಎನ್‌ಡಿಎ ಅಭ್ಯರ್ಥಿ’ ಎಂದು ಹೇಳಿಕೊಂಡಿದ್ದಾರೆ. ‘ಮೈತ್ರಿ ಮಾತುಕತೆಯಂತೆ ಕ್ಷೇತ್ರವನ್ನು ಬಿಜೆಪಿಯು ಜೆಡಿಎಸ್‌ಗೆ ಬಿಟ್ಟು ಕೊಟ್ಟಿದೆ’ ಎಂದು ಹೇಳಲಾಗುತ್ತಿರುವ ನಡುವೆಯೇ, ನಿಂಗರಾಜ್ ಗೌಡ ಬಿಜೆಪಿ ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಈ ನಡುವೆ, ಮಂಡ್ಯದ ರಿಯಲ್ ಎಸ್ಟೇಟ್ ಉದ್ಯಮಿ ವಿವೇಕಾನಂದ ಅವರಿಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಬುಧವಾರ ಬೆಳಿಗ್ಗೆ ‘ಬಿ ಫಾರಂ’ ವಿತರಿಸಿದ್ದಾರೆ. ಅವರು ಗುರುವಾರ (ಮೇ 16) ನಾಮಪತ್ರ ಸಲ್ಲಿಸಲಿದ್ದಾರೆ. ‘ನಾನೇ ಎನ್‌ಡಿಎ ಅಭ್ಯರ್ಥಿ’ ಎಂದು ಅವರು ಹೇಳುತ್ತಿದ್ದು ಜೆಡಿಎಸ್ ನಾಯಕರೂ ಬೆಂಬಲಿಸಿದ್ದಾರೆ.

ಮತ್ತೊಬ್ಬ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಕೂಡ ಹಿತೈಷಿಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ತಮಗೇ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸದಲ್ಲಿದ್ದ ಅವರು, ‘ಮೇ 16ರಂದು ನಾಮಪತ್ರ ಸಲ್ಲಿಕೆಗೆ ಬನ್ನಿ’ ಎಂದು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿ ಶಿಕ್ಷಕರು ಹಾಗೂ ಬೆಂಬಲಿಗರನ್ನು ಆಹ್ವಾನಿಸಿದ್ದರು. ಅವರಿಗೇ ಟಿಕೆಟ್ ಖಚಿತವಾಗಿದೆ ಎಂದು ಹೇಳಲಾಗಿತ್ತು. ಆದರೆ, ಪಡೆದುಕೊಳ್ಳುವಲ್ಲಿ ವಿವೇಕಾನಂದ ಯಶಸ್ವಿಯಾಗಿದ್ದಾರೆ.

ಬಿಜೆಪಿ ಟಿಕೆಟ್ ಘೋಷಣೆ ನಂತರ ನಡೆದ ಬೆಳವಣಿಗೆಯಲ್ಲಿ ಜೆಡಿಎಸ್ ನಾಯಕರ ಒತ್ತಾಯದಂತೆ ಕ್ಷೇತ್ರವನ್ನು ಆ ಪಕ್ಷಕ್ಕೆ ಬಿಟ್ಟು ಕೊಡಲಾಗಿದೆ ಎಂದು ಹೇಳಲಾಗುತ್ತಿದೆ. ಕ್ಷೇತ್ರ ಹಂಚಿಕೆ ವಿಷಯದಲ್ಲಿ ಉಭಯ ಪಕ್ಷಗಳಲ್ಲಿ ಒಮ್ಮತ ಮೂಡಿಬಂದಿಲ್ಲ.

ನಾಮಪತ್ರ ಸಲ್ಲಿಕೆಗೆ ಗುರುವಾರ ಕಡೆಯ ದಿನವಾಗಿದೆ.

‘ಪಕ್ಷವು ನನಗೆ ಅಧಿಕೃತವಾಗಿ ಟಿಕೆಟ್ ಘೋಷಿಸಿದ್ದು, ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದೇನೆ. ಸಂಸದೀಯ ಮಂಡಳಿಯಲ್ಲಿ ಚರ್ಚಿಸಿ ಹೆಸರು ಪ್ರಕಟಿಸಿದ ನಂತರ ಕ್ಷೇತ್ರವನ್ನು ಬಿಟ್ಟು ಕೊಡುವುದು ರಾಷ್ಟ್ರೀಯ ಪಕ್ಷಕ್ಕೆ ಮುಖಭಂಗದ ಸಂಗತಿಯಾಗುತ್ತದೆ. ವರಿಷ್ಠರು ಮಾತುಕತೆಗೆ ಬರುವಂತೆ ತಿಳಿಸಿದ್ದರು. ನಾಮಪತ್ರ ಸಲ್ಲಿಕೆ ಮಾಡಿಯೇ ಬರುತ್ತೇನೆ ಎಂದು ತಿಳಿಸಿದ್ದೆ. ಅದಕ್ಕೆ ಒಪ್ಪಿದ್ದರು’ ಎಂದು ಈ.ಸಿ. ನಿಂಗರಾಜ್ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

ಬುಧವಾರ 21 ಮಂದಿ ನಾಮಪತ್ರ

ವಿಧಾನ ಪರಿಷತ್ತಿನ ಪದವೀಧರರ ಮತ್ತು ಶಿಕ್ಷಕರ ತಲಾ ಮೂರು ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಗೆ ಬುಧವಾರ 21 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಕೆಗೆ ಗುರುವಾರ (ಮೇ 16) ಕೊನೆ ದಿನವಾಗಿದೆ.

ಈವರೆಗೆ 47 ಪುರುಷರು ಮತ್ತು ಇಬ್ಬರು ಮಹಿಳೆಯರು ನಾಮಪತ್ರ ಸಲ್ಲಿಸಿದ್ದಾರೆ. ಕಾಂಗ್ರೆಸ್‌ನ ಐದು, ಬಿಜೆಪಿಯ ನಾಲ್ಕು ಮತ್ತು ಜೆಡಿಎಸ್‌ನ ಒಬ್ಬ ಅಭ್ಯರ್ಥಿ ಈವರೆಗೆ ನಾಮಪತ್ರ ಸಲ್ಲಿಸಿದ್ದಾರೆ. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ 40 ಮಂದಿ ಕೂಡ ಕಣಕ್ಕಿಳಿದಿದ್ದಾರೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಅತ್ಯಧಿಕ 14 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ 11, ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಎಂಟು, ಆಗ್ನೇಯ ಶಿಕ್ಷಕರ ಕ್ಷೇತ್ರ ಮತ್ತು ನೈರುತ್ಯ ಪದವೀಧರರ ಕ್ಷೇತ್ರಗಳಲ್ಲಿ ತಲಾ ಆರು ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ನಾಲ್ವರು ನಾಮಪತ್ರ ಸಲ್ಲಿಸಿದ್ದಾರೆ.

‘ಠಾಣೆ ವ್ಯಾಪಾರ ಕೇಂದ್ರವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿವಿಲ್ ವ್ಯಾಜ್ಯವನ್ನು ಕ್ರಿಮಿನಲ್ ಪ್ರಕರಣವಾಗಿ ಮಾರ್ಪಡಿಸಲು ಹೇಗೆ ಸಾಧ್ಯ? ಠಾಣೆಯಲ್ಲಿ ಸಿವಿಲ್ ವ್ಯಾಜ್ಯ ತೀರ್ಮಾನಿಸಲು ಪೊಲೀಸರಿಗೆ ಅಧಿಕಾರ ನೀಡಿದವರು ಯಾರು? ಪೊಲೀಸ್ ಠಾಣೆಗಳನ್ನು ವ್ಯಾಪಾರ ಕೇಂದ್ರ ಮಾಡಿಕೊಳ್ಳಲಾಗಿದೆಯೇ? ಠಾಣೆಯಲ್ಲಿ ಕೂತು ವಸೂಲಿ ಮಾಡುವುದೇ ಪೊಲೀಸರ ಕೆಲಸವೇ... ಎಂದು ಹೈಕೋರ್ಟ್ ಮೌಖಿಕವಾಗಿ ಕಿಡಿ ಕಾರಿದೆ.

ನಿವೇಶನವೊಂದರ ಖರೀದಿಗೆ ಸಂಬಂಧಿಸಿದ ವಿಚಾರದಲ್ಲಿ ಮಾರಾಟದಾರರಿಗೆ ಹಣ ಪಾವತಿಸಲು ಖರೀದಿದಾರರಿಗೆ ಒತ್ತಾಯಿಸಿದ ಹಾಗೂ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಮೂರ್ತಿ ಎಚ್.ಪಿ.ಸಂದೇಶ್, ಚಂದ್ರಾ ಲೇಔಟ್ ಠಾಣೆಯ ಪೊಲೀಸರ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಪೊಲೀಸ್ ಠಾಣೆಯಲ್ಲಿ ಸಿವಿಲ್ ವ್ಯಾಜ್ಯ ಇತ್ಯರ್ಥಪಡಿಸುವ ಪೊಲೀಸರ ಕಾರ್ಯವೈಖರಿ ಪುನರಾವರ್ತನೆ ಆಗುತ್ತಿದೆ’ ಎಂದು ಕಟು ಶಬ್ದಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ‘ಠಾಣೆಗಳನ್ನು ವ್ಯಾಪಾರ ಕೇಂದ್ರಗಳಾಗಿ ಮಾರ್ಪಡಿಸಲಾಗಿದೆ’ ಎಂದು ನ್ಯಾಯಪೀಠ ತೀವ್ರ ಅತೃಪ್ತಿ ವ್ಯಕ್ತಪಡಿಸಿದೆ.

‘ಪೊಲೀಸರು ಸಿವಿಲ್ ವ್ಯಾಜ್ಯದಲ್ಲಿ ಮಧ್ಯಪ್ರವೇಶ ಮಾಡಬಾರದು ಎಂಬುದಾಗಿ ಹೈಕೋರ್ಟ್‌ನ ಸಾಕಷ್ಟು ಪೀಠಗಳು ಹಲವು ಬಾರಿ ಆದೇಶಿಸಿವೆ. ಆದರೂ, ಪೊಲೀಸರು ಮಾತ್ರ ಸಿವಿಲ್ ವ್ಯಾಜ್ಯಗಳಲ್ಲಿ ಮೂಗು ತೂರಿಸುತ್ತಲೇ ಇದ್ದಾರೆ. ಈ ಕ್ರಮ ಒಪ್ಪುವಂತದಲ್ಲ’ ಎಂದು ಹೇಳಿರುವ ನ್ಯಾಯಪೀಠ, ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಚಂದ್ರಾ ಲೇ ಔಟ್ ಠಾಣೆಯ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಹಾಗೂ ಅದಕ್ಕೆ ಸಂಬಂಧಿಸಿದ ಮುಂದಿನ ಎಲ್ಲಾ ನ್ಯಾಯಿಕ ಪ್ರಕ್ರಿಯೆಗಳಿಗೆ ಮಧ್ಯಂತರ ತಡೆ ನೀಡಿದೆ.

‘ಈ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು ದೂರುದಾರನ ಜೊತೆಗೆ ಕೈಜೋಡಿಸಿ ಕಳ್ಳಾಟ ಆಡಿರುವುದು ಮೇಲ್ನೋಟಕ್ಕೇ ಕಂಡುಬರುತ್ತಿದೆ. ಈ ಅಧಿಕಾರಿ ವಿರುದ್ಧ ಬೆಂಗಳೂರು ಪಶ್ಚಿಮ ವಿಭಾಗದ ಡಿಸಿಪಿ ಸೂಕ್ತ ಕಾನೂನು ಕ್ರಮ ಕೈಗೊಂಡು ನ್ಯಾಯಾಲಯಕ್ಕೆ ಒಂದು ತಿಂಗಳಲ್ಲಿ ವರದಿ ಸಲ್ಲಿಸಬೇಕು. ತನಿಖಾಧಿಕಾರಿ ಕಾನೂನು ದುರ್ಬಳಕೆ ಮಾಡಿರುವ ಬಗ್ಗೆ ಅರ್ಜಿದಾರರು ತಮ್ಮ ಬಳಿಯಿರುವ ಎಲ್ಲಾ ದಾಖಲೆಗಳನ್ನು ಡಿಸಿಪಿಗೆ ಸಲ್ಲಿಸಬಹುದು’ ಎಂದು ನ್ಯಾಯಪೀಠ ಸೂಚಿಸಿದೆ.

ಪಾಕ್‌ಗೆ ಬೇಹುಗಾರಿಕೆ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಬೇಹುಗಾರಿಕೆ ಪ್ರಕರಣದಲ್ಲಿ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿ ನೂರುದ್ದೀನ್ ಅಲಿಯಾಸ್ ರಫಿ ಎಂಬುವರನ್ನು ಎನ್‌ಐಎ ಅಧಿಕಾರಿಗಳು ಮೈಸೂರಿನಲ್ಲಿ ಬುಧವಾರ ಬಂಧಿಸಿದ್ದಾರೆ.

ಆರೋಪಿಯ ಮನೆಯಲ್ಲಿ ಮೊಬೈಲ್ ಫೋನ್, ಪೆನ್‌ಡ್ರೈವ್, ಡ್ರೋನ್ ಮೊದಲಾದವು ಪತ್ತೆಯಾಗಿವೆ.


ಬೆಂಗಳೂರಿನ ಇಸ್ರೇಲ್ ಹಾಗೂ ಚೆನ್ನೈನ ಅಮೆರಿಕ ರಾಯಭಾರ ಕಚೇರಿಗಳ ಮೇಲೆ ಸ್ಫೋಟಕ್ಕೆ ಸಂಚು ರೂಪಿಸಿದ ಆರೋಪದ ಮೇಲೆ ಶ್ರೀಲಂಕಾ ಪ್ರಜೆ ಮೊಹಮ್ಮದ್ ಸಕೀರ್ ಹುಸೇನ್ ಹಾಗೂ ಕೊಲಂಬೊದ ಪಾಕಿಸ್ತಾನದ ರಾಜತಾಂತ್ರಿಕ ಕಚೇರಿ ನೌಕರರಾಗಿರುವ ಪಾಕಿಸ್ತಾನ ಪ್ರಜೆ ಅಮೀರ್ ಜುಬೇರ್ ಸಿದ್ದಿಕಿ ಅವರನ್ನು 2014ರಲ್ಲಿ ಬಂಧಿಸಿ ಎನ್‌ಐಎ ಪ್ರಕರಣ ದಾಖಲಿಸಿತ್ತು. ಈ ಆರೋಪಿಗಳಿಗೆ ಭಾರತದ ನಕಲಿ ನೋಟು ಪೂರೈಸುವ ಮೂಲಕ ಭಯೋತ್ಪಾದಕ ಕೃತ್ಯಕ್ಕೆ ಸಹಕರಿಸಿದ ಆರೋಪದಲ್ಲಿ ನೂರುದ್ದೀನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸಿತ್ತು.

2023ರ ಆಗಸ್ಟ್‌ನಲ್ಲಿ ಆರೋಪಿಯು ಜಾಮೀನಿನ ಮೇಲೆ ಹೊರಬಂದಿದ್ದು, ನಂತರ ತಲೆಮರೆಸಿಕೊಂಡಿದ್ದರು.

ಮಳೆ: 11 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಕೆಲವೆಡೆ ಗುರುವಾರವೂ ಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 11 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಕಲಬುರಗಿ, ಯಾದಗಿರಿ, ಗದಗ, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳ ಜತೆಗೆ ಬೆಳಗಾವಿ, ವಿಜಯಪುರ, ಧಾರವಾಡ, ಹಾವೇರಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ ಕೆಲ ಸ್ಥಳಗಳಲ್ಲಿ 50ರಿಂದ 60 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಭಾರಿ ಮಳೆಯಾಗುವ ಸಂಭವವಿದೆ. ಇನ್ನುಳಿದ ಜಿಲ್ಲೆಗಳ ಕೆಲ ಸ್ಥಳಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.



ಸುಭಾಷಿತ

ನಾವು ಶ್ರೀಮಂತರಾಗುವುದು ನಮ್ಮಲ್ಲಿರುವ ಸಂಪತ್ತನ್ನು ವೃದ್ಧಿಸಿಕೊಳ್ಳುವುದರಿಂದ ಮಾತ್ರ ಅಲ್ಲ, ನಮ್ಮ ಖರ್ಚುವೆಚ್ಚವನ್ನು ಕಡಿಮೆ ಮಾಡಿಕೊಳ್ಳುವುದರ ಮೂಲಕವೂ ಆಗಲು ಸಾಧ್ಯ. -ಅರಿಸ್ಟಾಟಲ್

ಉತ್ತಮ ಆರೋಗ್ಯಕ್ಕೆ ಬೇಕು ಒಳ್ಳೆಯ ಆಹಾರ ಕ್ರಮ

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು (ಐಸಿಎಂಆರ್) ಭಾರತೀಯರ ಆಹಾರ ಕ್ರಮ ಹೇಗಿರಬೇಕು ಎಂಬುದರ ಬಗ್ಗೆ ಶಿಫಾರಸುಗಳನ್ನು ಪ್ರಕಟಿಸಿದೆ. ನಮ್ಮ ಆಹಾರ ಪದ್ಧತಿಯಲ್ಲಿ ಇರುವ ಕೊರತೆ ಮತ್ತು ಅದನ್ನು ನಿವಾರಿಸಬೇಕಾದ ಅಗತ್ಯವನ್ನು ಇದು ಎತ್ತಿ ತೋರಿಸಿದೆ. ನಮ್ಮ ಆಹಾರ ಪದ್ಧತಿಯಲ್ಲಿ ಕೊರತೆಗಳು ಇವೆ ಎಂಬುದಷ್ಟೇ ಅಲ್ಲ, ಹಲವು ಅಭ್ಯಾಸಗಳು ಕೆಟ್ಟದಾಗಿವೆ ಮತ್ತು ಅನಾರೋಗ್ಯಕಾರಿಯಾಗಿವೆ. ನಮ್ಮ ದೇಶದ ಜನರಲ್ಲಿ ಕಂಡುಬರುವ ಶೇ 56.40ರಷ್ಟು ರೋಗಗಳಿಗೆ ಅನಾರೋಗ್ಯಕರ ಮತ್ತು ಕೆಟ್ಟ ಆಹಾರ ಪದ್ಧತಿಯೇ ಕಾರಣ ಎಂದು ಐಸಿಎಂಆರ್ ಹೇಳಿದೆ. ಸರಿಯಾದ ಆಹಾರವನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳುವುದು ಎಷ್ಟು ಮುಖ್ಯ ಎಂಬುದರತ್ತ ಐಸಿಎಂಆರ್ ಶಿಫಾರಸು ಬೆಳಕು ಚೆಲ್ಲಿದೆ. ನಮ್ಮ ದೇಹಕ್ಕೆ ಸಮತೋಲಿತ ಆಹಾರದ ಅಗತ್ಯ ಇದೆ. ಆದರೆ, ಹೆಚ್ಚಿನ ದಿನಗಳಲ್ಲಿ ನಾವು ತೆಗೆದುಕೊಳ್ಳುವ ಆಹಾರ ಸಮತೋಲನದಿಂದ ಕೂಡಿರುವುದಿಲ್ಲ. ನಾವು ತೆಗೆದುಕೊಳ್ಳುವ ಸಮತೋಲಿತ ಆಹಾರದಲ್ಲಿ ಏಕದಳ ಮತ್ತು ದ್ವಿದಳ ಧಾನ್ಯದಿಂದ ಪಡೆಯುವ ಕ್ಯಾಲೊರಿ ಶೇ 45ಕ್ಕಿಂತ ಹೆಚ್ಚು ಇರಬಾರದು. ಬೀನ್ಸ್ ಅಥವಾ ಮಾಂಸ ಇಲ್ಲವೇ ಈ ಎರಡನ್ನೂ ಸೇವಿಸಿದಾಗಿನ ಕ್ಯಾಲೊರಿ ಪ್ರಮಾಣವು ಶೇ 15ರಷ್ಟು ಇರಬೇಕು. ಉಳಿದ ಭಾಗವು ಒಣಹಣ್ಣು– ಬೀಜಗಳು, ತರಕಾರಿಗಳು, ಹಣ್ಣುಗಳು ಮತ್ತು ಹಾಲಿನಿಂದ ಕೂಡಿರಬೇಕು. ಉಪ್ಪು, ಸಕ್ಕರೆ ಮತ್ತು ಅಡುಗೆ ಎಣ್ಣೆಯನ್ನು ಕನಿಷ್ಠ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು.



ಆರೋಗ್ಯಕರ ಮತ್ತು ಪೌಷ್ಟಿಕಾಂಶಗಳಿಂದ ಕೂಡಿದ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳುವುದು ನಮ್ಮೆಲ್ಲರ ಹೊಣೆ

ಆಹಾರ ಕ್ರಮಕ್ಕೆ ಸಂಬಂಧಿಸಿ 17 ಮಾರ್ಗಸೂಚಿಗಳನ್ನು ಐಸಿಎಂಆರ್ ನೀಡಿದೆ. ಅಗತ್ಯವಾಗಿ ಬೇಕಾದ ಪೌಷ್ಟಿಕಾಂಶಗಳನ್ನು ಪಡೆದುಕೊಳ್ಳಲು ಮತ್ತು ಜೀವನಕ್ರಮದಲ್ಲಿನ ಅಸಮರ್ಪಕತೆಯಿಂದ ಬರುವ ಬೊಜ್ಜು ಮತ್ತು ಮಧುಮೇಹದಂತಹ ಸಮಸ್ಯೆಗಳಿಂದ ತಪ್ಪಿಸಿಕೊಳ್ಳಲು ಈ ಮಾರ್ಗಸೂಚಿಗಳು ನೆರವಾಗಲಿವೆ. ಆರೋಗ್ಯಕರ ಆಹಾರ ಪದ್ಧತಿ ಮತ್ತು ಅಗತ್ಯ ಪ್ರಮಾಣದ ದೈಹಿಕ ಚಟುವಟಿಕೆಯು 'ಟೈಪ್–2' ಮಧುಮೇಹ ಮತ್ತು ಹೃದಯ ಸಂಬಂಧಿ ರೋಗಗಳನ್ನು ತಡೆಗಟ್ಟಲು ನೆರವಾಗುತ್ತವೆ. ಈಗ ನಾವು ತೆಗೆದುಕೊಳ್ಳುವ ಆಹಾರದಲ್ಲಿ ಶರ್ಕರಪಿಷ್ಟವೇ ಹೆಚ್ಚಿನ ಪ್ರಮಾಣದಲ್ಲಿ ಇದೆ. ಜೊತೆಗೆ, ಕುರುಕಲು ಮತ್ತು ಕೊಬ್ಬಿನ ಅಂಶ ಹೆಚ್ಚು ಇರುವ ಆಹಾರವನ್ನು ತಿನ್ನುತ್ತೇವೆ. ಅತಿಯಾಗಿ ಸಂಸ್ಕರಿಸಿದ ಆಹಾರವನ್ನೂ ಹೆಚ್ಚಾಗಿ ತೆಗೆದುಕೊಳ್ಳುತ್ತೇವೆ. ನಾವು ತಿನ್ನುವ ಹೆಚ್ಚಿನ ಆಹಾರಗಳಲ್ಲಿ ಎಣ್ಣೆ ಮತ್ತು ಕೊಬ್ಬಿನ ಅಂಶ ಹೆಚ್ಚು ಇರುತ್ತವೆ. ಅನಪೇಕ್ಷಿತ ಅಂಶಗಳನ್ನು ಒಳಗೊಂಡಿರುವ ಹೊಸ ರೀತಿಯ ಆಹಾರ ಕ್ರಮ ಮತ್ತು ಆಹಾರ ಪದ್ಧತಿಯ ಕುರಿತು ಜನರಲ್ಲಿ ಇತ್ತೀಚೆಗೆ ಹೆಚ್ಚಿನ ಆಸಕ್ತಿ ಕಾಣಿಸಿಕೊಳ್ಳುತ್ತಿದೆ. ಜಾಹೀರಾತು ಉದ್ಯಮ ಮತ್ತು ಇತರ ಉತ್ತೇಜನಗಳು ಜನರು ಈ ರೀತಿಯ ಆಹಾರ ಕ್ರಮವನ್ನು ರೂಢಿಸಿಕೊಳ್ಳಲು ಒತ್ತು ನೀಡುತ್ತಿವೆ. ಹೀಗೆ, ಕೆಟ್ಟ ಆಹಾರವೇ ಸಾಮಾನ್ಯ ಆಹಾರ ಪದ್ಧತಿ, ಸಹಜ ಆಹಾರ ಪದ್ಧತಿ ಮತ್ತು ಶ್ರೇಷ್ಠ ಆಹಾರ ಪದ್ಧತಿ ಎಂಬಂತಾಗಿದೆ. ಕೆಟ್ಟ ಮತ್ತು ಅನಾರೋಗ್ಯಕರ ಆಹಾರವನ್ನು ತಿನ್ನುವುದರಿಂದ ಆಗುವ ಪ್ರತಿಕೂಲ ಪರಿಣಾಮಗಳನ್ನು ನಾವೇ ಅನುಭವಿಸಬೇಕಾಗುತ್ತದೆ. ಹಾಗಾಗಿ, ಇಂತಹ ಕೆಟ್ಟ ಆಹಾರ ಕ್ರಮದಿಂದ ಬಿಡಿಸಿಕೊಳ್ಳುವ ಅಗತ್ಯ ಇದೆ.

ಸಾಂಪ್ರದಾಯಿಕವಾದ, ಪೌಷ್ಟಿಕಾಂಶಗಳಿಂದ ಕೂಡಿದ ಆಹಾರ ಕ್ರಮಕ್ಕೆ ಐಸಿಎಂಆರ್ ಮಾರ್ಗಸೂಚಿಯಲ್ಲಿ ಮಹತ್ವ ನೀಡಲಾಗಿದೆ. ಫಾಸ್ಟ್‌ಫುಡ್ ಮತ್ತು ಸಿದ್ಧ ಆಹಾರವು ಸಮತೋಲಿತ ಆಹಾರ ಅಲ್ಲ. ಅಡುಗೆ ಮಾಡಿಕೊಳ್ಳಲು ಹೆಚ್ಚು ಸಮಯ ವ್ಯಯ ಮಾಡಬೇಕಾಗುತ್ತದೆ ಎಂಬುದು ಕುಟುಂಬಗಳನ್ನು ಸಾಂಪ್ರದಾಯಿಕ ಆಹಾರ ಕ್ರಮದಿಂದ ದೂರ ಇರಿಸಿದೆ. ರುಚಿಯ ಬೆನ್ನು ಹತ್ತಿರುವುದು ಕೂಡ ಆಹಾರ ಕ್ರಮವು ಬದಲಾಗಲು ಕಾರಣವಾಗಿದೆ. ಆರೋಗ್ಯಕರ ಮತ್ತು ಪೌಷ್ಟಿಕಾಂಶಗಳಿಂದ ಕೂಡಿದ ಆಹಾರ ಪದ್ಧತಿಯನ್ನು ಜನರು ಅನುಸರಿಸುವಂತೆ ಮಾಡಲು ಸತತ ಪ್ರಯತ್ನದ ಅಗತ್ಯ ಇದೆ. ಆರೋಗ್ಯಕರ ಆಹಾರದ ಕುರಿತು ಜಾಗೃತಿ ಮೂಡಿಸುವ ಕೆಲಸವು ಪ್ರಾಥಮಿಕ ಶಾಲೆಯಿಂದಲೇ ಶುರುವಾಗಬೇಕು. ಆಹಾರ ಉತ್ಪನ್ನಗಳ ತಯಾರಿಕೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಪ್ರಚಾರ ಹೇಗಿರಬೇಕು ಎಂಬುದರ ಕುರಿತ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ದೈಹಿಕ ಚಟುವಟಿಕೆಗಳಿಗೆ ಬೇಕಾದ ಮೂಲಸೌಕರ್ಯಗಳು ಸಾರ್ವಜನಿಕವಾಗಿ ಮತ್ತು ಅಗತ್ಯಕ್ಕೆ ಬೇಕಾದಷ್ಟು ಪ್ರಮಾಣದಲ್ಲಿ ಲಭ್ಯ ಇರುವಂತೆ ನೋಡಿಕೊಳ್ಳಬೇಕು. ನಮ್ಮ ಆಹಾರವನ್ನು ಆರೋಗ್ಯಕರಗೊಳಿಸುವಲ್ಲಿ ನೀತಿನಿರೂಪಕರು, ಆರೋಗ್ಯ ರಕ್ಷಣೆ ಕ್ಷೇತ್ರದಲ್ಲಿ ಇರುವವರು, ಶಿಕ್ಷಕರು ಈ ಎಲ್ಲರ ಪಾತ್ರವೂ ಇದೆ. ಉತ್ತಮ ಆಹಾರವನ್ನು ಜನಪ್ರಿಯಗೊಳಿಸುವುದು ನಮ್ಮೆಲ್ಲರ ಮೇಲೆಯೂ ಇರುವ ಹೊಣೆಗಾರಿಕೆ.

ದಿನದ ಟ್ವೀಟ್

ಆರೋಗ್ಯದ ಗುಟ್ಟು...




ಉತ್ತಮ ಗುಣಮಟ್ಟದ ಆಹಾರದಿಂದ ಸಿಗುವ ವೈದ್ಯಕೀಯ ಪ್ರಯೋಜನವು ಅಲ್ಲಗಳೆಯಲಾಗದಂಥದ್ದು. ಆಹಾರದ ಅಭ್ಯಾಸವನ್ನು ಬದಲಾಯಿಸಿಕೊಂಡ ಮಾತ್ರಕ್ಕೇ, ರೋಗನಿರೋಧಕ ಶಕ್ತಿಯ ಕೊರತೆಯಿಂದ ಬರುವ ಕಾಯಿಲೆಗಳು ಕಣ್ಮರೆಯಾಗುವುದು, ಖಿನ್ನತೆ ತೊಲಗುವುದು, ಅರೆತಲೆನೋವಿಗೆ ಪರಿಹಾರ, ಸೋರಿಯಾಸಿಸ್, ಚರ್ಮದ ಉರಿಯೂತದಿಂದ ಮುಕ್ತಿ, ಮರೆಗುಳಿತನದ ರೋಗಿಗಳಲ್ಲಿ ನೆನಪಿನ ಶಕ್ತಿ ಉತ್ತಮಗೊಂಡಿರುವುದನ್ನು ನಾನು ಕಂಡಿದ್ದೇನೆ.

ಮಾರ್ಕ್ ಹೈಮನ್, ಅಮೆರಿಕದ ವೈದ್ಯ, ಲೇಖಕ

ಕಿಡಿನುಡಿ

ಪ್ರಜ್ವಲ್ ರೇವಣ್ಣ ಅವರ ರಾಜತಾಂತ್ರಿಕ ಪಾಸ್‌ಪೋರ್ಟನ್ನು ಇನ್ನೂ ರದ್ದು ಮಾಡಿಲ್ಲವೇಕೆ? ಅವರನ್ನು ರಕ್ಷಿಸುತ್ತಿರುವವರು ಯಾರು? ಯಾಕಾಗಿ? #PrajwalRevanna



ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಭಾನುವಾರ, 16-5-1999

• ಬಿಜೆಪಿ ಮಿತ್ರಪಕ್ಷಗಳ ಹೊಸ ರಾಷ್ಟ್ರೀಯ ಕೂಟ ರಚನೆ

ನವದೆಹಲಿ, ಮೇ 15 (ಪಿಟಿಐ)– ಎ.ಬಿ. ವಾಜಪೇಯಿ ಅವರ ನಾಯಕತ್ವದಲ್ಲಿ ಸಾಮಾನ್ಯ ಪ್ರಣಾಳಿಕೆ ಆಧಾರದ ಮೇಲೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳು ಇಂದು 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ'ಯನ್ನು ಆರಂಭಿಸಿವೆ.

ಹೊಸ ಮೈತ್ರಿಕೂಟದಲ್ಲಿ ಡಿಎಂಕೆ ಮತ್ತು ಓಂಪ್ರಕಾಶ್ ಚೌತಾಲ ಅವರ ಇಂಡಿಯನ್ ನ್ಯಾಷನಲ್ ಲೋಕದಳ ಪಕ್ಷಗಳೂ ಸೇರಿವೆ.

ಕಳೆದ ತಿಂಗಳು ಲೋಕಸಭೆಯಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದ ಪರವಾಗಿ ಮತ ಚಲಾಯಿಸಿದ ಪಕ್ಷಗಳ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಈ ಪಕ್ಷಗಳ ಸಮನ್ವಯ ಸಮಿತಿಯ ಸಂಚಾಲಕ ಜಾರ್ಜ್ ಫರ್ನಾಂಡಿಸ್ ಅವರು ಸುದ್ದಿಗಾರರಿಗೆ ತಿಳಿಸಿದರು.

• 'ನಿಷ್ಕ್ರಿಯ ಸರ್ಕಾರಕ್ಕಿಂತ ಚುನಾವಣೆಯೇ ಮೇಲು'

ಬೆಂಗಳೂರು, ಮೇ 15– ವಾಜಪೇಯಿ ಅವರ ನೇತೃತ್ವದ ಬಿಜೆಪಿ ಸರ್ಕಾರ ಗುರಿ ಸಾಧನೆಯಲ್ಲಿ ಹಿಂದೆ ಬಿದ್ದಿರುವುದನ್ನು ಅಂಕಿಅಂಶಗಳೇ ಎತ್ತಿ ಹೇಳಿರುವುದರಿಂದ, ನಿಷ್ಕ್ರಿಯ ಸರ್ಕಾರಕ್ಕಿಂತ ಕೆಲಸ ಮಾಡುವ ಸರ್ಕಾರದ ಆಯ್ಕೆಗೆ ಚುನಾವಣೆಯು ಜನತೆಗೆ ಅವಕಾಶ ಕಲ್ಪಿಸಿದೆ ಎಂದು ಪ್ರದೇಶ ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಜನಾರ್ದನ ಪೂಜಾರಿ ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಷ್ಟ್ರದ ಮೇಲೆ ಅನಗತ್ಯವಾಗಿ ಚುನಾವಣೆಯನ್ನು ಹೇರಲಾಗಿದೆ. ಇದರಿಂದ ಸುಮಾರು 800 ಕೋಟಿ ರೂಪಾಯಿ ಹೊರೆ ರಾಷ್ಟ್ರದ ಮೇಲೆ ಬೀಳುತ್ತದೆ ಎಂಬ ವಾದವನ್ನು ಅವರು ಅಲ್ಲಗಳೆದರು.

50 ವರ್ಷಗಳ ಹಿಂದೆ

ಗುರುವಾರ, 16-5-1974

• ಷರತ್ತಿಲ್ಲದ ಮಾತುಕತೆಗೆ ರಾಷ್ಟ್ರಪತಿ ಗಿರಿ ಬೆಂಬಲ; ವೇತನ ತಡೆಗೆ ವಿರೋಧ

ನವದೆಹಲಿ, ಮೇ 15– ರೈಲ್ವೆ ಮುಷ್ಕರ ಅಂತ್ಯ ಕುರಿತು ಉಭಯ ಪಕ್ಷಗಳೂ ಯಾವುದೇ ಪೂರ್ವಭಾವಿ ಷರತ್ತು ಹಾಕದೇ ಮಾತುಕತೆಯನ್ನು ಪುನರಾರಂಭಿಸುವುದಕ್ಕೆ ರಾಷ್ಟ್ರಪತಿ ಗಿರಿ ಅವರು ಬೆಂಬಲ ಸೂಚಿಸಿದ್ದಾರೆ.

ರೈಲ್ವೆ ಮುಷ್ಕರದಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಪ್ರಧಾನಿ ಇಂದಿರಾ ಗಾಂಧಿ ಅವರ ಜೊತೆ ಇಂದು ಚರ್ಚಿಸಿದ ರಾಷ್ಟ್ರಪತಿ ವಿ.ವಿ. ಗಿರಿ ಅವರು, ಯಾವುದೇ ಕಹಿ ಭಾವನೆ ನೌಕರರಲ್ಲಿ ಉಳಿಯದಂತೆ ವಿವಾದ ಇತ್ಯರ್ಥಗೊಳಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು ಎನ್ನಲಾಗಿದೆ.

ವೇತನ ನೀಡಿಕೆ ಕಾಯ್ದೆಗೆ ತಿದ್ದುಪಡಿ ತರುವುದರ ಮೂಲಕ ಕಳೆದ ತಿಂಗಳ ವೇತನ ನೀಡಿಕೆಯನ್ನು ಮುಂದೂಡಿದ್ದು ತಪ್ಪು ಎಂದು ಗಿರಿ ಅವರು ಸ್ಪಷ್ಟವಾಗಿ ಹೇಳಿದರು.

ಪ್ರಧಾನಿ ಇಂದಿರಾ ಗಾಂಧಿ, ಕೇಂದ್ರ ಸಚಿವರಾದ ಜಗಜೀವನರಾಂ ಹಾಗೂ ಫಕ್ರುದ್ದೀನ್ ಅಲಿ ಅಹಮದ್ ಅವರು ರಾಷ್ಟ್ರಪತಿಯವರನ್ನು ಭೇಟಿ ಮಾಡಿ ಚರ್ಚಿಸಿದರು.

• ಭಾರತ ಬಂದ್ ಭಾಗಶಃ ಯಶಸ್ವಿ: ಮುಂಬೈ, ಮದ್ರಾಸ್ ಜೀವನ ಅಸ್ತವ್ಯಸ್ತ

ನವದೆಹಲಿ, ಮೇ 15– ವಿರೋಧ ಪಕ್ಷಗಳು ಮತ್ತು ವಿವಿಧ ಕೇಂದ್ರ ಕಾರ್ಮಿಕ ಸಂಘಗಳು– ಐಎನ್‌ಟಿಯುಸಿ ಬಿಟ್ಟು– ಕರೆ ನೀಡಿದ್ದ ಭಾರತ್ ಬಂದ್ ಇಂದು ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿತಾದರೂ ಇತರ ರಾಜ್ಯಗಳಲ್ಲಿ ಹೆಚ್ಚು ಪರಿಣಾಮ ಬೀರಲಿಲ್ಲ. ಒಂದು ದಿನದ ಈ ಬಂದ್ ಭಾಗಶಃ ಯಶಸ್ವಿಯಾಯಿತಷ್ಟೆ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅಸ್ತ್ರವಾದ ನೇಹಾ ಹತ್ಯೆ ಪ್ರಕರಣ

ಮೂರು ಕೊಲೆ: ಒಂದಕ್ಕಷ್ಟೇ 'ಮತ'ದ ಬಲೆ



ಗತಿಬಿಂಬ

ವೈ.ಗ. ಜಗದೀಶ್

ಲೋಕಸಭಾ ಚುನಾವಣೆಗೆ ಕರ್ನಾಟಕದಲ್ಲಿ ಮತದಾನ ನಡೆಯುವುದರ ಆಸುಪಾಸಿನೊಳಗೆ ಇಬ್ಬರು ಅಮಾಯಕ ಹೆಣ್ಣುಮಕ್ಕಳ ಬರ್ಬರ ಹತ್ಯೆ ನಡೆಯಿತು. ಕೊಲೆಗಳಿಗೆ ಕಾರಣ, ಕೃತ್ಯದ ಭೀಕರತೆ, ಕೊಲೆಗಡುಕರು ಮೆರೆದ ಕ್ರೌರ್ಯ ಎಲ್ಲದರಲ್ಲೂ ಸಾಮ್ಯ ಇದೆ. ಈ ಭೀಕರ ಹತ್ಯೆಗಳು ನಡೆದ ಬಗೆಯನ್ನು ತಿಳಿದರೆ ಎಂತಹವರ ಎದೆಯೂ ನಡುಗುತ್ತದೆ. ಹೆಣ್ಣು ಹೆತ್ತವರಿಗಂತೂ ರಾತ್ರಿಯೆಲ್ಲ ದುಃಸ್ವಪ್ನಗಳೇ ಕಾಡಿ ನೆಮ್ಮದಿಯನ್ನು ಕಸಿಯುತ್ತವೆ.

ಎರಡು ಹತ್ಯೆಗಳು ನೆನಪಿನಂಗಳದಿಂದ ಮರೆಗೆ ಸರಿಯುವ ಮುನ್ನವೇ ಹುಬ್ಬಳ್ಳಿಯಲ್ಲಿ ಇಂತಹುದೇ ಮತ್ತೊಂದು ಕೊಲೆ ನಡೆದಿದೆ. ಈ ಮೂರೂ ದುಷ್ಕೃತ್ಯಗಳ ಹಿಂದೆ ಇರುವುದು ಪ್ರೇಮವೇ.

ರಾಜ್ಯದಲ್ಲಿ ಮೊದಲ ಹಂತದ ಮತದಾನಕ್ಕೂ ಮೊದಲು, ಹುಬ್ಬಳ್ಳಿಯ ಕಾಂಗ್ರೆಸ್ ಮುಖಂಡ ನಿರಂಜನ ಹಿರೇಮಠ ಅವರ ಮಗಳು ನೇಹಾ ಹಿರೇಮಠ ಅವರನ್ನು ಕಾಲೇಜಿನ ಕ್ಯಾಂಪಸ್‌ನೊಳಗೆ ಫಯಾಜ್ ಎಂಬಾತ 14 ಬಾರಿ ಚುಚ್ಚಿ ಕೊಲೆಗೈದಿದ್ದ ಎನ್ನಲಾಗಿದ್ದು, ಹಿಂಸಾಕೃತ್ಯದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ವಿದ್ಯುನ್ಮಾನ ಮಾಧ್ಯಮಗಳು ದಿನವಿಡೀ ವಿಡಿಯೊ ತುಣುಕುಗಳನ್ನು ಬಿತ್ತರಿಸಿ, ಉನ್ಮಾದದ ಅಲೆ ಎಬ್ಬಿಸಿದವು.

ಎರಡೂ ಹಂತದ ಮತದಾನ ಮುಗಿದ ಬೆನ್ನಲ್ಲೇ, ಕೊಡಗು ಜಿಲ್ಲೆಯ ಸೋಮವಾರಪೇಟೆಯ ಸೂರ್ಲಬ್ಬಿಯ 16 ವರ್ಷದ ವಿದ್ಯಾರ್ಥಿನಿ ಮೀನಾ ಮನೆಗೆ ನುಗ್ಗಿದ ಪ್ರಕಾಶ ಎಂಬಾತ, ಮೀನಾಳ ತಲೆಯನ್ನು ಕಡಿದು, ಅದನ್ನು ದಟ್ಟ ಕಾಡಿನ ಪೊದೆಯೊಳಗೆ ಬಚ್ಚಿಟ್ಟಿದ್ದ ಎಂದು ವರದಿಯಾಗಿದೆ.

ಹುಬ್ಬಳ್ಳಿಯ ವೀರಾಪುರ ಓಣಿಯ ಮೂರನೇ ಕ್ರಾಸ್ ನಿವಾಸಿ ಅಂಜಲಿ ಅಂಬಿಗೇರ ಅವರ ಮನೆಗೆ ನುಗ್ಗಿದ ಗಿರೀಶ ಸಾವಂತ ಎಂಬಾತ, ಅಂಜಲಿಯವರನ್ನು ಇರಿದು ಕೊಲೆ ಮಾಡಿದ ಆರೋಪಕ್ಕೆ ಒಳಗಾಗಿದ್ದಾನೆ.

ಮೂರೂ ಕೊಲೆಗಳಿಗೆ 'ಪ್ರೇಮ ವೈಫಲ್ಯ ಅಥವಾ ಮದುವೆಗೆ ನಕಾರವೇ ಕಾರಣ' ಎಂಬುದು ತನಿಖಾನಿರತ ಪೊಲೀಸರ ಹೇಳಿಕೆ. ನೇಹಾ ಹತ್ಯೆಗೀಡಾದ ಬಳಿಕ ಹರಿದಾಡಿದ ವಿಡಿಯೊಗಳು, ಇಬ್ಬರ ಪೋಷಕರ ಹೇಳಿಕೆಗಳೂ ಇದನ್ನೇ ಧ್ವನಿಸುತ್ತವೆ. ಮೀನಾ ಪ್ರಕರಣದ ಕತೆಯೂ ಹೀಗೆಯೇ ಇದೆ. ಮೀನಾ ಮತ್ತು ಕೊಲೆಗೈದ ಆರೋಪಿಗೆ ಮದುವೆ ನಿಶ್ಚಯವಾಗಿತ್ತು. ಮೀನಾಗೆ 18 ವರ್ಷ ತುಂಬದೇ ಇದ್ದುದರಿಂದ, ಬಾಲ್ಯವಿವಾಹ ತಡೆಗೆ ಮುಂದಾಗಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಮದುವೆ ನಡೆಯುವುದಕ್ಕೆ ತಡೆಯೊಡ್ಡಿದ್ದರು. ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯಲ್ಲಿ ಪ್ರಕಾಶ ಮುಚ್ಚಳಿಕೆ ಬರೆದುಕೊಟ್ಟಿದ್ದಲ್ಲದೆ, ಎರಡು ವರ್ಷ ಆಕೆಯನ್ನು ಓದಿಸಿ ಬಳಿಕ ಮದುವೆಯಾಗುವುದಕ್ಕೆ ಒಪ್ಪಿದ್ದ. ಮೀನಾಳ ಅಕ್ಕನೇ ಮದುವೆಗೆ ಅಡ್ಡಿಪಡಿಸಿದ್ದಳೆಂದು ಸಿಟ್ಟಾದ ಆತ, ಮೀನಾಳನ್ನು ಮನೆಯಿಂದ ಹೊರಗೆ ಎಳೆದುತಂದು, ಮಚ್ಚಿನಿಂದ ಕೊಚ್ಚಿ ಕೊಂದ ಎನ್ನಲಾಗಿದೆ.

ಅಂಜಲಿ ಮತ್ತು ಗಿರೀಶ ಅವರ ಮಧ್ಯೆ ವೈಮನಸ್ಸು ಉಂಟಾಗಲು ಕಾರಣ ಬೇರೆ ಇದ್ದಿರಬಹುದಾದರೂ ಕೊಲೆಗೆ ಕಾರಣವಾಗಿದ್ದು ಮಾತ್ರ ಪ್ರೇಮ ನಿರಾಕರಣೆ ಎಂದು ಹೇಳಲಾಗಿದೆ. ಈ ಮೂರೂ ಕೊಲೆ ಪ್ರಕರಣಗಳ ಹಿಂದಿನ ಕಾರಣ ಒಂದೇ ಆದರೂ ಅವುಗಳಿಗೆ ರಾಜಕೀಯ, ಸಾಮಾಜಿಕ ವಲಯದಲ್ಲಿ ವ್ಯಕ್ತವಾದ ಪ್ರತಿಕ್ರಿಯೆ ಭಿನ್ನ. ಕೊಲೆಯಾದವರ ಜಾತಿ ಮತ್ತು ಕೊಲೆಗೈದವನ ಧರ್ಮದ ಆಧಾರದ ಮೇಲೆ ಕೊಲೆಯೊಂದು ದೇಶವ್ಯಾಪಿ ಪ್ರತಿಕ್ರಿಯೆಗೆ ಕಾರಣವಾಗುವುದು ಧರ್ಮಾಂಧತೆಯ ಅಮಲನ್ನು ತುಂಬಿಕೊಂಡ ನಾಡಿನಲ್ಲಿ ಸಹಜವೆಂಬಂತೆ ಆಗಿದೆ.

ಕಿತ್ತೂರು, ಕಲ್ಯಾಣ ಮತ್ತು ಮಧ್ಯ ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳ ಮತದಾನಕ್ಕೆ ಮೊದಲು ನಡೆದ ನೇಹಾ ಕೊಲೆ ಪ್ರಕರಣವನ್ನು ರಾಜಕೀಯಕ್ಕೆ ಬಳಸಿಕೊಂಡಿದ್ದರ ಬಗ್ಗೆ ಪ್ರತಿಯೊಬ್ಬರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ. ನೇಹಾ ಅವರನ್ನು ಕೊಂದಾತ ಮುಸ್ಲಿಂ ಧರ್ಮದವನಲ್ಲದೆ ಹಿಂದೂ ಆಗಿದ್ದರೆ ಯಾರೊಬ್ಬರೂ ಚಕಾರವನ್ನೇ ಎತ್ತುತ್ತಿರಲಿಲ್ಲ. ಚುನಾವಣೆ ಮುಗಿದ ಬಳಿಕ ಆಗಿದ್ದರೂ ಇಷ್ಟರಮಟ್ಟಿಗೆ ಅದು ದೇಶವ್ಯಾಪಿ ಸುದ್ದಿಯೂ ಆಗುತ್ತಿರಲಿಲ್ಲ. ನೇಹಾ ಎಂಬ ಮುಗ್ಧ ಹೆಣ್ಣುಮಗಳನ್ನು ಹತ್ಯೆ ಮಾಡಿದ ಆರೋಪಿ ಫಯಾಜ್, ಮನುಷ್ಯನಂತೂ ಅಲ್ಲವೇ ಅಲ್ಲ; ಆತನೊಳಗಿನ ಮೃಗೀಯತೆ ಹಾಗೆ ಮಾಡಿಸಿರಬಹುದು. ಪ್ರಕಾಶ್ ಮತ್ತು ಗಿರೀಶ್ ಅವರಲ್ಲೂ ಅದೇ ಬಗೆಯ ಮೃಗೀಯತೆ ಇದ್ದಿರಬಹುದು.

ನೇಹಾ ಕೊಲೆಯಾಗುತ್ತಿದ್ದಂತೆಯೇ ಕೇಂದ್ರ ಸಚಿವ ಹಾಗೂ ಧಾರವಾಡ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಪ್ರಲ್ಹಾದ ಜೋಶಿ, ಹಾವೇರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿಯ ಸಾಲು ಸಾಲು ಮುಖಂಡರು ಅವರ ಮನೆಗೆ ಧಾವಿಸಿದರು. ನೇಹಾ ಅವರ ಶೋಕತಪ್ತ ತಂದೆ–ತಾಯಿಯ ಜತೆ ನಿಂತು, ಧೈರ್ಯ ತುಂಬುವ ಕೆಲಸ ಮಾಡಬೇಕಾದುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಕೂಡ. ಆದರೆ, ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ವರ್ತನೆಗಳು ರಾಜಕೀಯಪ್ರೇರಿತ ಆಗಿದ್ದವೇ ವಿನಾ ಪ್ರೀತಿಯೆರೆದು ಬೆಳೆಸಿದ ಮಗಳನ್ನು ಕಳೆದುಕೊಂಡು ಶೋಕಿಸುತ್ತಿದ್ದ ಹೆತ್ತವರ ನೋವಿಗೆ ಮಿಡಿಯುವ ಪರಿಶುದ್ಧ ಕಾಳಜಿಯಂತೂ ಆಗಿರಲಿಲ್ಲ.

ಇದು ಅಷ್ಟಕ್ಕೇ ನಿಲ್ಲಲಿಲ್ಲ. ಕರ್ನಾಟಕದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರೂ ಇದನ್ನೇ ಪ್ರಸ್ತಾಪಿಸಿ, ಹೆಣ್ಣುಮಕ್ಕಳಿಗೆ ರಾಜ್ಯದಲ್ಲಿ ರಕ್ಷಣೆ ಇಲ್ಲ ಎಂದು ಅಬ್ಬರಿಸಿದ್ದಲ್ಲದೆ, ಹೊರ ರಾಜ್ಯಗಳ ಭಾಷಣದಲ್ಲೂ ಈ ಪ್ರಕರಣವನ್ನು ಬಳಸಿಕೊಂಡರು. ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಲು ಕರ್ನಾಟಕ ಸರ್ಕಾರಕ್ಕೆ ಆಗದಿದ್ದರೆ ನಾವೇ ಮುಂದೆ ನಿಂತು ಕೊಡುತ್ತೇವೆ' ಎಂದರು. ಮತ್ತೊಂದು ಹೆಜ್ಜೆ ಮುಂದೆ ಹೋದ ಜೋಶಿ–ಬೊಮ್ಮಾಯಿ, 'ಇದರ ಹಿಂದೆ ದೊಡ್ಡ ಷಡ್ಯಂತ್ರ ಇದ್ದು, ಬೇರೆ ಬೇರೆ ಶಕ್ತಿಗಳು ಕೆಲಸ ಮಾಡಿವೆ' ಎಂದು ಘೋಷಿಸಿದರು. ಪ್ರಲ್ಹಾದ ಜೋಶಿ, ಜಗದೀಶ ಶೆಟ್ಟರ್ ಸೇರಿದಂತೆ ಕಿತ್ತೂರು ಕರ್ನಾಟಕ ಭಾಗದ ಅನೇಕ ಬಿಜೆಪಿ ಅಭ್ಯರ್ಥಿಗಳಿಗೆ ನೇಹಾ ಕೊಲೆ ಪ್ರಕರಣ ಚುನಾವಣಾ ಅಸ್ತ್ರವಾಗಿ ಒದಗಿಬಂದಿತು.

ಕಾಂಗ್ರೆಸ್ಸಿನವರೇನೂ ಹಿಂದೆ ಬೀಳಲಿಲ್ಲ. ತಮ್ಮ ಮಗ ಮೃಣಾಲ್ ಸ್ಪರ್ಧೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಗೊತ್ತಾಗಿದ್ದೇ ತಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ನೇಹಾ ಕುಟುಂಬದವರನ್ನು ಭೇಟಿಯಾಗಿ, ತಮ್ಮ ಬೆಂಬಲ ಮೃಣಾಲ್‌ಗೆ ಎಂಬ ಹೇಳಿಕೆಯನ್ನೇ ಅವರಿಂದ ಕೊಡಿಸಿಬಿಟ್ಟರು.

ಕೊಡಗಿನ ಕೊಲೆ ಪ್ರಕರಣವೂ ಇದೇ ಮಾದರಿಯದು. ಆದರೆ, ಮೋದಿ–ಶಾ ಅವರಿರಲಿ, ರಾಜ್ಯದವರೇ ಆದ ಪ್ರಲ್ಹಾದ ಜೋಶಿ, ಬೊಮ್ಮಾಯಿ, ವಿಜಯೇಂದ್ರ, ಅಶೋಕ, ಶೋಭಾ ಕರಂದ್ಲಾಜೆ ಸೇರಿದಂತೆ ಬಿಜೆಪಿಯ ಯಾರೊಬ್ಬರೂ ತುಟಿ ಬಿಚ್ಚಲಿಲ್ಲ. ಈ ದೇಶ, ಈ ನಾಡಿನಲ್ಲಿ ಒಬ್ಬ ಹಿಂದೂವನ್ನು ಮತ್ತೊಬ್ಬ ಹಿಂದೂ ಕೊಲೆ ಮಾಡಿದರೆ ಅದು ಕೊಲೆಯೇ ಅಲ್ಲ, ಮುಸ್ಲಿಂ ವ್ಯಕ್ತಿಯೊಬ್ಬ ವ್ಯಕ್ತಿಗತ ಕಾರಣಗಳಿಗಾಗಿ ಹಿಂದೂ ವ್ಯಕ್ತಿಯ ಕೊಲೆ ಎಸಗಿದರೂ ಅದು ಘೋರಪಾತಕ. ಇಡೀ ಮುಸ್ಲಿಂ ಸಮುದಾಯವೇ ಅದರ ಹೊಣೆ ಹೊರಬೇಕು ಎಂಬಷ್ಟರ ಮಟ್ಟಿಗೆ ರಾಜಕೀಯ ವ್ಯಾಧಿಯನ್ನು ಹಬ್ಬಿಸಲಾಗುತ್ತದೆ.

ಈ ಬೆಳವಣಿಗೆಗಳ ಬೆನ್ನಲ್ಲೇ, ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಎಸಗಿದ್ದಾರೆ ಎನ್ನಲಾದ ಲೈಂಗಿಕ ದೌರ್ಜನ್ಯದ ವಿಡಿಯೊಗಳು ಹರಿದಾಡಿದವು. ಅದನ್ನು ಹಂಚಿದವರು, ಅದರಲ್ಲೂ ಮಹಿಳೆಯರ ಮುಖ ಮಸುಕುಗೊಳಿಸದೆ ಪೆನ್‌ಡ್ರೈವ್‌ಗಳು ಎಲ್ಲೆಂದರಲ್ಲಿ ಹರಿದಾಡುವಂತೆ ಮಾಡಿದವರು ಶಿಕ್ಷಾರ್ಹರು. ಆದರೆ, ಈ ಲೈಂಗಿಕ ದೌರ್ಜನ್ಯದಿಂದ ಜೀವನಪರ್ಯಂತ ಹಿಂಸೆ ಅನುಭವಿಸಬೇಕಾದ, ತಮ್ಮ ಕುಟುಂಬದವರು–ಮಕ್ಕಳಿಗೆ ಉತ್ತರ ಕೊಡಲಾಗದ ಅಸಹಾಯಕ ಸ್ಥಿತಿಯಲ್ಲಿರುವ ಸಂತ್ರಸ್ತೆಯರಲ್ಲಿ ಬಹುಸಂಖ್ಯಾತರು ಹಿಂದೂಗಳೇ. ನೇಹಾ ಕೊಲೆ ಪ್ರಕರಣದಷ್ಟೇ ಬರ್ಬರವಾಗಿದೆ ಈ 'ಲೈಂಗಿಕ ಹಿಂಸಾಕಾಂಡ'. ಅದನ್ನು ಖಂಡಿಸುವುದು ಹೋಗಲಿ, ಸಂತ್ರಸ್ತೆಯರಿಗೆ ನ್ಯಾಯ ದೊರಕಿಸುವ ದಿಸೆಯಲ್ಲಿ ಧ್ವನಿ ಎತ್ತುವ ಕನಿಷ್ಠ ಮನುಷ್ಯತ್ವವನ್ನೂ ನಮ್ಮ ರಾಜಕೀಯ ನಾಯಕರು ತೋರಿಸಲಿಲ್ಲ; ರಾಜಕೀಯ ಎಂಬುದು ಇಲ್ಲಿಗೆ ಬಂದು ನಿಂತಿದೆ!

ಕೊನೆಯದಾಗಿ, ಜೋಶಿ ಮತ್ತು ಶೆಟ್ಟರ್ ಅವರ ಗೆಲುವು–ಸೋಲು ಮತದಾರರ ತೀರ್ಮಾನ. 'ಕೆಲವೊಂದು ಕೊಲೆಗಳು ಹೇಗೆ ರಾಜಕೀಯವಾಗಿ ಅನುಕೂಲ ಮಾಡಿಕೊಡುತ್ತವೆ ನೋಡಿ. ನೇಹಾ ಕೊಲೆ ಪ್ರಕರಣವನ್ನೂ ಕೆಲವರು ಚುನಾವಣೆಗೆ ಪೂರಕವಾಗಿ ಬಳಸಿಕೊಂಡರು. ಚುನಾವಣೆಯಲ್ಲಿ ಶೆಟ್ಟರ್, ಜೋಶಿ ಗೆದ್ದರೆ ಮೊದಲು ಫಯಾಜ್ ಎಲ್ಲಿದ್ದಾನೆ ಎಂದು ಹುಡುಕಿಕೊಂಡು ಹೋಗಿ ಸನ್ಮಾನ ಮಾಡಬೇಕಾಗುತ್ತದೆ. ಅದಂತೂ ಸತ್ಯ' ಎಂದು ಬಿಜೆಪಿಯ ಪ್ರಭಾವಿ ನಾಯಕರೊಬ್ಬರು ಹೇಳಿದ್ದುಂಟು. ಅಲ್ಲಿಗೆ ಅಸಲು ವಿಷಯ ಏನೆಂದು ಅರ್ಥವಾಯಿತಷ್ಟೆ!



ಚುರುಮುರಿ



ಮಸಾಲ ನ್ಯೂಸ್!

• ಗುರು ಪಿ.ಎಸ್.

'ನಾವು ಚಿಕ್ಕವರಿದ್ದಾಗಿನಿಂದ ನೋಡ್ಕೊಂಡ್ ಬೆಳೆದಿದ್ದ ಸಿನಿಮಾ ಥಿಯೇಟರ್‌ಗಳನ್ನೆಲ್ಲ ಮುಚ್ಚುತ್ತಿದ್ದಾರೆ. ಅದನ್ನು ನೋಡಿದಾಗೆಲ್ಲ ಏನೋ ಒಂಥರಾ ಬೇಜಾರಾಗುತ್ತೆ' ಸಪ್ಪೆ ಮೋರೆ ಮಾಡಿಕೊಂಡು ಹೇಳಿದ ಮುದ್ದಣ್ಣ.

'ಜನ ಥಿಯೇಟರ್‌ಗಳಿಗೇ ಹೋಗದಿದ್ದರೆ ಅವರಾದರೂ ಏನು ಮಾಡ್ತಾರೆ ಪಾಪ' ಸಮಾಧಾನದ ಧ್ವನಿಯಲ್ಲಿ ಹೇಳಿದ ವಿಜಿ.

'ಸಿಂಗಲ್ ಸ್ಕ್ರೀನ್ ಕ್ಲೋಸ್ ಮಾಡಿದ ಮೇಲೆ, ಎಂಟರ್‌ಟೇನ್‌ಮೆಂಟೇ ಇಲ್ಲದಂತಾಗಿದೆ ನಮಗೆ'.

'ಎಂಟರ್‌ಟೇನ್‌ಮೆಂಟ್‌ಗಾಗಿ ಥಿಯೇಟರ್‌ಗೇ ಹೋಗಬೇಕಂತೇನಾದರೂ ಇದೆಯಾ?'

'ಮತ್ತೆ?'

'ಈಗ ನ್ಯೂಸ್ ಚಾನೆಲ್ ನೋಡು ಸಾಕು, ಎಷ್ಟು ಬೇಕು ನಿನಗೆ ಎಂಟರ್‌ಟೇನ್‌ಮೆಂಟ್?'

'ಆದರೆ, ನ್ಯೂಸ್ ನೋಡೋವಾಗ ಹೀರೊ, ವಿಲನ್, ಕಮಿಡಿಯನ್‌ಗಳೆಲ್ಲ ಇರೋದಿಲ್ವಲ್ಲ'.

'ನಿನಗೆ ಇದೆಲ್ಲ ನ್ಯೂಸ್ ಚಾನೆಲ್ ನೋಡಿದರೂ ಸಿಗುತ್ತೆ. ರೇಪ್, ಕಿಡ್ನ್ಯಾಪ್, ಪರಾರಿ, ಪಿತೂರಿ, ಬ್ಲ್ಯಾಕ್‌ಮೇಲ್, ಏಟು–ತಿರುಗೇಟು... ಹೀಗೆ ಪಕ್ಕಾ ಕಮರ್ಷಿಯಲ್ ಫಿಲ್ಮ್ ಒಂದರಲ್ಲಿ ಏನೇನಿರುತ್ತೋ ಎಲ್ಲವೂ ಸಿಗುತ್ತೆ' ನಕ್ಕ ವಿಜಿ.

'ಆದರೂ ಒಳ್ಳೊಳ್ಳೆ ಲೊಕೇಷನ್‌ಗಳಲ್ಲಿ, ಸಖತ್ ಆಗಿರೋ ಕಾಸ್ಟ್ಯೂಮ್ ಹಾಕ್ಕೊಂಡು ಹೀರೊ–ಹೀರೊಯಿನ್ ಡಾನ್ಸ್ ಮಾಡೋ ಸೀನ್‌ಗಳನ್ನೆಲ್ಲ ಸಿನಿಮಾದಲ್ಲಿ ನೋಡೋಕೆ ಎಷ್ಟು ಚೆನ್ನಾಗಿರುತ್ತೆ'.

'ಅಯ್ಯೋ, ನ್ಯೂಸ್ ಚಾನೆಲ್‌ಗಳಲ್ಲಿ ಇದೂ ಇರುತ್ತೆ. ಆದರೆ, ಒಂದೇ ಡಿಫರೆನ್ಸ್, ಜೊತೆಗೆ ಹೀರೊಯಿನ್ ಇರಲ್ಲ. ಬೆಳಿಗ್ಗೆ, ಸಂಜೆ, ರಾತ್ರಿಗೊಂದೊಂದು ಕಾಸ್ಟ್ಯೂಮ್ ಹಾಕಿಕೊಂಡು ಸ್ಕ್ರೀನ್ ತುಂಬಾ ಓಡಾಡ್ತಿರೋ ಹೀರೊನೂ ಕಾಣ್ತಾರೆ ನಿನಗೆ'.

'ಆದರೆ, ಅಣ್ಣಾವ್ರ ಫಿಲಮ್‌ಗಳು ಹೇಗಿರ್ತಿದ್ವು, ಆ ಸಿನಿಮಾದ ಕಥೆ, ಸಂದೇಶ ಈಗ ಟಿ.ವಿಯಲ್ಲಿ ಸಿಗುತ್ತಾ ನಿನಗೆ?' ಕೇಳಿದ ಮುದ್ದಣ್ಣ.

'ಅಣ್ಣಾವ್ರು ಸಿನಿಮಾಗಳಲ್ಲಿ ಹಾಕಿದ ವೇಷಭೂಷಣ ಬೇಕಾದರೆ ಫಾಲೊ ಮಾಡ್ತಾರೆ. ಆದರೆ, ಅವರ ಮತ್ತು ಅವರ ಪಾತ್ರಗಳ ವ್ಯಕ್ತಿತ್ವ ಅನುಸರಿಸಿ ಅಂದರೆ, ಊಹೂಂ, ಚಾನ್ಸೇ ಇಲ್ಲ' ಮತ್ತೆ ನಕ್ಕ ವಿಜಿ.

ಚರ್ಚೆ

'ಗೃಹಲಕ್ಷ್ಮಿ'ಗೆ ಕನ್ನ ಹಾಕುವುದೇಕೆ?

ಬೆವರಿನ ಮಂದಿಯ ಬದುಕನ್ನು ಹಸನುಗೊಳಿಸುವ ಉದ್ದೇಶದ 'ಗೃಹಲಕ್ಷ್ಮಿ' ಯೋಜನೆಯ ಹಣವನ್ನು 'ಕಸಿದುಕೊಳ್ಳುವ' ಹುನ್ನಾರಗಳು ನಿಲ್ಲಬೇಕು

• ಪು.ಸೂ.ಲಕ್ಷ್ಮೀನಾರಾಯಣ ರಾವ್

ರಾಜ್ಯ ಸರ್ಕಾರವು ಮಹಿಳೆಯರನ್ನು ಸಬಲೀಕರಣಗೊಳಿಸಬೇಕೆಂಬ ಸದುದ್ದೇಶದಿಂದ ಆರಂಭಿಸಿರುವ 'ಗೃಹಲಕ್ಷ್ಮಿ' ಯೋಜನೆ ದುರ್ಬಳಕೆ ಆಗುತ್ತಿರುವುದನ್ನು ಸರ್ಕಾರ ಹಾಗೂ ಸಾರ್ವಜನಿಕರ ಗಮನಕ್ಕೆ ತಂದಿರುವ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಮೇ 14) ನಮ್ಮ ಸಮಾಜದ ಬೌದ್ಧಿಕ ಹಾಗೂ ಮಾನಸಿಕ ಹಿಂದುಳಿದಿರುವಿಕೆಯನ್ನು ಹಾಗೂ ಧಾರ್ಮಿಕತೆಯೆಡೆಗಿನ ಕ್ರೂರ ವ್ಯಂಗ್ಯವನ್ನು ಸೂಚಿಸುತ್ತದೆ.

ಸ್ವಾಮಿ ವಿವೇಕಾನಂದರು, 'ಹಸಿದವರಿಗೆ ಮೊದಲು ರೊಟ್ಟಿ ಕೊಡಿ, ನಂತರ ನಿಮ್ಮ ವೇದಾಂತವನ್ನು ಬೋಧಿಸಿ' ಎಂದರು. ನಮ್ಮ ವೇದೋಪನಿಷತ್ತುಗಳು 'ಅನ್ನಂ ಪರಬ್ರಹ್ಮ ಸ್ವರೂಪಂ' ಎಂದವು. ಸಮಾಜದ ವೈದ್ಯನೆಂದು ಕರೆಸಿಕೊಂಡ ಸರ್ವಜ್ಞ 'ಅನ್ನದೇವರ ಮುಂದೆ ಇನ್ನು ದೇವರು ಉಂಟೆ, ಅನ್ನವೇ ಪ್ರಾಣ ಸಕಲ ಜಗಕೆಲ್ಲ, ಅನ್ನವೇ ದೈವ' ಎಂದ.

ಇಂತಹ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಉದಾತ್ತ ಚಿಂತನೆಗಳು ನಮ್ಮ ಹಿರಿಯರು, ಮುಖಂಡರು ಹಾಗೂ ಮಠಾಧಿಪತಿಗಳಿಗೆ ಅರಿವಾಗುವುದಿಲ್ಲವೇಕೆ? ದಿನನಿತ್ಯದ ಬದುಕಿನ ನಿರ್ದಾಕ್ಷಿಣ್ಯ ವ್ಯಾವಹಾರಿಕತೆಯೇ ಪ್ರಬಲವಾಗಿ ಸಂವೇದನಾಶೀಲ ಮನಸ್ಸು ಬತ್ತಿಹೋಗಿದೆಯೇ? ಅದೇ ಸರ್ವಜ್ಞ ಮತ್ತೊಂದು ತ್ರಿಪದಿಯಲ್ಲಿ, 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಅಂದಂತೆ, ತನ್ನ ಹಾಗೆಯೇ ಬೇರೆಯವರೂ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ತನಗೆ ಬಹಳ ಅಗತ್ಯವಿರುವ ಹಣ ಸರ್ಕಾರದಿಂದ ದೊರೆತಾಗ ಖುಷಿ ಮತ್ತು ಸಮಾಧಾನ ಆಗಿರುತ್ತದೆ. ಅದನ್ನು ದೇವಾಲಯ ಕಟ್ಟಬೇಕು ಅಂತಲೊ, ರಥದ ನಿರ್ಮಾಣಕ್ಕೆ ಅಂತಲೊ ಮುಂದಾಳುಗಳು ಕಿತ್ತುಕೊಂಡು ಹೋದರೆ ಅವರಿಗಾಗುವ ನಿರಾಸೆ, ಸಂಕಟ, ಅಸಹಾಯಕತೆ, ಸಿಟ್ಟು, ಬೇಸರವನ್ನು ಈ ಮುಂದಾಳುಗಳು ತಮಗೇ ಆದ ಹಾಗೆ ಊಹಿಸಿಕೊಳ್ಳಬೇಕು. ತಾವೇ ಆ ಮಹಿಳೆಯರ ಸ್ಥಾನದಲ್ಲಿ ಇದ್ದಿದ್ದರೆ ಹೇಗಾಗುತ್ತಿತ್ತು ಎಂಬುದನ್ನು ಅರಿತುಕೊಳ್ಳಬೇಕು.

ತಮಗಾದರೂ ನಿಶ್ಚಿತ ವರಮಾನ ಇರುತ್ತದೆ. ಆ ಗೃಹಲಕ್ಷ್ಮಿ ಯೋಜನೆಯ ಹಣ ಪಡೆಯುತ್ತಿರುವವರ ಸ್ಥಿತಿ ಹಾಗಿಲ್ಲವಲ್ಲ. ಅವರ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿರುತ್ತದೆ ಎಂದು ಈ ನೇತಾರರು ಏಕೆ ಅರಿಯುವುದಿಲ್ಲ ಎಂದು ಯೋಚಿಸಿದಾಗ, ನಮ್ಮ ಸಮಾಜದಲ್ಲಿ ಬಹುಮಂದಿಗೆ ಅದರಲ್ಲೂ ನಾಯಕ ಸ್ಥಾನಗಳಲ್ಲಿ ಇರುವವರಲ್ಲಿ ಸಮಷ್ಟಿ ಪ್ರಜ್ಞೆಯ ಕೊರತೆ ಎದ್ದು ಕಾಣುತ್ತದೆ. ಈ ಮುಖಂಡರು ಅವರ ವೈಯಕ್ತಿಕ ಇಷ್ಟಾನಿಷ್ಟಗಳಲ್ಲೇ ಆತ್ಮರತಿಗಳಾಗಿರುವುದು ಕಂಡುಬರುತ್ತದೆ.

ಇದಕ್ಕೆ ಇನ್ನೊಂದು ಉದಾಹರಣೆಯನ್ನು ಗಮನಿಸಬಹುದು. ಹಳ್ಳಿಯಲ್ಲಿ ಬೇಸಾಯ ಮಾಡಿಕೊಂಡಿರುವ, ತಮ್ಮದೇ ಬಹಳಷ್ಟು ಜಮೀನುಳ್ಳ ನನ್ನ ಬಂಧುವೊಬ್ಬರು ಒಮ್ಮೆ, 'ನೀನು ಏನೇ ಹೇಳು, ಈ ಸಿದ್ದರಾಮಯ್ಯ ಎಲ್ಲರಿಗೂ ಫ್ರೀ ಅಕ್ಕಿ ಕೊಟ್ಟುಬಿಟ್ಟು ಜನರನ್ನು ಸೋಂಬೇರಿಗಳನ್ನಾಗಿ ಮಾಡಿಬಿಟ್ಟ. ಕೂಲಿಗೆ ಕರೆದರೆ ಬರೋದೇ ಇಲ್ಲ, ಬಂದರೂ ಹೆಚ್ಚು ಕೂಲಿ ಕೇಳ್ತಾರೆ' ಎಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದೂ ಈಗಿನ ಐದು 'ಗ್ಯಾರಂಟಿ'ಗಳು ಜಾರಿಗೆ ಬರುವುದಕ್ಕೆ ಮುಂಚೆ. ಇದೇ ಅಭಿಪ್ರಾಯವನ್ನು ನನ್ನ ಇನ್ನೂ ಕೆಲವು ಬಂಧುಮಿತ್ರರು ಸಹ ವ್ಯಕ್ತಪಡಿಸಿದ್ದರು. ಇದು ಏಕೋ ಸರಿ ಎಂದು ನನಗೆ ಅನ್ನಿಸಿರಲಿಲ್ಲ. ಆಗ ನಾನು ಅವರಿಗೆ ಹೀಗೆಂದು ಪ್ರಶ್ನಿಸಿದೆ: 'ಹಾಗಾದರೆ ನಿಮ್ಮ ಪ್ರಕಾರ ಕೂಲಿನಾಲಿ ಮಾಡಿಕೊಂಡಿರುವವರು ಹಸ್ಕೊಂಡು ಇರಬೇಕು. ಆಗ ಮಾತ್ರ ಕೂಲಿಗೆ ಕರೆದಾಗೆಲ್ಲ ಬರ್ತಾರೆ. ಈಗ ಹಸಿವು ಇಲ್ಲ, ಆದ್ದರಿಂದ ಬರ್ತಾ ಇಲ್ಲ. ಹಾಗಾಗಿ ಅವರನ್ನು ಅರೆಹೊಟ್ಟೆಯಲ್ಲೇ ಇರಿಸಿರಬೇಕು ಅಂತಲೇ?' ಅದಕ್ಕೆ ಅವರ ಬಳಿ ಉತ್ತರವಿರಲಿಲ್ಲ.

ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆಯಲ್ಲಿ, 'ನಮ್ಮೂರಿಗೊಂದು ದೇವಸ್ಥಾನ ಕಟ್ಟಿಸಿಕೊಟ್ಟರೆ ನಿಮಗೆ ನಾವೆಲ್ಲ ಮತ ಹಾಕುತ್ತೇವೆ' ಎಂಬ ಬೇಡಿಕೆಯನ್ನು ಒಂದು ಹಳ್ಳಿಯ ಜನ ಇಟ್ಟದ್ದರಂತೆ. ಊರಿನಲ್ಲಿ ತಕ್ಕಮಟ್ಟಿಗೆ ಒಂದು ದೇವಾಲಯ ಇರಲಿ ಎಂದು ಹಳ್ಳಿಗಾಡಿನ ಜನ ಆಸೆಪಡುವುದು ಸಹಜ ವಿದ್ಯಮಾನ. ಇದರಲ್ಲಿ ಹುಳುಕು ಹುಡುಕುವುದು ಬೇಡ. ಮುಗ್ಧ ಜನರ ನಂಬಿಕೆಗೆ ಸಂಬಂಧಿಸಿದ ವಿಷಯ ಅದು.



ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಬಾಕ್ರಾನಂಗಲ್ ಅಣೆಕಟ್ಟೆಯ ಉದ್ಘಾಟನಾ ಸಂದರ್ಭದಂದು, 'ಈ ಅಣೆಕಟ್ಟು ಪುನರುತ್ಥಾನ ಭಾರತದ ಹೊಸ ದೇವಾಲಯ' ಎಂದರು. ಪುರಾಣದ ರುಕ್ಮಿಣಿಯ ಒಂದು ತುಳಸಿಯ ದಳ ಕೃಷ್ಣನ ತೂಕವನ್ನು ತೂಗಿತು. ಪು.ತಿ.ನರಸಿಂಹಾಚಾರ್ ತಮ್ಮ 'ದೀನಗಿಂತ ದೇವ ಬಡವ' ಎಂಬ ಪದ್ಯದ ಮೂಲಕ, ದೇವರಿಗೆ ಯಾವ ದೇಗುಲವೂ ಬೇಡ, ತಮ್ಮ ತಮ್ಮ ಎದೆಯಲ್ಲಿ ದೇವರನ್ನು ನೆಲಗೊಳಿಸಿದರೆ ಸಾಕು ಎನ್ನುತ್ತಾರೆ.

ಇವೆಲ್ಲವನ್ನು ಜೀರ್ಣಿಸಿಕೊಳ್ಳಲಾಗದ ಜನ, ಕಲ್ಲು ಮಣ್ಣುಗಳಿಂದ ಕಟ್ಟಿದ ದೇವಾಲಯವೇ ಬೇಕೆನ್ನುತ್ತಾರೆ. ಇದನ್ನು ಒಪ್ಪೋಣ. ಮುಗ್ಧ ಜನರ ನಂಬಿಕೆಗಳಿಗೂ ಅವಕಾಶವಿರಲಿ. ಆದರೆ ಬೆವರಿನ ಮಂದಿಯ ಬದುಕನ್ನು ಹಸನುಗೊಳಿಸುವ ಉದ್ದೇಶದ 'ಗೃಹಲಕ್ಷ್ಮಿ' ಯೋಜನೆಗೆ ಕನ್ನ ಹಾಕುವುದು ಬೇಡ. ಬಡವರ ಜೇಬಿಗೆ ಕೈ ಹಾಕುವುದು ಸರ್ವಥಾ ಖಂಡನೀಯ. ಉಳ್ಳವರು, ಜಮೀನ್ದಾರರು, ಉದ್ಯಮಪತಿಗಳಿಂದ ದೇಣಿಗೆ ಪಡೆದು ಕಟ್ಟಿಸಿಕೊಳ್ಳಲಿ.

ವಾಚಕರ ವಾಣಿ

ಶಿಕ್ಷಕರ ಮಕ್ಕಳಿಗೇಕೆ ಸರ್ಕಾರಿ ಶಾಲೆ ವರ್ಜ್ಯ?

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕುಸಿತ ಆಗಿರುವುದರ ಕುರಿತು ವಿಭಿನ್ನ ರೀತಿಯ ವಿಶ್ಲೇಷಣೆಗಳು ನಡೆಯುತ್ತಿವೆ. ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೆಳೆಯುವ ಪ್ರಯತ್ನಗಳು ಆಗೊಮ್ಮೆ ಈಗೊಮ್ಮೆ ಆಗುತ್ತವೆ. ಇದರಲ್ಲಿ ಶಿಕ್ಷಕರು ಕೂಡ ತೊಡಗಿಸಿಕೊಳ್ಳುತ್ತಾರೆ. ಪರಿಚಿತ ಎಸ್‌ಡಿಎಂಸಿ ಅಧ್ಯಕ್ಷರೊಬ್ಬರು ಈ ದಿಸೆಯಲ್ಲಿ ನನ್ನೊಡನೆ ಹಂಚಿಕೊಂಡ ಅನುಭವ ಹೀಗಿದೆ: ಶಿಕ್ಷಣ ಇಲಾಖೆಯ ತಾಲ್ಲೂಕು ಘಟಕದ ವತಿಯಿಂದ ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರ ಸಭೆ ಕರೆಯಲಾಗಿತ್ತು. ಸರ್ಕಾರವು ಮಕ್ಕಳಿಗೆ ಕೊಡುವ ಸೌಲಭ್ಯಗಳ ಕುರಿತು ಪಾಲಕರ ಮನವೊಲಿಸುವಲ್ಲಿ ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರ ಪಾತ್ರ ಮಹತ್ವದ್ದು ಎಂದು ಸಭೆಯಲ್ಲಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಯಿತು. ಬಳಿಕ ಈ ಸಂಬಂಧ ತಮ್ಮ ಅನಿಸಿಕೆ ವ್ಯಕ್ತಪಡಿಸಲು ಸೂಚಿಸಿದಾಗ ಎಸ್‌ಡಿಎಂಸಿ ಅಧ್ಯಕ್ಷರು 'ಇಷ್ಟೆಲ್ಲ ಸೌಲಭ್ಯಗಳು ದೊರೆಯುತ್ತಿದ್ದಾಗ್ಯೂ ಶಿಕ್ಷಕರೇಕೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುತ್ತಿಲ್ಲ?' ಎಂದು ಕೇಳಿದರಂತೆ! ಆಗ ಸಭೆಯಲ್ಲಿದ್ದ ಅಧಿಕಾರಿಗಳಿಗೂ ಶಿಕ್ಷಕರಿಗೂ ಉತ್ತರ ಕೊಡಲು ಸಾಧ್ಯವಾಗಲಿಲ್ಲವಂತೆ.

ಫಲಿತಾಂಶದಲ್ಲಿನ ಕುಸಿತಕ್ಕೂ ಶಿಕ್ಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸದೇ ಇರುವುದಕ್ಕೂ ಏನೂ ಸಂಬಂಧವಿಲ್ಲವೇ? ಸರ್ಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣ ನೀಡದಿರುವುದು ತಮಗೆ ಗೊತ್ತಿರುವ ಕಾರಣಕ್ಕೇ ಶಿಕ್ಷಕರು ತಮ್ಮ ಮಕ್ಕಳನ್ನು ಅಲ್ಲಿಗೆ ಸೇರಿಸುವುದಿಲ್ಲ ಎಂದು ಪಾಲಕರು ಭಾವಿಸಿದರೆ, ಅದನ್ನು ತಪ್ಪೆಂದು ಹೇಗೆ ಹೇಳುವುದು? ತಮಗೆ ಮಾತ್ರ ಸರ್ಕಾರಿ ನೌಕರಿ ಬೇಕು, ಆದರೆ ತಮ್ಮ ಮಕ್ಕಳು ಖಾಸಗಿ ಶಾಲೆಯಲ್ಲಿ ಓದಬೇಕು ಎಂಬ ನಿಲುವು ಶಿಕ್ಷಕರದು. ಇದು ವಿಪರ್ಯಾಸವಲ್ಲವೇ?

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ಪ್ರತ್ಯೇಕ ಸನ್ಮಾನ: ತಪ್ಪು ಸಂದೇಶಕ್ಕೆ ದಾರಿ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಸಕ್ತ ವರ್ಷ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರತ್ಯೇಕವಾಗಿ ಸನ್ಮಾನಿಸಿ ನಗದು ಬಹುಮಾನ ಘೋಷಿಸಿರುವುದು ಸರಿಯಷ್ಟೆ. ಆದರೆ ಪ್ರತ್ಯೇಕವಾಗಿ ಸನ್ಮಾನಿಸಿರುವುದು ಜನರಿಗೆ ತಪ್ಪುಸಂದೇಶವನ್ನು ನೀಡುತ್ತದೆ. ಇದೇ ಮಾದರಿಯನ್ನು ಅನುಸರಿಸಿ ಶಿಕ್ಷಣ ಸಚಿವರು, ಉಸ್ತುವಾರಿ ಸಚಿವರು, ಶಾಸಕರು ಪ್ರತ್ಯೇಕವಾಗಿ ಸನ್ಮಾನಿಸುತ್ತಾ ಹೋದರೆ, ಇವರ ನಡುವೆ ಒಮ್ಮತವಿಲ್ಲ ಎಂದು ಜನ ತಿಳಿಯಲು ಆಸ್ಪದವಾಗುತ್ತದೆ ಹಾಗೂ ಜನಪ್ರಿಯತೆ ಗಳಿಸಲು ಅನಗತ್ಯವಾಗಿ ಪೈಪೋಟಿಗೆ ಇಳಿದಿರುವಂತೆ ಕಾಣುತ್ತದೆ.

ಇದರ ಬದಲು, ಸರ್ಕಾರದ ವತಿಯಿಂದ ಅಧಿಕೃತವಾಗಿ ಸಮಾರಂಭ ಆಯೋಜಿಸಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು, ವಿರೋಧ ಪಕ್ಷಗಳ ನಾಯಕರನ್ನು ಸಹ ಕರೆಸಿ ಒಟ್ಟುಗೂಡಿ ಸನ್ಮಾನಿಸಿದರೆ ಅರ್ಥಪೂರ್ಣವಾಗಿರುತ್ತದೆ.

ಪುಟ್ಟದಾಸು, ಮಂಡ್ಯ

ಜಾಮೀನು ನೀಡಿಕೆ: ಸಂಭ್ರಮ ಹಾಸ್ಯಾಸ್ಪದ

ಮಹಿಳೆ ಅಪಹರಣ ಪ್ರಕರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿದ್ದ ಶಾಸಕ ಎಚ್.ಡಿ.ರೇವಣ್ಣ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿ ಮನೆಗೆ ತೆರಳಿದಾಗ, ಕುಟುಂಬಸ್ಥರು ಆರತಿ ಬೆಳಗಿ ಸ್ವಾಗತಿಸಿದ್ದಲ್ಲದೆ, ಸ್ಥಳದಲ್ಲಿದ್ದ ಬೆಂಬಲಿಗರು ಘೋಷಣೆ ಕೂಗಿ ಸಂಭ್ರಮಿಸಿದ್ದು ವರದಿಯಾಗಿದೆ. ಇಂತಹ ನಡೆ ಹಾಸ್ಯಾಸ್ಪದವಲ್ಲವೇ? ನಮ್ಮದು ಅಪಾರ ಗೌರವಾನ್ವಿತವಾದ ಸಂಸ್ಕೃತಿ. ಇಂತಹ ನಾಡಿನಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ, ಅನಾಚಾರ ನಡೆಯುತ್ತಿರುವುದನ್ನು ಸುದ್ದಿಮಾಧ್ಯಮಗಳಲ್ಲಿ ಪ್ರತಿನಿತ್ಯ ನೋಡುತ್ತಿರುತ್ತೇವೆ. ಇಂತಹ ಕೃತ್ಯ ಎಸಗುವ ಅಪರಾಧಿಗಳಿಗೆ ಶಿಕ್ಷೆ ಆಗಲೇಬೇಕು. ಆದರೆ ಎಷ್ಟೋ ಜನರಿಗೆ ನ್ಯಾಯಾಂಗದ ಬಗ್ಗೆ ಭಯ ಇಲ್ಲದಂತಾಗಿದೆ. ಚಿತ್ರದುರ್ಗದ ಮುರುಘಾಮಠದ ಸ್ವಾಮೀಜಿ ಪೋಕ್ಸೊ ಕಾಯ್ದೆಯಡಿ ಬಂಧಿತರಾಗಿ ವರ್ಷಗಟ್ಟಲೆ ಜೈಲಿನಲ್ಲಿ ಕಳೆಯಬೇಕಾಗಿ ಬಂದದ್ದು ನ್ಯಾಯಾಂಗಕ್ಕೆ ಸಂದ ಗೌರವವೇ ಸರಿ. ಇಂತಹ ಕ್ರಮಗಳು ಜನರಲ್ಲಿ ಎಚ್ಚರ ಮೂಡಿಸುತ್ತವೆ.

ರೇವಣ್ಣ ಪ್ರಕರಣದಲ್ಲಿ ಅಪಹರಣ ನಡೆದಿರುವುದು ಸಾಬೀತಾದರೆ ಅದೊಂದು ಅಪರಾಧವೇ ಸರಿ. ಹೀಗಾಗಿ, ಆರೋಪ ಹೊತ್ತವರಿಗೆ ಪರಾಕ್ ಹಾಕುವ ಸಂಸ್ಕೃತಿಯನ್ನು ಜನ ಬಿಡಬೇಕು. ಅವರು ನಿರಪರಾಧಿ ಎಂದು ಘೋಷಣೆಯಾದರೆ ಮನೆ ಮನೆಗೆ ಸಿಹಿ ಹಂಚಿ ಸಂಭ್ರಮಿಸಲಿ. ಅದುಬಿಟ್ಟು, ನ್ಯಾಯಾಲಯ ಜಾಮೀನು ನೀಡಿದ್ದಕ್ಕೇ ಆರತಿ ಬೆಳಗಿ ಸ್ವಾಗತಿಸುವುದು ನಗೆಪಾಟಲು.

ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

ನಿವೃತ್ತರ ಸೇವೆ ಸದ್ಬಳಕೆಯಾಗಲಿ

ಸರ್ಕಾರದ ವಿವಿಧ ಇಲಾಖೆಗಳು, ನಿಗಮ– ಮಂಡಳಿಗಳಿಗೆ ನಿವೃತ್ತರನ್ನು ನೇಮಕ ಮಾಡಿಕೊಳ್ಳುವುದರಿಂದ ಸರ್ಕಾರಕ್ಕೆ ಹೊರೆಯಾಗುತ್ತದೆ ಎಂದು ವಿಶೇಷ ವರದಿ (ಪ್ರ.ವಾ., ಮೇ 15) ಪ್ರತಿಪಾದಿಸಿದೆ. ಸರ್ಕಾರದ ಯಾವುದೇ ಕಾರ್ಯಕ್ರಮ ಸದ್ಬಳಕೆಯಾಗದಿದ್ದಲ್ಲಿ ಅದು ಸರ್ಕಾರಕ್ಕೆ ಹೊರೆಯೇ ಸರಿ. ಆದರೆ ಕಾಲಕಾಲಕ್ಕೆ ನೇಮಕಾತಿ ಮಾಡಿಕೊಳ್ಳದಿದ್ದಾಗ ಸರ್ಕಾರದ ಕೆಲಸ ಸುಸೂತ್ರವಾಗಿ ನಡೆಯಬೇಕಾದಲ್ಲಿ ನಿವೃತ್ತರ ಬಳಕೆ ಅನಿವಾರ್ಯ. ಇದರಿಂದ ಖಂಡಿತ ಸರ್ಕಾರಕ್ಕೆ ಹೊರೆಯಾಗುವುದಿಲ್ಲ. ಏಕೆಂದರೆ ಅದೇ ಹುದ್ದೆಗೆ ಹೊಸದಾಗಿ ಅಧಿಕಾರಿ ಅಥವಾ ನೌಕರನನ್ನು ನೇಮಿಸಿಕೊಂಡಲ್ಲಿ ಸರ್ಕಾರಿ ನೌಕರನಿಗೆ ನಿಗದಿಪಡಿಸಿದ ವೇತನದ ಜೊತೆಗೆ ಇತರ ಭತ್ಯೆಗಳು, ರಜೆಗಳು, ವೈದ್ಯಕೀಯ ಸೌಲಭ್ಯ, ರಜೆ ನಗದೀಕರಣದಂತಹ ಸೌಲಭ್ಯಗಳನ್ನೆಲ್ಲಾ ಪರಿಗಣಿಸಬೇಕಾಗುತ್ತದೆ. ಆಗ ಗುತ್ತಿಗೆ ಆಧಾರದಲ್ಲಿ ನೀಡುವ ಮೊತ್ತ ಏನೇನೂ ಅಲ್ಲ ಎಂಬುದು ತಿಳಿಯುತ್ತದೆ. ಆದರೆ ಇದರಿಂದ ಸಮಾಜದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿ, ಸಮಾಜದ ಸ್ವಾಸ್ಥ್ಯ ಕೆಡುತ್ತದೆ.

ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಇರುವ ಅವಕಾಶವನ್ನು ಉಪಯೋಗ ಪಡಿಸಿಕೊಳ್ಳುವುದಕ್ಕಿಂತ ದುರುಪಯೋಗ ಮಾಡಿಕೊಳ್ಳುತ್ತಿರುವುದೇ ಹೆಚ್ಚು. ಈ ರೀತಿ ನೇಮಕ ಮಾಡಿಕೊಳ್ಳುವ ಅವಶ್ಯಕತೆ ಇದೆಯೇ ಎಂಬುದನ್ನು ತನಿಖಾ ತಂಡದ ಮೂಲಕ ಪರಿಶೀಲನೆಗೆ ಒಳಪಡಿಸುವುದು ಒಳ್ಳೆಯದು. ರಾಜಕಾರಣಿಗಳು ಹಾಗೂ ಅಧಿಕಾರಿಗಳು ಆಯಕಟ್ಟಿನ ಜಾಗ ನಿರ್ವಹಣೆಗೆ ನಿವೃತ್ತರ ಸೇವೆಯನ್ನು ಬಳಸಿಕೊಳ್ಳುವುದು ಹಾಗೂ ನಿವೃತ್ತರ ವೈಯಕ್ತಿಕ ಹಿತಾಸಕ್ತಿಗಾಗಿ ಅವರನ್ನು ನೇಮಕ ಮಾಡಿಕೊಳ್ಳುವುದು ಸರಿಯಲ್ಲ.

ಕೆ.ಎಂ.ನಾಗರಾಜು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಛಾಬಹಾರ್ ಬಂದರು ಒಪ್ಪಂದ
ಆರ್ಥಿಕ ದಿಗ್ಬಂಧನದ ತೂಗುಗತ್ತಿ

ಇರಾನ್‌ನ ಛಾಬಹಾರ್ ಬಂದರಿನ ಕಾರ್ಯನಿರ್ವಹಣೆ ಸಂಬಂಧ ಇರಾನ್ ಮತ್ತು ಭಾರತ ಸರ್ಕಾರವು ಈಚೆಗಷ್ಟೇ ಒಪ್ಪಂದ ಮಾಡಿಕೊಂಡಿವೆ. ಈ ಬಂದರು ಅಭಿವೃದ್ಧಿ ಮತ್ತು ನಿರ್ವಹಣೆ ಸಂಬಂಧ ಎರಡೂ ಸರ್ಕಾರಗಳು 2003, 2015 ಮತ್ತು 2017ರಲ್ಲಿ ಒಪ್ಪಂದ ಮಾಡಿಕೊಂಡಿದ್ದವು. 2018ರಿಂದ ಈ ಬಂದರನ್ನು ಭಾರತವೇ ನಿರ್ವಹಣೆ ಮಾಡುತ್ತಿತ್ತು. ಈಗ ಬಂದರು ನಿರ್ವಹಣೆ ಒಪ್ಪಂದವನ್ನು ಹತ್ತು ವರ್ಷಗಳಿಗೆ ವಿಸ್ತರಣೆ ಮಾಡಿಕೊಳ್ಳಲಾಗಿದೆ. ಇದು ಭಾರತದ ಮೇಲೆ ಆರ್ಥಿಕ ದಿಗ್ಬಂಧನ ಹೇರಲು ಕಾರಣವಾಗಬಹುದು ಎಂದು ಅಮೆರಿಕ ಎಚ್ಚರಿಕೆ ನೀಡಿತ್ತು. ಈ ಮಧ್ಯೆಯೇ ಛಾಬಹಾರ್ ಬಂದರು ಒಪ್ಪಂದದ ಅನುಕೂಲಗಳು ಮತ್ತು ಅಮೆರಿಕವು ದಿಗ್ಬಂಧನ ಹೇರಿದರೆ ಅದರಿಂದಾಗುವ ಅನನುಕೂಲಗಳ ಬಗ್ಗೆ ಚರ್ಚೆ ಆರಂಭವಾಗಿದೆ

ಒಪ್ಪಂದದ ಸಾಧ್ಯತೆಗಳು

ಒಪ್ಪಂದವು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬಂದರೆ ಭಾರತಕ್ಕೆ ಹಲವು ಅನುಕೂಲಗಳಿವೆ. ರಷ್ಯಾ ಮತ್ತು ಇರಾನ್ ಈಗಾಗಲೇ ಅಮೆರಿಕ ಮತ್ತು ಅಮೆರಿಕದ ಮಿತ್ರ ರಾಷ್ಟ್ರಗಳ ಆರ್ಥಿಕ ದಿಗ್ಬಂಧನಕ್ಕೆ ಗುರಿಯಾಗಿವೆ. ಹೀಗಾಗಿ ವಿಶ್ವದ ಬೇರೆ ದೇಶಗಳೊಟ್ಟಿಗೆ ಇವುಗಳ ವ್ಯಾಪಾರ–ವಾಣಿಜ್ಯ ವಹಿವಾಟು ಅಷ್ಟಕ್ಕಷ್ಟೆ. ಇದಕ್ಕೆ ಬೇರೆ ದೇಶಗಳು ವ್ಯಾಪಾರ ನಡೆಸಲು ಹಿಂದೇಟು ಹಾಕುತ್ತಿರುವುದು ಒಂದು ಕಾರಣ. ಅಮೆರಿಕ ಪ್ರಾಯೋಜಿತ ಆರ್ಥಿಕ ದಿಗ್ಬಂಧನದ ಕಾರಣದಿಂದ ಜಲಮಾರ್ಗ ಮತ್ತು ಭೂಮಾರ್ಗಗಳು ಇರಾನ್ ಮತ್ತು ರಷ್ಯಾಕ್ಕೆ ಮುಚ್ಚಿಹೋಗಿರುವುದು ಇನ್ನೊಂದು ಪ್ರಮುಖ ಕಾರಣ.

ಇದಕ್ಕಾಗಿ ಈ ಎರಡೂ ದೇಶಗಳು ಕಂಡುಕೊಂಡ ಪರಿಹಾರವೇ, ‘ಅಂತರರಾಷ್ಟ್ರೀಯ ಉತ್ತರ ಮತ್ತು ದಕ್ಷಿಣ ಸಾರಿಗೆ ಕಾರಿಡಾರ್’. ರೈಲುಮಾರ್ಗ–ರಸ್ತೆಮಾರ್ಗ ಮತ್ತು ಸಮುದ್ರ ಮಾರ್ಗವನ್ನೂ ಒಳಗೊಂಡ ಈ ಕಾರಿಡಾರ್‌ನಿಂದ ಭಾರತಕ್ಕೂ ಅನುಕೂಲವಿದೆ. ಛಾಬಹಾರ್ ಬಂದರಿನ ಮೂಲಕ ಈ ಕಾರಿಡಾರ್‌ಗೆ ಸಂಪರ್ಕ ಕಲ್ಪಿಸಬಹುದು. ಭಾರತ–ಐರೋಪ್ಯ ದೇಶಗಳ ರಫ್ತು – ಆಮದು ವಹಿವಾಟನ್ನು ಈ ಕಾರಿಡಾರ್‌ನ ಮೂಲಕ ನಡೆಸಿದರೆ ಹಲವು ಲಾಭಗಳಿವೆ. ಆದರೆ ಅದು ಅಮೆರಿಕ ಆರ್ಥಿಕ ದಿಗ್ಬಂಧನ ಹೇರದಿದ್ದರೆ ಮತ್ತು ಐರೋಪ್ಯ ದೇಶಗಳು ಅದನ್ನು ಪಾಲಿಸದೇ ಇದ್ದರಷ್ಟೇ ಈ ಲಾಭಗಳು ಭಾರತಕ್ಕೆ ದೊರೆಯುತ್ತವೆ.



ಅಮೆರಿಕದ ಎಚ್ಚರಿಕೆ

ಛಾಬಹಾರ್ ಬಂದರು ಸಂಬಂಧ ಇರಾನ್ ಜೊತೆಗೆ ಮಾಡಿಕೊಂಡಿರುವ ಒಪ್ಪಂದದ ಕಾರಣಕ್ಕಾಗಿ ಭಾರತದ ಮೇಲೆ ಆರ್ಥಿಕ ದಿಗ್ಬಂಧನ ಹೇರುವ ಎಚ್ಚರಿಕೆಯನ್ನು ಅಮೆರಿಕ ನೀಡಿದೆ. ‘ಇರಾನ್–ಭಾರತದ ಒಪ್ಪಂದದ ಕುರಿತು ತಿಳಿದಿದೆ. ಇರಾನ್ ಮೇಲೆ ಹೇರಿರುವ ದಿಗ್ಬಂಧನವು ಮುಂದುವರಿಯಲಿದೆ. ಯಾವುದೇ ದೇಶವು ಇರಾನ್‌ನೊಂದಿಗೆ ವ್ಯಾವಹಾರಿಕ ಒಪ್ಪಂದಕ್ಕೆ ಮುಂದಾದರೆ, ಅಂಥ ದೇಶವು ಆರ್ಥಿಕ ದಿಗ್ಬಂಧನ ಎದುರಿಸುವುದಕ್ಕೆ ಸಿದ್ಧವಾಗಬೇಕೆಂದು ನಾವು ಹಿಂದೆಯೂ ಹಲವು ಬಾರಿ ಹೇಳಿದ್ದೇವೆ. ಈಗಲೂ ನಮ್ಮದು ಅದೇ ಅಭಿಪ್ರಾಯ’ ಎಂದು ಅಮೆರಿಕ ಹೇಳಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಭಾರತವು, ‘ಬಂದರು ನಿರ್ಮಾಣದಿಂದಾಗುವ ಲಾಭದ ಕುರಿತು ಜಗತ್ತಿಗೆ ನಾವು ಹೇಗೆ ಮನವರಿಕೆ ಮಾಡಿಕೊಡುತ್ತೇವೆ ಎಂಬುದು ಮುಖ್ಯವಾಗುತ್ತದೆ. ಆದ್ದರಿಂದ, ಭಾರತವು ಈ ಬಂದರಿನಿಂದಾಗುವ ಅನುಕೂಲಗಳ ಬಗ್ಗೆ ಜಗತ್ತಿಗೆ ಒತ್ತಿ ಹೇಳಲಿದೆ’ ಎಂದು ಹೇಳಿದೆ. ಆದರೆ, ಭಾರತದ ಮೇಲಂತೂ ತೂಗುಗತ್ತಿಯೊಂದು ನೇತಾಡುತ್ತಿದೆ.

ಯಾವುದೇ ದೇಶವು, ಅಮೆರಿಕದ ಭದ್ರತೆಗೆ ಹಾಗೂ ಆರ್ಥಿಕತೆಗೆ ಬೆದರಿಕೆ ಒಡ್ಡುತ್ತಿದೆ ಎಂದಾದರೆ ಅಮೆರಿಕವು ಅಂಥ ದೇಶಗಳ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಹೇರುತ್ತದೆ. ಇರಾನ್‌ನ ಅಣ್ವಸ್ತ್ರ ಕಾರ್ಯಕ್ರಮದ ಕಾರಣದಿಂದ ಅದರ ಮೇಲೆ ಹಲವು ವರ್ಷಗಳಿಂದ ಅಮೆರಿಕದ ದಿಗ್ಬಂಧನ ಜಾರಿಯಲ್ಲಿದೆ. ಪರಿಣಾಮವಾಗಿ ಇರಾನ್ ಆರ್ಥಿಕವಾಗಿ ಕುಸಿದಿದೆ. ಭಾರತದ ಮೇಲೆ ಅಮೆರಿಕವು ದಿಗ್ಬಂಧನ ಹೇರಿದರೆ, ಭಾರತದ ಆರ್ಥಿಕತೆಗೂ ಪೆಟ್ಟು ಬೀಳಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಉಕ್ರೇನ್ ಮೇಲಿನ ದಾಳಿ ಕಾರಣಕ್ಕೆ ಅಮೆರಿಕ ರಷ್ಯಾ ಮೇಲೆ ದಿಗ್ಬಂಧನ ಹೇರಿತ್ತು. ಆನಂತರ ರಷ್ಯಾ ಜೊತೆಗೆ ವ್ಯವಹಾರ ವಿಸ್ತರಿಸಿಕೊಂಡ ಕಾರಣಕ್ಕೆ, ಅಮೆರಿಕವು ಈ ಹಿಂದೆಯೇ ದಿಗ್ಬಂಧನ ಹೇರುವ ಎಚ್ಚರಿಕೆಯನ್ನು ಭಾರತಕ್ಕೆ ನೀಡಿತ್ತು. ಆದರೆ ಅದು ಎಚ್ಚರಿಕೆಯಾಗಷ್ಟೇ ಉಳಿಯಿತು ಹೊರತು ಜಾರಿಯಾಗಲಿಲ್ಲ. ಆದರೆ, ಈ ಬಾರಿ ಅಂತರರಾಷ್ಟ್ರೀಯ ರಾಜಕೀಯ ಹಾಗೂ ಲೆಕ್ಕಾಚಾರಗಳು ಬದಲಾಗಿವೆ. ಈ ಕಾರಣದಿಂದ ಅಮೆರಿಕವು ಸಣ್ಣ ಪ್ರಮಾಣದ ದಿಗ್ಬಂಧನವನ್ನಾದರೂ ಹೇರಬಹುದು ಅಥವಾ ಮೊದಲಿನಂತೆಯೇ ಇದು ಕೇವಲ ಎಚ್ಚರಿಕೆಯಾಗಷ್ಟೇ ಉಳಿಯಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

- ತೈಲ ಉತ್ಪಾದನಾ ದೇಶಗಳಲ್ಲಿ (ಒಪೆಕ್ +) ಹಲವು ಅಮೆರಿಕದ ಸಖ್ಯದಲ್ಲಿವೆ. ಅಮೆರಿಕವು ಭಾರತದ ಮೇಲೆ ದಿಗ್ಬಂಧನ ವಿಧಿಸಿದರೆ, ಭಾರತದ ತೈಲ ಆಮದು ಮೇಲೆ ಹೊಡೆತ ಬೀಳಲಿದೆ. ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಮೇಲೆ ಇದು ಪರಿಣಾಮ ಬೀರಲಿದೆ. ಭಾರತದ ಆಮದು ವ್ಯಾಪಾರವನ್ನೂ ಇದು ಬಾಧಿಸಬಹುದು
- ಭಾರತದ ರಫ್ತಿಗೂ ಹೆಚ್ಚಿನ ಪರಿಣಾಮವಾಗಲಿದೆ. ಐರೋಪ್ಯ ದೇಶಗಳು ಸೇರಿದಂತೆ ಅಮೆರಿಕದ ಜತೆಗಿರುವ ದೇಶಗಳಿಗೇ ಭಾರತವು ರಫ್ತು ಮಾಡುತ್ತದೆ. ದಿಗ್ಬಂಧನವು ಭಾರತದ ಆದಾಯವನ್ನು ಕಡಿತ ಮಾಡಲಿದೆ. ದೇಶದ ರಫ್ತಿಗೆ ಹೊಸ ಮಾರುಕಟ್ಟೆಗಳನ್ನು ಹುಡುಕಿಕೊಳ್ಳುವುದು ದೀರ್ಘವಾದ ಪ್ರಕ್ರಿಯೆ ಆಗಲಿದೆ. ಇದು ಭಾರತಕ್ಕೆ ದೊಡ್ಡ ಪೆಟ್ಟನ್ನೇ ಕೊಡಬಹುದು
- ಭಾರತದ ಅಂತರರಾಷ್ಟ್ರೀಯ ವ್ಯವಹಾರವು ಡಾಲರ್‌ನಲ್ಲಿ ನಡೆಯುತ್ತದೆ. ಅಮೆರಿಕವು ವಿಧಿಸುವ ದಿಗ್ಬಂಧನವು ಇದಕ್ಕೂ ಪೆಟ್ಟು ನೀಡಲಿದೆ. ಎಲ್ಲ ದೇಶಗಳು ಡಾಲರ್‌ನಲ್ಲಿಯೇ ವ್ಯವಹಾರಕ್ಕೆ ಆದ್ಯತೆ ನೀಡುತ್ತವೆ. ರಫ್ತು–ಆಮದಿನಲ್ಲಿ ಹಣದ ವರ್ಗಾವಣೆಗೆ ತಾಂತ್ರಿಕ ತೊಡಕು ಎದುರಾಗಬಹುದು
- ಭಾರತದ ಹಲವು ಮಾಹಿತಿ ತಂತ್ರಜ್ಞಾನ ಕಂಪನಿಗಳ ಗ್ರಾಹಕರು ಅಮೆರಿಕ ಮತ್ತು ಅದರ ಮಿತ್ರ ದೇಶಗಳೇ ಆಗಿವೆ. ಜೊತೆಗೆ, ಇಂಥ ಕಂಪನಿಗಳು ಲಾಭದಾಯಕವಾಗಿಯೂ ಇವೆ. ಆದರೆ, ದಿಗ್ಬಂಧನದ ಕಾರಣಕ್ಕಾಗಿ ಇವುಗಳು ನಷ್ಟ ಅನುಭವಿಸಬೇಕಾಗಬಹುದು ಮತ್ತು ಇದರಿಂದ ಉದ್ಯೋಗ ನಷ್ಟವೂ ಉಂಟಾಗಬಹುದು

ಸಾಗಾಣೆ ಅಂತರ ಇಳಿಕೆ

ಭಾರತವು ಈಗ ಐರೋಪ್ಯ ದೇಶಗಳೊಟ್ಟಿಗೆ ವ್ಯಾಪಾರ ವಹಿವಾಟನ್ನು ಸಮುದ್ರ ಮಾರ್ಗದ ಮೂಲಕವೇ ನಡೆಸುತ್ತದೆ. ಭಾರತದ ಸರಕುಗಳು ಕೆಂಪು ಸಮುದ್ರ ಮಾರ್ಗದ ಮೂಲಕ ಐರೋಪ್ಯ ದೇಶಗಳನ್ನು ತಲುಪುತ್ತವೆ. ಇದು ದೀರ್ಘವಾದ ಸಮುದ್ರ ಮಾರ್ಗವಾಗಿದೆ. ಅಂದಾಜು 15,000–15,500 ಕಿ.ಮೀ.ನಷ್ಟು ದೂರದ ಮಾರ್ಗವಿದು. ಛಾಬಹಾರ್ ಬಂದರು ಒಪ್ಪಂದದ ಮೂಲಕ ಭಾರತವು ‘ಅಂತರರಾಷ್ಟ್ರೀಯ ಉತ್ತರ–ದಕ್ಷಿಣ ಸಾರಿಗೆ ಕಾರಿಡಾರ್’ನ ಭಾಗವಾದರೆ, ಈ ಅಂತರವನ್ನು 7,200 ಕಿ.ಮೀ.ಗೆ ಇಳಿಸಬಹುದು. ಇದರಿಂದ ಸರಕುಗಳ ಸಾಗಣೆ ಕ್ಷಿಪ್ರವಾಗಿ ಆಗುವುದಲ್ಲದೆ, ಸಾಗಣೆ ವೆಚ್ಚವೂ ಇಳಿಕೆಯಾಗಲಿದೆ.

ಕಚ್ಚಾತೈಲ ಬೆಲೆ ಇಳಿಕೆ ಸಾಧ್ಯತೆ

ಭಾರತವು ಈಗಾಗಲೇ ರಷ್ಯಾದಿಂದ ಕಚ್ಚಾತೈಲವನ್ನು ತರಿಸಿಕೊಳ್ಳುತ್ತಿದೆ. ಇದು ಕೆಂಪು ಸಮುದ್ರ ಮಾರ್ಗದ ಮೂಲಕವೇ ಭಾರತಕ್ಕೆ ಬರುತ್ತಿರುವ ಕಾರಣ, ಸಾಗಣೆ ವೆಚ್ಚ ಹೆಚ್ಚೇ ಇದೆ. ‘ಅಂತರರಾಷ್ಟ್ರೀಯ ಉತ್ತರ–ದಕ್ಷಿಣ ಸಾರಿಗೆ ಕಾರಿಡಾರ್’ನ ಮೂಲಕ ಇದೇ ತೈಲವನ್ನು ತರಿಸಿಕೊಂಡರೆ ಸಾಗಣೆ ವೆಚ್ಚ ಇಳಿಕೆಯಾಗಿ, ಕಚ್ಚಾತೈಲದ ಬೆಲೆ ಇಳಿಕೆಯಾಗಲಿದೆ. ಜತೆಗೆ ಇರಾನ್‌ನಿಂದಲೂ ಕಚ್ಚಾತೈಲ ತರಿಸಿಕೊಳ್ಳಲು ಅವಕಾಶ ದೊರೆಯಬಹುದು.

ಅಮೆರಿಕದ ನೇತೃತ್ವದಲ್ಲಿ ಆರ್ಥಿಕ ದಿಗ್ಬಂಧನ ಇರುವ ಕಾರಣದಿಂದ ರಷ್ಯಾ ಮತ್ತು ಇರಾನ್‌ನ ಕಚ್ಚಾತೈಲಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದಿದೆ. ಹೀಗಾಗಿ ರಿಯಾಯಿತಿ ದರದಲ್ಲಿ ಅವು ಕಚ್ಚಾತೈಲ ಮಾರಾಟ ಮಾಡುತ್ತಿವೆ. ಈ ಎರಡೂ ದೇಶಗಳಿಂದ ಭಾರತವು ಕಚ್ಚಾತೈಲ ಖರೀದಿಸಿದರೆ, ಭಾರತಕ್ಕೆ ಲಾಭವೇ ಆಗಲಿದೆ. ಕಡಿಮೆ ಬೆಲೆಗೆ ದೊರೆಯುವ ಕಚ್ಚಾತೈಲದ ಮೇಲಿನ ಲಾಭವನ್ನು ಕೇಂದ್ರ ಸರ್ಕಾರವು ಜನಸಾಮಾನ್ಯರಿಗೆ ವರ್ಗಾಯಿಸಿದರೆ, ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಮಾರಾಟ ಬೆಲೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಲಿದೆ.

- ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಾದ ದೇಶಗಳೊಟ್ಟಿಗೆ ವ್ಯಾಪಾರ ನಡೆಸಲು ಭಾರತಕ್ಕೆ ಅನುಕೂಲ ಆಗಲಿದೆ
- ಮಧ್ಯ ಏಷ್ಯಾದ ದೇಶಗಳೊಟ್ಟಿಗೆ ಭಾರತದ ವ್ಯಾಪಾರ ವಹಿವಾಟಿನ ಪರಿಮಾಣ ತೀರಾ ಕಡಿಮೆ. ಈ ದೇಶಗಳಲ್ಲಿ ಭಾರತವು ತನ್ನ ಸರಕುಗಳಿಗೆ ಹೊಸ ಮಾರುಕಟ್ಟೆ ಕಂಡುಕೊಳ್ಳಲು ಸಾಧ್ಯವಾಗಲಿದೆ
- ಅರಬ್ಬಿ ಸಮುದ್ರ ಮತ್ತು ಪರ್ಷಿಯನ್ ಕೊಲ್ಲಿಯ ಹಲವು ಬಂದರುಗಳನ್ನು ಚೀನಾವು ತೆಕ್ಕೆಗೆ ತೆಗೆದುಕೊಂಡಿದ್ದು, ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದೆ. ಛಾಬಹಾರ್ ಬಂದರು ಭಾರತದ ನಿಯಂತ್ರಣಕ್ಕೆ ಬಂದರೆ, ಈ ಪ್ರದೇಶದಲ್ಲಿ ಚೀನಾದ ಪ್ರಾಬಲ್ಯಕ್ಕೆ ತಡೆ ಒಡ್ಡಿದಂತೆಯೂ ಆಗುತ್ತದೆ

ಅಫ್ಘಾನಿಸ್ತಾನದ ಮಾರುಕಟ್ಟೆ ಮೇಲಿನ ಜೂಜು

ಅಫ್ಘಾನಿಸ್ತಾನದಲ್ಲಿ ಚುನಾಯಿತ ಸರ್ಕಾರವಿದ್ದಾಗ ಭಾರತವು ‘ಅಂತರರಾಷ್ಟ್ರೀಯ ಸಾರಿಗೆ ಕಾರಿಡಾರ್’ ಯೋಜನೆ ರೂಪಿಸಿತ್ತು. ಇರಾನ್‌ನ ಛಾಬಹಾರ್ ಬಂದರಿನಿಂದ ಇರಾನ್ ಒಳನಾಡಿನ ಮೂಲಕ ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ವರೆಗೆ ರಸ್ತೆ–ರೈಲು ಮಾರ್ಗ ರೂಪಿಸುವುದೇ ಈ ಯೋಜನೆ. ಆದರೆ ಅಫ್ಘಾನಿಸ್ತಾನದ ಸರ್ಕಾರದ ಪತನ ಮತ್ತು ತಾಲಿಬಾನ್ ಸರ್ಕಾರದ ಮರುಸ್ಥಾಪನೆಯು ಈ ಯೋಜನೆಯನ್ನು ಬಹುತೇಕ ಸ್ಥಗಿತಗೊಳಿಸಿದೆ. ಅಫ್ಘಾನಿಸ್ತಾನದೊಟ್ಟಿಗೆ ಭಾರತದ ವ್ಯಾಪಾರವೂ ಕುಸಿದಿದೆ. ಈ ಸಂಬಂಧ ಮೂರೂ ದೇಶಗಳು ಹಲವು ಒಪ್ಪಂದಗಳನ್ನು ಮಾಡಿಕೊಂಡಿದ್ದವು. ಈಗ ಮಾಡಿಕೊಂಡಿರುವ ಒಪ್ಪಂದದಿಂದ ಅಫ್ಘಾನಿಸ್ತಾನವನ್ನು ಹೊರಗಿಡಲಾಗಿದೆ. ಆದರೆ ಇರಾನ್ ಮತ್ತು ಅಫ್ಘಾನಿಸ್ತಾನದಲ್ಲಿ ರೈಲು ಮತ್ತು ರಸ್ತೆ ಮಾರ್ಗ ನಿರ್ಮಿಸಲು ಭಾರತವು ಆರ್ಥಿಕ ನೆರವು ನೀಡಿರುವ ಕಾರಣ, ಮುಂದೊಂದು ದಿನ ಮತ್ತೆ ಈ ಯೋಜನೆ ಅನುಷ್ಠಾನಕ್ಕೆ ಬರಬಹುದು.

ಈ ಕಾರಿಡಾರ್ ಯೋಜನೆ ರೂಪುಗೊಂಡಾಗ ಅಫ್ಘಾನಿಸ್ತಾನದಲ್ಲಿನ ಅಪಾರ ಖನಿಜ ಸಂಪತ್ತನ್ನೂ ಗಮನದಲ್ಲಿ ಇರಿಸಿಕೊಳ್ಳಲಾಗಿತ್ತು. ಅಲ್ಲಿನ ಪೆಟ್ರೋಲಿಯಂ, ಚಿನ್ನ, ಮ್ಯಾಂಗನೀಸ್ ಮತ್ತು ಲಿಥಿಯಂ ನಿಕ್ಷೇಪಗಳಲ್ಲಿ ಗಣಿಗಾರಿಕೆಯನ್ನೂ ಪರಿಗಣಿಸಿ ಯೋಜನೆ ರೂಪಿಸಲಾಗಿತ್ತು. ಆದರೆ ಈಗ ಇಲ್ಲಿ ಗಣಿಗಾರಿಕೆ ನಡೆಸುವ ಉದ್ದೇಶದಿಂದ ಚೀನಾವು ತಾಲಿಬಾನಿಗಳ ಒಟ್ಟಿಗೆ ಮಾತುಕತೆ ನಡೆಸುತ್ತಿದೆ. ಹೀಗಾಗಿ ಈ ಯೋಜನೆ ಮೇಲೆ ಭಾರತ ಮಾಡುತ್ತಿರುವ ಹೂಡಿಕೆ ಒಂದರ್ಥದಲ್ಲಿ ಜೂಜಾಟವೇ ಸರಿ ಎಂದು ಜಾಗತಿಕ ಮಟ್ಟದ ಸುದ್ದಿಸಂಸ್ಥೆಗಳು ವಿಶ್ಲೇಷಿಸುತ್ತಿವೆ.

ಆಧಾರ: ಛಾಬಹಾರ್ ಒಪ್ಪಂದ ಪತ್ರ, ಭಾರತ–ಇರಾನ್–ಅಫ್ಘಾನಿಸ್ತಾನ ‘ಅಂತರರಾಷ್ಟ್ರೀಯ ಸಾರಿಗೆ ಕಾರಿಡಾರ್’ ಒಪ್ಪಂದ, ರಷ್ಯಾ–ಇರಾನ್‌ನ ‘ಅಂತರರಾಷ್ಟ್ರೀಯ ಉತ್ತರ ಮತ್ತು ದಕ್ಷಿಣ ಸಾರಿಗೆ ಕಾರಿಡಾರ್’ ಒಪ್ಪಂದ, ಅಮೆರಿಕದ ವಿದೇಶಾಂಗ ಸಚಿವಾಲಯದ ಪ್ರಕಟಣೆಗಳು, ರಾಯಿಟರ್ಸ್, ಎಎಫ್‌ಪಿ, ಪಿಟಿಐ

‘ಸ್ವಪ್ನಮಂಟಪ’ ಬರಗೂರು ಮಗ್ನ

ನಿರ್ದೇಶಕ ಬರಗೂರು ರಾಮಚಂದ್ರಪ್ಪ ತಮ್ಮ ‘ಸ್ವಪ್ನಮಂಟಪ’ ಕಾದಂಬರಿಗೆ ಸಿನಿಮಾ ರೂಪ ನೀಡಿದ್ದಾರೆ. ವಿಜಯ ರಾಘವೇಂದ್ರ ಹಾಗೂ ರಂಜಿನಿ ರಾಘವನ್ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ.

ಮೈಸೂರಿನ ಬಾಬುನಾಯ್ಕ್ ‘ಸ್ವಪ್ನಮಂಟಪ’ವನ್ನು ನಿರ್ಮಿಸಿದ್ದಾರೆ. ಬರಗೂರು ಅವರೇ ಚಿತ್ರಕಥೆ, ಸಂಭಾಷಣೆ, ಗೀತ ರಚನೆ ಜತೆಗೆ ನಿರ್ದೇಶನ ಮಾಡಿದ್ದಾರೆ. ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡವು ಡಬ್ಬಿಂಗ್ ಕೆಲಸಗಳನ್ನೂ ಮುಗಿಸಿದೆ. ಕನಕಪುರ ರಸ್ತೆಯಲ್ಲಿರುವ ಹಳ್ಳಿಯೊಂದರಲ್ಲಿ ಹೊಸಮನೆ ಮೂರ್ತಿ ಹಾಕಿದ್ದ ಸೆಟ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ.

‘ಚಿತ್ರವು ಪಾರಂಪರಿಕ ಸ್ಥಳಗಳ ರಕ್ಷಣೆಯನ್ನು ಪ್ರತಿಪಾದಿಸುವ ಕಥಾವಸ್ತುವನ್ನು ಒಳಗೊಂಡಿದೆ. ಒಂದು ಹಳ್ಳಿಯಲ್ಲಿ ರಾಜನೊಬ್ಬ ನಿರ್ಮಿಸಿದ ಸ್ವಪ್ನಮಂಟಪವನ್ನು ಕೆಡವಿ ಹಾಕುವ ಪ್ರಯತ್ನವನ್ನು ಕೆಲವರು ಮಾಡಿದಾಗ, ಕಥಾನಾಯಕ ಮತ್ತು ನಾಯಕಿ ಜನರನ್ನು ಸಂಘಟಿಸಿ ಅದನ್ನು ಉಳಿಸಿ ಸರ್ಕಾರದ ಅಧಿಕೃತ ಸ್ಮಾರಕದ ಪಟ್ಟಿಗೆ ಸೇರಿಸುವ ಮೂಲಕ ಚಾರಿತ್ರಿಕ ಸ್ಮಾರಕಗಳ ಪರಂಪರೆಯನ್ನು ಎತ್ತಿ


ವಿಜಯ ರಾಘವೇಂದ್ರ, ರಂಜಿನಿ ರಾಘವನ್

ಹಿಡಿಯುತ್ತಾರೆ. ಈ ಸಾಮಾಜಿಕ ಚಿತ್ರದಲ್ಲಿ ಸ್ವಪ್ನಮಂಟಪವನ್ನು ನಿರ್ಮಾಣ ಮಾಡಿದ್ದ ರಾಜ-ರಾಣಿಯರ ಕಥನವೂ ಹಿನ್ನೋಟ ತಂತ್ರದಲ್ಲಿ ಸೇರಿಸಿರುವುದು ವಿಶೇಷ’ ಎಂದಿದ್ದಾರೆ ಬರಗೂರು.

ಸುಂದರರಾಜ, ಶೋಭಾ ರಾಘವೇಂದ್ರ, ರಜನಿ, ಮಹಾಲಕ್ಷ್ಮಿ, ಸುಂದರರಾಜ ಅರಸು, ರಾಜಪ್ಪ ದಳವಾಯಿ, ಅಂಬರೀಶ ಸಾರಂಗಿ, ಮೈಸೂರು ಮಂಜುಳ, ಉಮ್ಮತ್ತೂರು ಬಸವರಾಜು, ವೆಂಕಟರಾಜು, ಶಿವಲಿಂಗಪ್ರಸಾದ್, ಭಾರತಿರಮೇಶ್, ಗುಂಡಿ ರಮೇಶ್ ತಾರಾಗಣದಲ್ಲಿ ಇದ್ದಾರೆ.

ಚಿತ್ರಕ್ಕೆ ನಾಗರಾಜ ಆದವಾನಿ ಛಾಯಾಚಿತ್ರಗ್ರಹಣ, ಸುರೇಶ್ ಅರಸು ಸಂಕಲನ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ ಮತ್ತು ತ್ರಿಭುವನ್ ನೃತ್ಯ ಸಂಯೋಜನೆ ಇದೆ. ನಟ್ರಾಜ್ ಶಿವು ಮತ್ತು ಪ್ರವೀಣ್ ಚಿತ್ರದ ಸಹನಿರ್ದೇಶಕರಾಗಿದ್ದಾರೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

ಹೊರಬಂತು ‘ಬ್ಯಾಕ್ ಬೆಂಚರ್ಸ್’ ಟೀಸರ್



ಕಾಲೇಜು ದಿನಗಳ ಕುರಿತಾದ ಕಥೆ ಹೊಂದಿರುವ ‘ಬ್ಯಾಕ್ ಬೆಂಚರ್ಸ್’ ಚಿತ್ರದ ಟೀಸರ್ ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ. ನಿರ್ಮಾಪಕ, ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಬಿ.ಆರ್. ರಾಜಶೇಖರ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ಕುತೂಹಲಕಾರಿಯಾದ ಕಂಟೆಂಟನೊಂದಿಗೆ, ಕಾಮಿಡಿಯನ್ನು ನಾಜೂಕಾಗಿ ಬೆರೆಸಿ ಈ ಸಿನಿಮಾ ಸಿದ್ಧಗೊಂಡಿದೆ. ಈಗಾಗಲೇ ಹಾಡುಗಳು ಪ್ರೇಕ್ಷಕರ ಗಮನ ಸೆಳೆದಿವೆ. ಇದೀಗ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ‘ಕಿರಿಕ್ ಪಾರ್ಟಿ’ಯೊಂದಿಗೆ ಆವತ್ತು ಹೊಸ ತಂಡ ಕಟ್ಕೊಂಡ್ ಬಂದಿದ್ದರು. ಆಮೇಲೆ ‘ಹಾಸ್ಟೆಲ್ ಹುಡುಗ್ರು’ ಬಂದ್ರು, ಈಗ ನಾವು ಹೊಸ ತಂಡ ಕಟ್ಕೊಂಡು ಬರ್ತಾ ಇದೀವಿ’ ಎಂದರು ನಿರ್ದೇಶಕರು.


ಪಿಪಿ ಪ್ರೊಡಕ್ಷನ್ಸ್ ಅಡಿಯಲ್ಲಿ ರಾಜಶೇಖರ್ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ರಂಜನ್, ಜತಿನ್ ಆರ್ಯನ್, ಆಕಾಶ್ ಎಂ.ಪಿ, ಶಶಾಂಕ್ ಸಿಂಹ, ಸುಚೇಂದ್ರ ಪ್ರಸಾದ್, ಅರವಿಂದ್ ಕುಪ್ಳೀಕರ್ ಮುಂತಾದವರ ತಾರಾಗಣದಲ್ಲಿದ್ದಾರೆ. ನಕುಲ್ ಅಭಯಂಕರ್ ಸಂಗೀತ ನಿರ್ದೇಶನ, ಮನೋಹರ್ ಜೋಶಿ ಛಾಯಾಚಿತ್ರಗ್ರಹಣ, ರಂಜನ್ ಮತ್ತು ಅಮರ್ ಗೌಡ ಸಂಕಲನ ಈ ಚಿತ್ರಕ್ಕಿದೆ.

ಗುಂಡಣ್ಣ



ಪ್ರತಿಕ್ರಿಯೆ ನೀಡದಿರುವ ಕಲೆ

ನುಡಿ ಬೆಳಗು


ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ವ್ಯಕ್ತಿಯೊಬ್ಬ ಬಹುಬೇಗ ಕೋಪಗೊಳ್ಳುತ್ತಿದ್ದ. ಪಕ್ಕದೂರಿನಲ್ಲಿದ್ದ, ಬಹಳ ತಾಳ್ಮೆಯುಳ್ಳವನೆಂದು ಹೆಸರಾಗಿದ್ದ ತನ್ನ ಸ್ನೇಹಿತನ ಬಳಿ ಈ ಸಮಸ್ಯೆಯನ್ನು ಹೇಳಿಕೊಳ್ಳಲು ಯೋಚಿಸಿದ. ಆದರೆ ಅದೇ ದಿನ ಆ ಸ್ನೇಹಿತನೇ ಇವನ ಮನೆಗೆ ಭೇಟಿ ನೀಡಿದ. ಊಟ ಮಾಡುವಾಗ ಒಂದು ಘಟನೆ ನಡೆಯಿತು. ಇವನಿಗೆ ಕೊಟ್ಟ ಪಾಯಸದ ಬಟ್ಟಲಿನಲ್ಲಿ ಅಕಾಸ್ಮಾತ್ತಾಗಿ ಒಂದು ನೊಣ ಬಿದ್ದುಬಿಟ್ಟಿತ್ತು. ಇವನಿಗೆ ಕೋಪ ಬಂದು ಕೆಲಸದವರ ಮೇಲೆ ರೇಗಾಡಿಬಿಟ್ಟ. ಅದಕ್ಕೆ ಸ್ನೇಹಿತ ಕೇಳಿದ, ‘ಬಿಡು ಮಾರಾಯ ಅದೊಂದು ನೊಣ ಅಷ್ಟೇ, ಚೆಲ್ಲಿದರೆ ಆಯಿತು’ ಎಂದು ಇನ್ನೊಂದು ಬಟ್ಟಲಿನಲ್ಲಿ ಪಾಯಸ ತರಲು ಸಹಾಯಕನಿಗೆ ಹೇಳಿದ. ಆದರೆ ಇವನು ಮುಖ ಕೆಂಪು ಮಾಡಿಕೊಂಡೇ ಇದ್ದ.

ಊಟವಾದ ಮೇಲೆ ಇವನು ಸ್ನೇಹಿತನಿಗೆ ಹೇಳಿದ ‘ಅಯ್ಯೋ ನನಗೆ ಸಿಟ್ಟು ತಡೆದುಕೊಳ್ಳಲೇ ಆಗುವುದಿಲ್ಲ ಮಾರಾಯ, ಆ ಸಣ್ಣ ನೊಣವೂ ಇಡೀ ದಿನ ನನ್ನ ಮೂಡ್ ಕೆಡಿಸಬಲ್ಲದು’. ಆ ಸ್ನೇಹಿತ ನಸುನಕ್ಕು ಹೇಳಿದ, ‘ನೋಡು ಇವತ್ತು ಸಮಸ್ಯೆಯನ್ನುಂಟು ಮಾಡಿದ್ದು ಪಾಯಸದಲ್ಲಿ ಬಿದ್ದ ನೊಣವಲ್ಲ, ಅದನ್ನು ನೋಡದೇ ಇದ್ದ ಕೆಲಸದವರೂ ಅಲ್ಲ. ಆ ಘಟನೆಗೆ ನೀನು ಪ್ರತಿಕ್ರಿಯಿಸಿದ ರೀತಿ. ನಿನಗೆ ನಿನ್ನ ಭಾವನೆಗಳ ಮೇಲೆ ನಿಯಂತ್ರಣವಿರಬೇಕೇ ಹೊರತು ಭಾವನೆಗಳೇ ನಿನ್ನನ್ನು ನಿಯಂತ್ರಿಸಬಾರದು. ಯಾವ ವಿಷಯಕ್ಕೂ ತಕ್ಷಣ ಪ್ರತಿಕ್ರಿಯಿಸುವ ಬದಲು ಕೆಲಕ್ಷಣ ಯೋಚನೆ ಮಾಡಬೇಕು, ಆದರೆ ಇದು ಒಂದೆರಡು ದಿನಗಳಲ್ಲಿ ಆಗುವಂತಹ ವಿಷಯವಲ್ಲ. ನಿಧಾನವಾಗಿ ಪ್ರಯತ್ನಿಸು’ ಎಂದ ಸ್ನೇಹಿತ.

ಈತ ಅಂದಿನಿಂದಲೇ ಪ್ರತಿಕ್ರಿಯಿಸುವ ಮುನ್ನ ಯೋಚಿಸಲು ಶುರು ಮಾಡಿದ. ಮೊದಮೊದಲು ಕಷ್ಟವಾದರೂ ಸವಾಲಿನ ಸಂದರ್ಭಗಳಲ್ಲಿ ತಕ್ಷಣ ಪ್ರತಿಕ್ರಿಯಿಸುವುದನ್ನು ಕ್ರಮೇಣ ಕಡಿಮೆ ಮಾಡಿದ. ವಾಗ್ವಾದಗಳಿಗೆ ಅವಕಾಶ ಕೊಡದೇ ಮೌನವಾಗುತ್ತಿದ್ದ. ಕೊನೆಯ ಮಾತು ತನ್ನದೇ ಆಗಬೇಕೆಂಬ ಅಹಂನಿಂದ ಹೊರಬಂದ.

ಇದರರ್ಥ ನಮ್ಮ ಭಾವನೆಗಳನ್ನು ತೋರಗೊಡದೇ ಇರುವುದಲ್ಲ. ಮನುಷ್ಯರಿಗೆ ಭಾವನೆಗಳು ಸಹಜ. ಘಟನೆಗಳಿಗೆ ಸ್ಪಂದಿಸುವುದು ಮುಖ್ಯ. ಸೂಕ್ತವಾದ ಸ್ಪಂದನೆಗೂ ತಕ್ಷಣದ ಪ್ರತಿಕ್ರಿಯೆಗೂ ವ್ಯತ್ಯಾಸವಿದೆ. ಸ್ಪಂದನೆಯಲ್ಲಿ ಯೋಚನೆ ಮಾಡಿ ಉತ್ತರ ನೀಡುತ್ತೇವೆ, ತಕ್ಷಣದ ಪ್ರತಿಕ್ರಿಯೆಯಲ್ಲಿ ಹಿಂದೆಮುಂದೆ ನೋಡದೇ ದುಡುಕುತ್ತೇವೆ. ಕೆಲವೊಮ್ಮೆ ಕೋಪದ ಕೈಯಲ್ಲೂ ಬುದ್ಧಿಯನ್ನು ಕೊಟ್ಟು ಬಿಡುತ್ತೇವೆ. ಇದರಿಂದ ನಮ್ಮ ಸಂಬಂಧಗಳು, ಮನಃಶಾಂತಿ ಎಲ್ಲವನ್ನೂ ಕಳೆದುಕೊಂಡುಬಿಡುತ್ತೇವೆ. ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವಲ್ಲಿ ಆತುರದಿಂದ ಎಡವುತ್ತೇವೆ. ನಿಜ, ಪ್ರತಿಕ್ರಿಯೆ ನೀಡುವುದು ಸುಲಭ, ಪ್ರತಿಕ್ರಿಯೆ ನೀಡದೇ ಇರುವುದು ಕಷ್ಟದ ಕೆಲಸ. ಏಕೆಂದರೆ ಭಾವನೆಗಳನ್ನು ನಿಯಂತ್ರಿಸುವುದೂ ಒಂದು ಕಲೆ. ಅದನ್ನು ತಾಳ್ಮೆಯಿಂದ ರೂಢಿಸಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 16, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಅಷ್ಟಮಿ ಗಂ. 6-23 ನಕ್ಷತ್ರ: ಮಘ ಗಂ. 18-14 ಯೋಗ: ಧ್ರುವ ಗಂ. 08-23 ಕರಣ : ಬವ ಗಂ. 6-23, ವೃಷಭ ಮಾಸದ ನೇ 03 ದಿನ, ಮಳೆನಕ್ಷತ್ರ: ಕೃತ್ತಿಕಾ 2.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-08 **ಸೂರ್ಯಾಸ್ತ :** 06-46
ಮುಸ್ಲಿಂ ದಿನಾಂಕ : 07 ಜುಲ್ಕಾಯದ್
ಅದೃಷ್ಟ ಸಂಖ್ಯೆ : 10, 2

ಮೇಷ: ಒತ್ತಡ ತರುವಂಥ ಕೆಲಸಗಳಿಂದ ದೂರವಿರುವ ಪ್ರಯತ್ನ ಮಾಡಿ. ಸ್ಪರ್ಧೆಯಲ್ಲಿ ಜಯ ಗಳಿಸುವಿರಿ. ಪ್ರಾಮಾಣಿಕವಾಗಿ ಸಂಪಾದನೆ ಮಾಡುತ್ತಿರುವ ನಿಮಗೆ ಶತ್ರುಗಳ ಭಯ ಬೇಡವೇ ಬೇಡ. ರಾತ್ರಿ ವೇಳೆಯ ಪ್ರಯಾಣ ತಡೆಗಟ್ಟಿರಿ.

ವೃಷಭ: ಕಾರ್ಯದ ನಿಮಿತ್ತ ಕುಟುಂಬದ ಸದಸ್ಯರನ್ನು ಎದುರು ಹಾಕಿಕೊಳ್ಳಬೇಕಾದ ಪರಿಸ್ಥಿತಿಗಳು ಬರಬಹುದು. ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿ. ಕಲಹಗಳಲ್ಲಿ ಮೌನವಾಗಿರಿ.

ಮಿಥುನ: ಮನೆಯ ಕಾರ್ಮಿಕರು ಶ್ರಮಿಸುವುದರಿಂದ ಅವರನ್ನು ಗೌರವದಿಂದ ಕಾಣುವುದು ಸೂಕ್ತಕರವಾದುದು. ನೀವಾಡುವ ಮಾತು ಬಹಳ ಮುಖ್ಯವಾಗಿರುವುದರಿಂದ ಕಡಿಮೆ ಮಾತನಾಡಿ.

ಕರ್ಕಾಟಕ: ಪೊಲೀಸ್ ವಿಭಾಗದಲ್ಲಿದ್ದು, ಮಾಹಿತಿ ಕಲೆ ಹಾಕುವಲ್ಲಿ ವಹಿಸುವ ಮುಂಜಾಗ್ರತಾ ಕ್ರಮ ಸಾಕಾಗದು. ಕೆಲಸದ ಗುಣಮಟ್ಟ ಕಡಿಮೆ ಆಗುತ್ತಿರುವುದಕ್ಕೆ ಕಾರಣ ನಿರಾಸಕ್ತಿಯೇ ಆಗಿರುತ್ತದೆ.

ಸಿಂಹ: ಜೀವನದಲ್ಲಿ ನಡೆದ ಹಲವಾರು ಹಾಸ್ಯ ಪ್ರಸಂಗಗಳನ್ನು ಸ್ನೇಹಿತರೊಂದಿಗೆ ನೆನೆಯುವಿರಿ. ನೂತನ ವಾಹನ ಖರೀದಿಸುವ ಯೋಚನೆಯನ್ನು ಮುಂದೂಡಿ. ಲೇವಾದೇವಿ ನಡೆಸುವವರು ಲಾಭ ಹೊಂದುವಿರಿ.

ಕನ್ಯಾ: ಚಲನಚಿತ್ರಗಳಲ್ಲಿ ಬರುವ ಸನ್ನಿವೇಶಗಳನ್ನು ನಿಜ ಜೀವನದಲ್ಲಿ ಕಲ್ಪಿಸಿಕೊಳ್ಳಬೇಡಿ. ಯಂತ್ರಗಳ ಕೆಲಸವನ್ನು ಮಾಡುವಾಗ ಅತ್ಯಂತ ಜಾಗರೂಕತೆ ವಹಿಸಿ ನಿರ್ವಹಣೆ ಮಾಡುವುದು ಸೂಕ್ತ.

ತುಲಾ: ವಾದ-ವಿವಾದಗಳನ್ನು ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿದಲ್ಲಿ ನಿಧಾನವಾದರೂ ಜಯ ನಿಮ್ಮದಾಗುವುದು. ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳಲು ಯತ್ನಿಸುವಿರಿ.

ವೃಶ್ಚಿಕ: ವ್ಯಾವಹಾರಿಕ ವಿಷಯದಲ್ಲಿ ನಿಮ್ಮ ಪ್ರಯತ್ನಗಳು ವ್ಯರ್ಥವಲ್ಲ ಎಂಬುದು ತಿಳಿಯುವುದು. ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ.

ಧನು: ಜನರನ್ನು ಬಳಸುವ ಸಲುವಾಗಿ ಕುಟುಂಬದ ವ್ಯಕ್ತಿಗಳನ್ನು ಬಿಟ್ಟು ಹೋಗುವುದು ಮನಸ್ತಾಪಗಳಿಗೆ ಕಾರಣವಾಗಬಹುದು. ಶೈಕ್ಷಣಿಕ ಸಂಸ್ಥೆಗಳಲ್ಲಿನ ಬೌದ್ಧಿಕ ಅನಾವರಣಕ್ಕೆ ಹಾದಿ ಸಿಗಲಿದೆ.

ಮಕರ: ಯಕ್ಷಪ್ರಶ್ನೆಯೇ ಆಗಿ ಉಳಿದಿದ್ದ ಹಲವಾರು ಕುಟುಂಬದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ. ಧಾರ್ಮಿಕ ಕ್ಷೇತ್ರಗಳ ಭೇಟಿ, ದೇವರ ದರ್ಶನದಂಥ ಕಾರ್ಯಗಳು ನಡೆಯುತ್ತವೆ. ವಿದ್ಯಾಭ್ಯಾಸದ ಸಮಯದಲ್ಲಿ ಏಕಾಗ್ರತೆ ಮುಖ್ಯ.

ಕುಂಭ: ಸಾಮಾನ್ಯ ಪ್ರಜೆ ನೀವಾಗಿದ್ದಲ್ಲಿ ರಾಜಕೀಯ ತಿಕ್ಕಾಟಗಳಲ್ಲಿ ಭಾಗವಹಿಸಿ ಅಪರಾಧಿ ಸ್ಥಾನಕ್ಕೆ ತಲುಪದೆ ಇರುವುದು ಸೂಕ್ತಕರ. ತೋಟದ ಬೆಳೆಗಾರರಿಗೆ ವಾಣಿಜ್ಯ ಬೆಳೆಗಳಿಂದ ಅಧಿಕ ಲಾಭ ಸಿಗವುದು. ವಸ್ತ್ರ ವ್ಯಾಪಾರದಲ್ಲಿ ಹಿನ್ನಡೆ.


ಮೀನ: ಭಾವನೆಗಳಿಗೆ ಬೆಲೆ ಕೊಡದವರ ಎದುರು ನಿಮ್ಮ ದುಃಖಗಳನ್ನು ಹೇಳಿಕೊಳ್ಳುವುದರಿಂದ ಪ್ರಯೋಜನವಿರುವುದಿಲ್ಲ. ಪೂರ್ಣ ಮನಸ್ಸಿನಿಂದ ಮಾಡಿದಂಥ ಕಾರ್ಯಗಳು ಉತ್ತಮ ಫಲ ನೀಡುತ್ತವೆ.

ಪದಬಂಧ 5682

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸೊಗಸಾದುದು ಮರದೊಳಗಿದೆ (4)
3.ದಾಕ್ಷಿಣ್ಯ ಈ ರೀತಿ ಬಂದಿದೆ (3)
5.ನಂಜಿನಿಂದ ಕೂಡಿರುವ ಸಂಗತಿ (3)
6.ಕತ್ತಿಯ ಅಲುಗಿದು (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲು ಭೂಮಿ (7)
10.ಈತ ಗ್ರಾಮ ರಕ್ಷಕ (4)
11.ಶರ ಹಿಡಿದಿರುವ ಬೇಡ (3)
14.ಇಂಪಾದ ಧ್ವನಿ (3)
15.ತಂಬಾಕನ್ನು ಹೀಗೂ ಹೇಳುತ್ತಾರೆ (4)

ಮೇಲಿಂದ ಕೆಳಕ್ಕೆ
1.ಮೂಳೆಯಲ್ಲಿರುವ ಮೆದುವಾದ ಕೊಬ್ಬಿನ ಪದಾರ್ಥ (2)
2.ಹರ್ಷವಿಲ್ಲಿ ವಿರಳವಾಗಿ ಬಂದಿದೆ (3)
4.ಈಕೆ ಬಲು ನಿಪುಣೆ (3)
5.ಸಂವಿಧಾನದಲ್ಲಿರುವ ರೀತಿ ಗೊತ್ತಾಯಿತೇ? (3)
6.ಗಣಿಯಲ್ಲಿ ಹುಟ್ಟಿದುದು (3)
8.ಮೂಗಿನ ಆಭರಣ (3)
9.ಮಿರ ಮಿರ ಮಿನುಗುತ್ತಿರುವ ಸೂರ್ಯ (3)
10.ಅನುವಾದಕ್ಕೊಂದು ಪರ್ಯಾಯ ಪದ (3)
12.ಬಡಿಯಲು ಹಿಡಿದಿರುವ ಕೋಲು (3)
13.ಮುದಿತನ ಹೀಗೆ ಬಂದಿದೆ (2)



5681ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿಣತ 3.ವಿದ್ಯಾಲಯ 5.ಕವಿ 7.ಕೆರಸಿ 8.ನಳ 10.ಜಾತ್ರೆ 11.ಸಂಭ್ರಮ 13.ಕಪಿ 15.ತತ್ವಜ್ಞಾನ 16.ನಪುಂಸಕ

ಮೇಲಿಂದ ಕೆಳಕ್ಕೆ:
1.ಪದಕ 2.ತಡಿಕೆ 3.ವಿಲಾಸಿ 4.ಯಮಳ 6.ವಿಜಯಯಾತ್ರೆ 8.ನಯವಂಚಕ 10.ಜಾಗೃತ 11.ಸಂಧಾನ 12.ಮರ್ದನ 14.ಪಿನಾಕ

ಸುಡೊಕು 6067

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6066 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು 117



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,217
ಇಂದಿನ ಅಂತ್ಯ	22,200
▼	17
ದಿನದ ಕನಿಷ್ಠ	22,210

ವಿನಿಮಯ ದರ

$ ಡಾಲರ್	83.47
£ ಪೌಂಡ್	105.43
€ ಯುರೊ	90.44
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹620
12 ಕ್ಕೆ	₹82
ಮೈಸೂರು	
100ಕ್ಕೆ	₹622

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನಿನ್ನೆಯ ದರ)

ಶೇಂಗಾ (ರಿಫೈನ್ಡ್)	₹1540 (1550)
ಸೋಯಾ (ರಿಫೈನ್ಡ್)	₹920 (880)
ಸೂರ್ಯಕಾಂತಿ (ರಿಫೈನ್ಡ್)	₹915 (920)
ಪಾಮೋಲಿನ್	₹887 (885)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8000-8000
ತಿಪಟೂರು	₹7000-8500
ತುಮಕೂರು	₹3800-4400
ತುರುವೇಕೆರೆ	₹8400-8400

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹160

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹288-475
ದ್ವಿತಳಿ (ಬಿ.ವಿ)	₹366-638

ರಫ್ತು, ಆಮದು ಏರಿಕೆ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ದೇಶದ ರಫ್ತು ವಹಿವಾಟು ಶೇ 1ರಷ್ಟು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹2.92 ಲಕ್ಷ ಕೋಟಿಗೆ ತಲುಪಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಬುಧವಾರ ತಿಳಿಸಿದೆ.

ಜಾಗತಿಕ ಬಿಕ್ಕಟ್ಟಿನ ನಡುವೆಯೂ ಎಲೆಕ್ಟ್ರಾನಿಕ್ಸ್, ರಾಸಾಯನಿಕ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಔಷಧ ವಸ್ತುಗಳ ರಫ್ತಿನಲ್ಲಿ ಏರಿಕೆಯಾಗಿದೆ ಎಂದು ಹೇಳಿದೆ.

ಆಮದು ವಹಿವಾಟು ಶೇ10.25ರಷ್ಟು ಏರಿಕೆಯಾಗಿದ್ದು, ₹4.53 ಲಕ್ಷ ಕೋಟಿಗೆ ಏರಿಕೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹4.09 ಲಕ್ಷ ಕೋಟಿ ಆಗಿತ್ತು. ಚಿನ್ನದ ಆಮದಿನಲ್ಲಿ ಹೆಚ್ಚಳವಾಗಿರುವುದೇ ಈ ಏರಿಕೆಗೆ ಕಾರಣವಾಗಿದೆ.

ಏಪ್ರಿಲ್‌ನಲ್ಲಿ ರಫ್ತು ವಹಿವಾಟಿನ ಮೌಲ್ಯಕ್ಕಿಂತಲೂ ಆಮದು ವಹಿವಾಟು ಮೌಲ್ಯ ಏರಿಕೆ ಆಗಿದೆ. ಇದರಿಂದ ದೇಶದ ವ್ಯಾಪಾರ ಕೊರತೆಯ ಅಂತರವು ₹1.59 ಲಕ್ಷ ಕೋಟಿಗೆ ಏರಿಕೆಯಾಗಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

2023ರ ಏಪ್ರಿಲ್‌ನಲ್ಲಿ ವ್ಯಾಪಾರ ಕೊರತೆಯು ₹1.20 ಲಕ್ಷ ಕೋಟಿ ಇತ್ತು. ಅದೇ ವರ್ಷದ ಡಿಸೆಂಬರ್‌ನಲ್ಲಿ ₹1.62 ಲಕ್ಷ ಕೋಟಿಗೆ ತಲುಪಿತ್ತು.

ಚಿನ್ನದ ಆಮದು ದ್ವಿಗುಣಗೊಂಡಿದ್ದು, ₹25,965 ಕೋಟಿ ಆಗಿದೆ. ಕಚ್ಚಾ ತೈಲ ಆಮದು ಶೇ 20.22ರಷ್ಟು ಏರಿಕೆಯಾಗಿದ್ದು, ₹1.37 ಲಕ್ಷ ಕೋಟಿಗೆ ಏರಿಕೆಯಾಗಿದೆ.

‘ಪ್ರಸಕ್ತ ಹಣಕಾಸು ವರ್ಷದ ಮೊದಲ ತಿಂಗಳಿನಲ್ಲಿ ರಫ್ತು ವಹಿವಾಟಿನ ಬೆಳವಣಿಗೆಯು ಉತ್ತಮವಾಗಿದೆ. ಮುಂಬರುವ ತಿಂಗಳುಗಳಲ್ಲಿ ಇದೇ ಸ್ಥಿತಿ ಮುಂದುವರಿಯುವ ನಿರೀಕ್ಷೆಯಿದೆ’ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ತಿಳಿಸಿದ್ದಾರೆ.

ಸರಕು ರಫ್ತಿನ 30 ವಲಯಗಳ ಪೈಕಿ ಕಾಫಿ, ತಂಬಾಕು, ಸಂಬಾರ ಪದಾರ್ಥ, ಪ್ಲಾಸ್ಟಿಕ್ ಹಾಗೂ ಕರಕುಶಲ ವಲಯಗಳ ಬೆಳವಣಿಗೆಯು ಸಕಾರಾತ್ಮಕವಾಗಿದೆ ಎಂದು ತಿಳಿಸಿದ್ದಾರೆ.

ಸಚಿವಾಲಯದ ಅಂಕಿ–ಅಂಶದ ಪ್ರಕಾರ ಏಪ್ರಿಲ್‌ನಲ್ಲಿ ಸೇವಾ ವಲಯದ ರಫ್ತು ವಹಿವಾಟಿನ ಮೌಲ್ಯವು ₹2.46 ಲಕ್ಷ ಕೋಟಿ ಆಗಿದೆ. ಸೇವಾ ರಫ್ತು ಆಮದು ಏರಿಕೆಯಾಗಿದ್ದು, ₹1.41 ಲಕ್ಷ ಕೋಟಿಗೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ 15-5-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1530)
ಸೋಯಾ ಕಚ್ಚಾ	875 (870)
ಪಾಮ್ ವಾರದ ಡೆಲಿವರಿ	885 (880)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹72,750 (72,820)

ಬೆಳ್ಳಿ ಕೆ.ಜಿ ₹84,800 (84,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತಗ್ಗಿದ ನಿರುದ್ಯೋಗ ಪ್ರಮಾಣ

ನವದೆಹಲಿ (ಪಿಟಿಐ): ಜನವರಿ– ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ನಗರ ಪ್ರದೇಶದಲ್ಲಿ 15 ವರ್ಷ, ಅದಕ್ಕಿಂತ ಹೆಚ್ಚು ವಯೋಮಾನದವರ ನಿರುದ್ಯೋಗದ ಪ್ರಮಾಣವು ಶೇ 6.7ಕ್ಕೆ ಇಳಿಕೆ ಆಗಿದೆ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿಯ (ಎನ್‌ಎಸ್‌ಎಸ್‌ಒ) ವರದಿ ತಿಳಿಸಿದೆ. ದುಡಿಯುವ ವರ್ಗದಲ್ಲಿ ಇರುವ ನಿರುದ್ಯೋಗಿಗಳ ಶೇಕಡಾವಾರು ಲೆಕ್ಕಾಚಾರದ ಮೇಲೆ ಈ ಸಮೀಕ್ಷೆ ನಡೆಸಲಾಗುತ್ತದೆ.

2022–23ರ ಮಾರ್ಚ್ ತ್ರೈಮಾಸಿಕದಲ್ಲಿ ನಿರುದ್ಯೋಗದ ಪ್ರಮಾಣವು ಶೇ 6.8ರಷ್ಟಿತ್ತು. ಏಪ್ರಿಲ್–ಜೂನ್ ಹಾಗೂ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 6.6ರಷ್ಟು ಇತ್ತು. ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 6.5ಕ್ಕೆ ಇಳಿಕೆಯಾಗಿತ್ತು ಎಂದು 22ನೇ ಆವರ್ತಕ ಕಾರ್ಮಿಕ ಸಮೀಕ್ಷಾ ವರದಿ ತಿಳಿಸಿದೆ.

ನಗರ ಪ್ರದೇಶದಲ್ಲಿ ಮಹಿಳೆಯರ ನಿರುದ್ಯೋಗ ಪ್ರಮಾಣವು ಶೇ 8.5ಕ್ಕೆ ಇಳಿಕೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 9.2ರಷ್ಟು ಇತ್ತು.

ವಿದೇಶಿ ಸಾಂಸ್ಥಿಕ ಬಂಡವಾಳದ ಹೊರಹರಿವು ಹೆಚ್ಚಳ

3 ದಿನದ ಗೂಳಿ ಓಟಕ್ಕೆ ತಡೆ

ಮುಂಬೈ (ಪಿಟಿಐ): ಸತತ ಮೂರು ವಹಿವಾಟು ದಿನಗಳಲ್ಲಿ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು ಬುಧವಾರ ಇಳಿಕೆ ಕಂಡಿವೆ.

ವಿದೇಶಿ ಸಾಂಸ್ಥಿಕ ಬಂಡವಾಳದ ಹೊರ ಹರಿವು ಹೆಚ್ಚಳ ಹಾಗೂ ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಟಿಸಿಎಸ್ ಕಂಪನಿಯ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೂಚ್ಯಂಕಗಳು ಕುಸಿತ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 117 ಅಂಶ ಇಳಿಕೆ ಕಂಡು, 72,987 ಅಂಶಗಳಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನ ಒಂದು ಸಂದರ್ಭದಲ್ಲಿ 281 ಅಂಶ ಇಳಿಕೆಯಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 17 ಅಂಶ ಇಳಿಕೆ ಕಂಡು, 22,200 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಮೋಟರ್ಸ್, ಏಷ್ಯನ್ ಪೇಂಟ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಜೆಎಸ್‌ಡಬ್ಲ್ಯು ಸ್ಟೀಲ್, ಹಿಂದುಸ್ತಾನ್ ಯೂನಿಲಿವರ್, ನೆಸ್ಲೆ ಇಂಡಿಯಾ ಮತ್ತು ಟೈಟನ್ ಕಂಪನಿಯ ಷೇರಿನ ಮೌಲ್ಯವು ಕುಸಿದಿದೆ.

ಭಾರ್ತಿ ಏರ್‌ಟೆಲ್, ಪವರ್ ಗ್ರಿಡ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಲ್ ಆ್ಯಂಡ್ ಟಿ, ಎಚ್‌ಸಿಎಲ್ ಟೆಕ್ನಾಲಜೀಸ್ ಷೇರಿನ ಮೌಲ್ಯ ಏರಿಕೆಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.21ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 82.55 ಡಾಲರ್ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಂಗಳವಾರದ ವಹಿವಾಟಿನಲ್ಲಿ ಒಟ್ಟು ₹4,065 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಷೇರುಪೇಟೆಯ ಅಂಕಿಅಂಶಗಳು ತಿಳಿಸಿವೆ.

‘ಲೋಕಸಭಾ ಚುನಾವಣಾ ಫಲಿತಾಂಶದ ಅನಿಶ್ಚಿತತೆಯು ಹೂಡಿಕೆ ಮೇಲೆ ಪರಿಣಾಮ ಬೀರಿದೆ. ಮತ್ತೊಂದೆಡೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ ಮುಂದುವರಿದಿದೆ. ದೇಶೀಯ ಹೂಡಿಕೆದಾರರು ಆಯ್ದ ಷೇರುಗಳ ಖರೀದಿಯತ್ತ ಚಿತ್ತ ನೆಟ್ಟಿದ್ದಾರೆ. ಇದರಿಂದ ದೇಶದ ಷೇರು ಪೇಟೆಗಳು ಇಳಿಕೆ ಕಂಡಿವೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ (ಸಂಶೋಧನಾ ವಿಭಾಗ) ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಗಳಿಕೆ ಕಂಡ ಕಂಪನಿಗಳು ↑	%	ಇಳಿಕೆ ಕಂಡ ಕಂಪನಿಗಳು ↓	%
ಭಾರ್ತಿ ಏರ್‌ಟೆಲ್	2.05	ಏಷ್ಯನ್ ಪೇಂಟ್ಸ್	1.84
ಪವರ್ ಗ್ರಿಡ್	1.62	ಟಾಟಾ ಮೋಟರ್ಸ್	1.81
ಎನ್‌ಟಿಪಿಸಿ	1.55	ಎಚ್‌ಡಿಎಫ್‌ಸಿ ಬ್ಯಾಂಕ್	1.57
ಎಲ್ಆ್ಯಂಡ್‌ಎಂ	1.32	ಜೆಎಸ್‌ಡಬ್ಲ್ಯು ಸ್ಟೀಲ್	1.21
ಎಚ್‌ಸಿಎಲ್ ಟೆಕ್	0.97	ಸನ್ ಫಾರ್ಮಾ	1.10

ಎಲ್‌ಐಸಿ ಎಂ–ಕ್ಯಾಪ್‌ಗೆ ₹37 ಸಾವಿರ ಕೋಟಿ ಸೇರ್ಪಡೆ

ನವದೆಹಲಿ (ಪಿಟಿಐ): ಎಲ್‌ಐಸಿ ಷೇರಿನ ಮೌಲ್ಯವು ಶೇ 6ರಷ್ಟು ಏರಿಕೆಯಾಗಿದ್ದು, ಒಂದೇ ದಿನ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹37,159 ಕೋಟಿ ಸೇರ್ಪಡೆಯಾಗಿದೆ.

ಸಾರ್ವಜನಿಕರ ಷೇರು ಪಾಲು ಹೆಚ್ಚಳಕ್ಕೆ ಸೆಬಿ, ಹೆಚ್ಚುವರಿ ಕಾಲಾವಕಾಶ ನೀಡಿರುವುದೇ ಈ ಏರಿಕೆಗೆ ಕಾರಣವಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 6.31ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹989.80ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 6.33ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹990ಕ್ಕೆ ಮುಟ್ಟಿದೆ.

ಒಟ್ಟು ಎಂ–ಕ್ಯಾಪ್ ₹6.26 ಲಕ್ಷ ಕೋಟಿ ಆಗಿದೆ.

ಚಿನ್ನ ₹450, ಬೆಳ್ಳಿ ₹900 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಹಳದಿ ಲೋಹ ಹಾಗೂ ಬೆಳ್ಳಿ ಧಾರಣೆಯಲ್ಲಿ ಏರಿಕೆಯಾಗಿದೆ.

ಚಿನ್ನದ ದರ 10 ಗ್ರಾಂಗೆ ₹450 ಹೆಚ್ಚಳವಾಗಿದ್ದು, ₹73,400ಕ್ಕೆ ತಲುಪಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹900 ಏರಿಕೆಯಾಗಿದ್ದು,₹86,900ಕ್ಕೆ ಮುಟ್ಟಿದೆ.

‘ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ವಹಿವಾಟು ಸಕಾರಾತ್ಮಕವಾಗಿ ನಡೆದಿದೆ. ಇದು ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದ್ದು, ದರ ಏರಿಕೆಯಾಗಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸಾರ್ವಜನಿಕರ ಷೇರು ಪಾಲು ಹೆಚ್ಚಳ: ಎಲ್‌ಐಸಿಗೆ ಕಾಲಾವಕಾಶ

ನವದೆಹಲಿ (ಪಿಟಿಐ): ಸಾರ್ವಜನಿಕರ ಷೇರು ಪಾಲನ್ನು ಶೇ 10ರಷ್ಟು ಹೆಚ್ಚಿಸಿಕೊಳ್ಳಲು ಭಾರತೀಯ ಜೀವ ವಿಮಾ ನಿಗಮಕ್ಕೆ (ಎಲ್‌ಐಸಿ), ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಹೆಚ್ಚುವರಿಯಾಗಿ ಮೂರು ವರ್ಷದವರೆಗೆ ಕಾಲಾವಕಾಶ ನೀಡಿದೆ.

ಸದ್ಯ ಎಲ್‌ಐಸಿಯಲ್ಲಿ ಕೇಂದ್ರ ಸರ್ಕಾರವು ಶೇ 96.50ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿದ್ದರೆ, ಸಾರ್ವಜನಿಕರ ಪಾಲು ಶೇ 3.50ರಷ್ಟಿದೆ.

‘ಷೇರುಪೇಟೆಗೆ ಸೇರ್ಪಡೆಯಾದ (ಲಿಸ್ಟಿಂಗ್) ಎರಡು ವರ್ಷದೊಳಗೆ ನಿಗಮವು ಶೇ 10ರಷ್ಟು ಇಕ್ವಿಟಿ ಷೇರುಗಳಲ್ಲಿ ಸಾರ್ವಜನಿಕರ ಪಾಲಿದೆ ಎಂಬ ಬಗ್ಗೆ ಖಚಿತಪಡಿಸಬೇಕಿದೆ. ಆದರೆ, ಈ ಗುರಿಯನ್ನು ತಲುಪಿಲ್ಲ. ಹಾಗಾಗಿ, 2027ರ ಮೇ 16ರ ವರೆಗೆ ಕಾಲಾವಕಾಶ ನೀಡಿದೆ’ ಎಂದು ಎಲ್‌ಐಸಿ ತಿಳಿಸಿದೆ.

ದೇಶದ ಅತಿದೊಡ್ಡ ವಿಮಾ ಕಂಪನಿಯಾದ ಎಲ್‌ಐಸಿಯು, 2022ರ ಮೇ 17ರಂದು ಷೇರುಪೇಟೆಗೆ ಸೇರ್ಪಡೆಯಾಗಿತ್ತು. ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ಮೂಲಕ ಕೇಂದ್ರವು ಎಲ್‌ಐಸಿಯ 22.13 ಕೋಟಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ₹20,557 ಕೋಟಿ ಬಂಡವಾಳ ಸಂಗ್ರಹಿಸಿದೆ. ಪ್ರತಿ ಷೇರಿಗೆ ₹902ರಿಂದ ₹949 ಬೆಲೆ ನಿಗದಿಪಡಿಸಿತ್ತು.

ಟಿವಿಎಸ್ ಎಲೆಕ್ಟ್ರಿಕ್ ಐಕ್ಯೂಬ್ ದ್ವಿಚಕ್ರ ವಾಹನ ಬಿಡುಗಡೆ

ಬೆಂಗಳೂರು (ಪಿಟಿಐ): ಟಿವಿಎಸ್ ಮೋಟರ್ ಕಂಪನಿಯು ತನ್ನ ಬ್ಯಾಟರಿಚಾಲಿತ ದ್ವಿಚಕ್ರ ವಾಹನವಾದ ಟಿವಿಎಸ್ ಐಕ್ಯೂಬ್ ಅನ್ನು ನಗರದಲ್ಲಿ ಬುಧವಾರ ಬಿಡುಗಡೆ ಮಾಡಿದೆ.

ಇದು 2.2 ಕೆಡಬ್ಲ್ಯುಎಚ್ ಬ್ಯಾಟರಿ ಸಾಮರ್ಥ್ಯ ಹೊಂದಿದೆ.

‘ಎರಡು ಗಂಟೆಯೊಳಗೆ ಬ್ಯಾಟರಿಯು ಪೂರ್ಣ ಚಾರ್ಜ್ ಆಗಲಿದೆ. ಒಂದು ಬಾರಿಗೆ ಚಾರ್ಜ್ ಮಾಡಿದರೆ 100 ಕಿ.ಮೀ. ಸಂಚರಿಸಬಹುದಾಗಿದೆ’ ಎಂದು ಕಂಪನಿಯ ಉಪಾಧ್ಯಕ್ಷ ಸೌರಬ್ ಕಪೂರ್ ತಿಳಿಸಿದ್ದಾರೆ.

ಜೂನ್ 30ರ ವರೆಗೆ ಎಲೆಕ್ಟ್ರಿಕ್ ವಾಹನಗಳಿಗೆ ನಿಗದಿಪಡಿಸಿರುವ ಸಬ್ಸಿಡಿ ಮತ್ತು ಕ್ಯಾಷ್‌ಬ್ಯಾಕ್ ಸೌಲಭ್ಯ ದೊರೆಯಲಿದೆ. ಬೆಂಗಳೂರಿನಲ್ಲಿ ಇದರ ಎಕ್ಸ್ ಷೋ ರೂಂ ಬೆಲೆ ₹94,999 ಆಗಿದೆ ಎಂದು ಹೇಳಿದ್ದಾರೆ.

ಐದು ಶ್ರೇಣಿಗಳಲ್ಲಿ ದೊರೆಯಲಿದ್ದು, ಹೊಸೂರು ಘಟಕದಲ್ಲಿ ಇದನ್ನು ತಯಾರಿಸಲಾಗಿದೆ ಎಂದು ತಿಳಿಸಿದ್ದಾರೆ.

ಹೊಳೆನರಸೀಪುರ: ವರ್ತಕರ ಕರಾಮತ್ತು– ಬೆಳೆಗಾರರಿಗೆ ದಕ್ಕದ ಲಾಭ

ಕೊಬ್ಬರಿ ಮಾರಾಟಕ್ಕೆ ನೂಕುನುಗ್ಗಲು

• ಎಚ್.ವಿ. ಸುರೇಶ್‌ಕುಮಾರ್



ಹೊಳೆನರಸೀಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಖರೀದಿಸಲಾಗುತ್ತಿದೆ

ಹೊಳೆನರಸೀಪುರ (ಹಾಸನ ಜಿಲ್ಲೆ): ಕನಿಷ್ಠ ಬೆಂಬಲ ಬೆಲೆಯಡಿ ಉಂಡೆ ಕೊಬ್ಬರಿ ಮಾರಾಟಕ್ಕೆ ತಾಲ್ಲೂಕಿನ ರೈತರು ಹರಸಾಹಸಪಡುವಂತಾಗಿದೆ.

ಬೆಂಬಲ ಬೆಲೆಯಡಿ ಒಂದು ಕ್ವಿಂಟಲ್ ಕೊಬ್ಬರಿಗೆ ₹12 ಸಾವಿರ ನಿಗದಿಪಡಿಸಲಾಗಿದೆ. ರಾಜ್ಯ ಸರ್ಕಾರವು ₹1,500 ಪ್ರೋತ್ಸಾಹಧನ ನೀಡುತ್ತಿದ್ದು, ಒಟ್ಟು ₹13,500 ದೊರೆಯುತ್ತದೆ.

ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್ ಕೊಬ್ಬರಿಗೆ ₹8 ಸಾವಿರದಿಂದ ₹8,500 ಬೆಲೆ ಇದೆ. ಹಾಗಾಗಿ, ತೆಂಗು ಬೆಳೆಗಾರರು ಕೊಬ್ಬರಿ ನೀಡಲು ಖರೀದಿ ಕೇಂದ್ರಕ್ಕೆ ಮುಗಿಬೀಳುತ್ತಿದ್ದಾರೆ. ನೂಕುನುಗ್ಗಲು ಹೆಚ್ಚಾಗುತ್ತಿದ್ದು, ಇದನ್ನು ತಡೆಯಲು ಅಧಿಕಾರಿಗಳು ಪರದಾಡುವಂತಾಗಿದೆ.

‘ರೈತರು ತರುವ ಕೊಬ್ಬರಿಯ ಗುಣಮಟ್ಟ ಪರಿಶೀಲಿಸಿ ಚೀಲದಲ್ಲಿ ತುಂಬಿ ಗೋದಾಮಿಗೆ ಸಾಗಿಸಲು ಇಲ್ಲಿ 40 ಹಮಾಲರು ಇದ್ದಾರೆ. ಗುತ್ತಿಗೆದಾರರು ಇವರಿಗೆ ಪ್ರತಿ ಚೀಲಕ್ಕೆ ₹2 ನೀಡುತ್ತಾರೆ’ ಎಂದು ಹಮಾಲಿಗಳ ಸಂಘದ ಪ್ರತಿನಿಧಿ ರಮೇಶ್ ವಿವರಿಸಿದರು.

‘ಇಲ್ಲಿಗೆ ಬರುವ ಎಲ್ಲ ಕೊಬ್ಬರಿಯೂ ರೈತರಿಗೆ ಸೇರಿಲ್ಲ. ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹8,500 ನೀಡಿ ಕೊಬ್ಬರಿ ಖರೀದಿಸಿರುವ ಕೆಲವು ವ್ಯಾಪಾರಿಗಳು, ಕೊಬ್ಬರಿ ಬೆಳೆಯದ ರೈತರ ಪಹಣಿ ಪಡೆದುಕೊಳ್ಳುತ್ತಾರೆ. ಹೆಚ್ಚಿನ ಕೊಬ್ಬರಿಯನ್ನು ಬೆಂಬಲ ಬೆಲೆಯಲ್ಲಿ ನೀಡಿ ಒಂದು ಕ್ವಿಂಟಲ್‌ಗೆ ₹5 ಸಾವಿರ ಲಾಭ ಮಾಡಿಕೊಳ್ಳುತ್ತಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ರೈತರೊಬ್ಬರು ತಿಳಿಸಿದರು.

‘ಕೊಬ್ಬರಿ ನೀಡಿದ ರೈತರ ಖಾತೆಗೆ ನೇರವಾಗಿ ಹಣ ಜಮೆ ಆಗುತ್ತದೆ. ನಂತರ ವ್ಯಾಪಾರಸ್ಥರು ರೈತರಿಗೆ ಅಲ್ಪಸ್ವಲ್ಪ ಹಣ ನೀಡಿ ಉಳಿದ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ರೈತರು ವ್ಯಾಪಾರಸ್ಥರಿಗೆ ಪಹಣಿ ನೀಡಬಾರದು’ ಎಂದು ಕೋರಿದರು.

‘ಕೇಂದ್ರ ಸರ್ಕಾರವು ರೈತರ ಅನುಕೂಲಕ್ಕಾಗಿ ಬೆಂಬಲ ಬೆಲೆಯಡಿ ಕೊಬ್ಬರಿ ಖರೀದಿಸುತ್ತಿದೆ. ಆದರೆ, ಕೆಲವು ರೈತರು ಪಹಣಿ ನೀಡಿ ವ್ಯಾಪಾರಸ್ಥರು ಲಾಭ ಮಾಡಿಕೊಳ್ಳಲು ಸಹಕರಿಸುತ್ತಿರುವುದು ಸರಿಯಲ್ಲ’ ಎನ್ನುತ್ತಾರೆ ರೈತ ರಾಮಪ್ಪ.

‘ಈ ಬಗ್ಗೆ ಹಿರಿಯ ಅಧಿಕಾರಿಗಳು ಕ್ರಮ ತೆಗೆದುಕೊಂಡು ಈ ದುರುಪಯೋಗ ತಪ್ಪಿಸಬೇಕು’ ಎಂದು ಆಗ್ರಹಿಸಿದರು.

‘ಏಪ್ರಿಲ್ 15ರಿಂದ ರಜಾ ದಿನ ಹೊರತುಪಡಿಸಿ ಎಲ್ಲ ದಿನಗಳಲ್ಲೂ ಖರೀದಿ ಕೇಂದ್ರದಲ್ಲಿ ಕೊಬ್ಬರಿ ಖರೀದಿಸಲಾಗುತ್ತಿದೆ. ಜೂನ್ 6 ಕಡೆಯ ದಿನವಾಗಿದೆ. ಇದುವರೆಗೂ 6 ಸಾವಿರ ಕ್ವಿಂಟಲ್ ಖರೀದಿಸಲಾಗಿದೆ’ ಎಂದು ಖರೀದಿ ಕೇಂದ್ರದ ಅಧಿಕಾರಿ ರಾಜಶೇಖರ್ ವಿವರಿಸಿದರು.

> ಒಬ್ಬ ರೈತನಿಂದ ಗರಿಷ್ಠ 15 ಕ್ವಿಂಟಲ್ ಮಾತ್ರ ಖರೀದಿಸುತ್ತೇವೆ. ಕೊಬ್ಬರಿ ನೀಡುವ ರೈತರ ಪಹಣಿಯಲ್ಲಿ ತೆಂಗುಬೆಳೆ ಕಡ್ಡಾಯವಾಗಿ ನಮೂದಾಗಿರಬೇಕು
>
> **ಕೆ.ಎಂ. ರಾಜಶೇಖರ್** ಕೊಬ್ಬರಿ ಖರೀದಿ ಕೇಂದ್ರದ ಅಧಿಕಾರಿ

> ನಮ್ಮಲ್ಲಿ ಎರಡು ಉಪಕರಣಗಳಿದ್ದು, ಒಂದು ಉಪಕರಣದಿಂದ ಕೊಬ್ಬರಿಯ ಗಾತ್ರ, ಮತ್ತೊಂದರಿಂದ ಕೊಬ್ಬರಿಯಲ್ಲಿ ನೀರಿನ ಅಂಶವನ್ನು ಪರೀಕ್ಷಿಸಲಾಗುತ್ತಿದೆ. ನಿಗದಿತ ಗುಣಮಟ್ಟದ ಕೊಬ್ಬರಿ ಮಾತ್ರ ಖರೀದಿಸಲಾಗುತ್ತಿದೆ
>
> **ಯಶ್ವಂತ್,** ಗುಣಮಟ್ಟ ಪರಿಶೀಲನಾ ಸಿಬ್ಬಂದಿ

‘ಪುರಕಾಯಸ್ಥ ಬಂಧನ ಅಸಿಂಧು’

ಒಂದನೇ ಪುಟದಿಂದ

ಇಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯಗಳು ಪ್ರಕರಣದ ಕುರಿತ ನ್ಯಾಯಾಲಯದ ಅಭಿಪ್ರಾಯ ಎಂದು ಪರಿಗಣಿಸಬಾರದು. ಸರಿಯಾದ ಪ್ರಕ್ರಿಯೆ ಮೂಲಕ ಬಂಧಿಸುವ ಪೊಲೀಸರ ಅಧಿಕಾರಕ್ಕೆ ಯಾವುದೇ ತಡೆ ಇಲ್ಲ. ಕಾನೂನು ಪ್ರಕಾರ ಇರುವ ಅವಕಾಶಗಳನ್ನು ಪೊಲೀಸರು ಬಳಸಿಕೊಳ್ಳಬಹುದು ಎಂದು ಪೀಠವು ಹೇಳಿದೆ.

‘ನ್ಯೂಸ್‌ಕ್ಲಿಕ್’ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನೂ ಪುರಕಾಯಸ್ಥ ಜತೆ ಬಂಧಿಸಲಾಗಿತ್ತು. ಚಕ್ರವರ್ತಿ ಅವರು ಮಾಫಿ ಸಾಕ್ಷಿ ಆಗುವುದಕ್ಕೆ ದೆಹಲಿಯ ನ್ಯಾಯಾಲಯವು ಒಪ್ಪಿಗೆ ನೀಡಿತ್ತು.

ಪುರಕಾಯಸ್ಥ ಅವರ ಬಂಧನವನ್ನು ಮಾಧ್ಯಮ ಸಂಘಟನೆಗಳು ಮತ್ತು ವಿರೋಧ ಪಕ್ಷಗಳು ಖಂಡಿಸಿದ್ದವು. ಇದು ಮಾಧ್ಯಮ ಸ್ವಾತಂತ್ರ್ಯದ ಮೇಲಿನ ದಾಳಿ ಎಂದಿದ್ದವು. ಆದರೆ, ಆ ಆರೋಪವನ್ನು ಕೇಂದ್ರ ಸರ್ಕಾರವು ಅಲ್ಲಗಳೆದಿತ್ತು.

ಅಮೆರಿಕ: ಚೀನಾಕ್ಕೆ ಸುಂಕದ ಬಿಸಿ

ವಾಷಿಂಗ್ಟನ್ (ಪಿಟಿಐ): ಚೀನಾದ ಬ್ಯಾಟರಿ ಚಾಲಿತ ವಾಹನಗಳು, ಬ್ಯಾಟರಿ, ಸ್ಟೀಲ್, ಸೌರ ಫಲಕ ಹಾಗೂ ಅಲ್ಯೂಮಿನಿಯಂ ವಸ್ತುಗಳಿಗೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ನೇತೃತ್ವದ ಸರ್ಕಾರವು ಹೆಚ್ಚಿನ ಆಮದು ಸುಂಕ ವಿಧಿಸಿದೆ.

ಎಲೆಕ್ಟ್ರಿಕ್ ವಾಹನಗಳಿಗೆ ಶೇ 100ರಷ್ಟು, ಸೆಮಿಕಂಡಕ್ಟರ್‌ಗಳಿಗೆ ಶೇ 50ರಷ್ಟು ಹಾಗೂ ಎಲೆಕ್ಟ್ರಿಕ್ ವಾಹನದ ಬ್ಯಾಟರಿಗಳ ಮೇಲೆ ಶೇ 25ರಷ್ಟು ಆಮದು ಸುಂಕ ಹೇರಲಾಗಿದೆ.

‘ನ್ಯಾಯಬದ್ಧವಲ್ಲದ ವ್ಯಾಪಾರದ ರೂಢಿಯಿಂದ ಅಮೆರಿಕದ ಕಾರ್ಮಿಕರನ್ನು ರಕ್ಷಿಸಬೇಕಿದೆ. ಹಾಗಾಗಿ, ಈ ಕ್ರಮ ಕೈಗೊಳ್ಳಲಾಗಿದೆ. ನನ್ನದು ಚೀನಾದೊಟ್ಟಿಗೆ ನ್ಯಾಯೋಚಿತವಾದ ಸ್ಪರ್ಧೆಯಾಗಿದೆ. ಇದು ಸಂಘರ್ಷವಲ್ಲ. ಚೀನಾ ವಿರುದ್ಧದ ವಾಣಿಜ್ಯ ಸ್ಪರ್ಧೆಯಲ್ಲಿ ನಾವು ಇತರೆ ರಾಷ್ಟ್ರಗಳಿಗಿಂತ ಬಲಿಷ್ಠವಾಗಿದ್ದೇವೆ. ಅಮೆರಿಕದಲ್ಲಿಯೇ ನಾವು ಹೂಡಿಕೆ ಮಾಡುತ್ತಿರುವುದರಿಂದ ಇದು ಕಾರ್ಯಸಾಧ್ಯವಾಗಿದೆ’ ಎಂದು ಬೈಡನ್ ಹೇಳಿದ್ದಾರೆ.

40 ನಾವಿಕರ ಬಿಡುಗಡೆಗೆ ಮನವಿ

ನವದೆಹಲಿ (ಪಿಟಿಐ): ‘ನಾಲ್ಕು ವ್ಯಾಪಾರ ಹಡಗುಗಳ ಜಪ್ತಿ ವೇಳೆ ತಾನು ವಶಕ್ಕೆ ಪಡೆದ ಸುಮಾರು 40 ಮಂದಿ ಭಾರತೀಯ ನಾವಿಕರನ್ನು ಬಿಡುಗಡೆ ಮಾಡಬೇಕು’ ಎಂದು ಇರಾನ್ ಅನ್ನು ಭಾರತ ಬುಧವಾರ ಕೋರಿದೆ.

ಪರ್ಷಿಯನ್ ಗಲ್ಫ್ (ಪಶ್ಚಿಮ ಏಷ್ಯಾ ಭಾಗದ ಮೆಡಿಟರೇನಿಯನ್ ಸಮುದ್ರ) ಭಾಗದಲ್ಲಿ ವಿವಿಧ ಆರೋಪಗಳಡಿ ಕಳೆದ ಎಂಟು ತಿಂಗಳ ಹಿಂದೆ ಇರಾನ್ ನಾಲ್ಕು ಹಡಗುಗಳನ್ನು ಜಪ್ತಿ ಮಾಡಿತ್ತು. ನಾವಿಕರನ್ನು ವಶಕ್ಕೆ ಪಡೆದಿತ್ತು.

ಛಾಬಹಾರ್ ಬಂದರು ಪ್ರದೇಶವನ್ನು 10 ವರ್ಷ ನಿರ್ವಹಣೆ ಒಪ್ಪಂದಕ್ಕೆ ಸಹಿಹಾಕಲು ಭಾರತದ ಬಂದರು ಸಚಿವ ಸರ್ಬಾನಂದ ಸೋನೊವಾಲ್ ಇರಾನ್ ಪ್ರವಾಸದಲ್ಲಿದ್ದಾರೆ. ಇರಾನ್ ವಿದೇಶಾಂಗ ಸಚಿವ ಹುಸೇನ್ ಅಮೀರ್–ಅಬ್ದೊಲ್ಲಾಹಿಯಾನ್ ಅವರನ್ನು ಭೇಟಿ ಮಾಡಿ, ಈ ಕೋರಿಕೆ ಸಲ್ಲಿಸಿದರು.

ಇಮ್ರಾನ್ ಖಾನ್‌ಗೆ ಜಾಮೀನು



ಇಸ್ಲಾಮಾಬಾದ್ (ಪಿಟಿಐ): ಸುಮಾರು ₹2 ಸಾವಿರ ಕೋಟಿಯ (190 ಮಿಲಿಯನ್ ಪೌಂಡ್) ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಹೈಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿದೆ. ಭ್ರಷ್ಟಾಚಾರದ ಪ್ರಕರಣಗಳಲ್ಲಿ ಜೈಲುಪಾಲಾಗಿರುವ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಉದ್ಯಮಿಯೊಬ್ಬರಿಂದ ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನು ಪಡೆದಿದ್ದಾರೆ ಎಂಬ ಆರೋಪವಿದೆ.

‘ಅಮೆರಿಕ ನೌಕೆ ಗುರಿಯಾಗಿಸಿ ದಾಳಿ’

ದುಬೈ(ಎಪಿ): ಕೆಂಪು ಸಮುದ್ರದಲ್ಲಿ ಅಮೆರಿಕ ನೌಕಾಪಡೆಯ ಹಡಗು ನಾಶಕ ಹಾಗೂ ಸರಕು ಸಾಗಣೆ ಹಡಗು ಗುರಿಯಾಗಿಸಿ ದಾಳಿ ನಡೆಸಿದ್ದಾಗಿ ಯೆಮೆನ್‌ನ ಹೂಥಿ ಬಂಡುಕೋರರು ಬುಧವಾರ ಹೇಳಿಕೊಂಡಿದ್ದಾರೆ.

‘ಅಮೆರಿಕದ ಹಡಗು ಡೆಸ್ಟ್ರಿನಿ, ಗುರಿ ನಿರ್ದೇಶಿತ ಕ್ಷಿಪಣಿ ನಾಶಕ ‘ಮೇಸನ್’ ಗುರಿಯಾಗಿಸಿ ಬಂಡುಕೋರರು ಕ್ಷಿಪಣಿ ದಾಳಿ ನಡೆಸಿದ್ದಾರೆ’ ಎಂದು ಹೂಥಿ ಪಡೆಯ ವಕ್ತಾರ ಬ್ರಿಗೇಡಿಯರ್ ಜನರಲ್ ಯಾಹ್ಯಾ ಹೇಳಿದ್ದಾರೆ.

ಶಿಕ್ಷಕರ ರಜೆ ಕಡಿತ

ಒಂದನೇ ಪುಟದಿಂದ...

ಇದರಿಂದ ವಿದ್ಯಾರ್ಥಿಗಳ ಮನೋಬಲ ಕುಗ್ಗುವ ಸಾಧ್ಯತೆ ಇದೆ ಎಂದು ಮನಗಂಡ ಶಿಕ್ಷಣ ಇಲಾಖೆ ಕೃಪಾಂಕಗಳ ನಿಯಮಗಳನ್ನು ಬದಲಾಯಿಸಿ, 1.69 ಲಕ್ಷ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಿತ್ತು.

ಕೃಪಾಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಅನುತ್ತೀರ್ಣರಾದ 2.28 ಲಕ್ಷ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಎರಡನೇ ಪರೀಕ್ಷೆಗೆ ಸಿದ್ಧಗೊಳಿಸಲು ರಾಜ್ಯ ಪಠ್ಯಕ್ರಮ ಅನುಸರಿಸುವ ಎಲ್ಲ ಪ್ರೌಢಶಾಲೆಗಳಲ್ಲೂ ಮೇ 15ರಿಂದ ಜೂನ್ 5ರವರೆಗೆ ವಿಶೇಷ ತರಗತಿಗಳನ್ನು ನಡೆಸಲಾಗುತ್ತಿದೆ. ಜೂನ್ 7ರಿಂದ ಪರೀಕ್ಷೆಗಳು ಆರಂಭವಾಗಲಿವೆ.

ಶಿಕ್ಷಕರ ಸಂಘ ಖಂಡನೆ

ಮೇ 29ರವರೆಗೆ ಇದ್ದ ಪ್ರೌಢಶಾಲಾ ಶಿಕ್ಷಕರ ರಜೆಯ ಅವಧಿಯನ್ನು ಕಡಿತ ಮಾಡಿ, ಶಾಲೆಗಳಿಗೆ ಮರಳಲು ಸೂಚಿಸಿರುವ ಅಧಿಕಾರಿಗಳ ನಡೆಯನ್ನು ಪ್ರೌಢಶಾಲಾ ಶಿಕ್ಷಕರು ಖಂಡಿಸಿದ್ದಾರೆ.

‘ಮೊದಲ ಪರೀಕ್ಷೆ, ಮೌಲ್ಯಮಾಪನ, ಚುನಾವಣೆಗಾಗಿ ಶಿಕ್ಷಕರು ನಿರಂತರ ಕೆಲಸ ಮಾಡಿದ್ದಾರೆ. ಚುನಾವಣಾ ಕಾರ್ಯ ಮುಗಿದ ನಂತರ ಅನೇಕರು ಕುಟುಂಬದ ಜತೆ ಪ್ರವಾಸ ಹೋಗಿದ್ದಾರೆ. ಇಂತಹ ಸಮಯದಲ್ಲಿ ಕೆಲಸಕ್ಕೆ ತಕ್ಷಣ ಹಿಂದಿರುಗುವಂತೆ ಕಡ್ಡಾಯಗೊಳಿಸಿರುವುದು ಶಿಕ್ಷಕರಿಗೂ ಬೇಸರ ತರಿಸಿದೆ’ ಎಂದು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಬಿ. ಸಿದ್ದಬಸಪ್ಪ ಹೇಳಿದರು.

ಕಾಳೆ ಸಾವಿಗೆ ವಿಶ್ವಸಂಸ್ಥೆ ಸಂತಾಪ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಭಾರತ ಸೇನೆಯ ನಿವೃತ್ತ ಅಧಿಕಾರಿ ಕರ್ನಲ್ ವೈಭವ್ ಅನಿಲ್ ಕಾಳೆ ಅವರ ಸಾವಿಗೆ ಸಂತಾಪ ವ್ಯಕ್ತಪಡಿಸಿ, ಭಾರತದ ಬಳಿ ಕ್ಷಮೆಯಾಚಿಸಿರುವ ವಿಶ್ವಸಂಸ್ಥೆ ಘಟನೆಯ ಬಗ್ಗೆ ತನಿಖೆ ಆರಂಭಿಸಿದೆ.

‘ಭಾರತದ ಕೊಡುಗೆಯನ್ನು ನಾವು ಗೌರವಿಸುತ್ತೇವೆ. ಭೀಕರ ದಾಳಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಸತ್ಯಶೋಧನಾ ಸಮಿತಿ ರಚಿಸಲಾಗಿದೆ. ಘಟನೆ ಹೇಗೆ? ಮತ್ತು ಯಾಕೆ? ಸಂಭವಿಸಿತು ಎಂಬ ಬಗ್ಗೆ ಇಸ್ರೇಲ್ ರಕ್ಷಣಾ ಪಡೆಯಿಂದ ಮಾಹಿತಿ ಪಡೆಯಲಾಗುತ್ತಿದೆ’ ಎಂದು ವಿಶ್ವಸಂಸ್ಥೆಯ ಕಾರ್ಯದರ್ಶಿಯವರ ಸಹ ವಕ್ತಾರ ಫರ್ಹಾನ್ ಹಕ್ ಅವರು ತಿಳಿಸಿದ್ದಾರೆ.

ಸೋಮವಾರ ಗಾಜಾದ ರಫಾದಲ್ಲಿ ವಾಹನದಲ್ಲಿ ಪ್ರಯಾಣಿಸುತ್ತಿದ್ದ ವೇಳೆ ನಡೆದ ಬಾಂಬ್ ದಾಳಿಯಲ್ಲಿ ಕಾಳೆ ಮೃತಪಟ್ಟಿದ್ದಾರೆ.

ಭಾರತದಿಂದ ಸಂತಾಪ (ನವದೆಹಲಿ ವರದಿ): ಕರ್ನಲ್ ವೈಭವ್ ಅನಿಲ್ ಕಾಳೆ ಸಾವಿಗೆ ಭಾರತದ ವಿದೇಶಾಂಗ ಇಲಾಖೆಯೂ ಸಂತಾಪ ವ್ಯಕ್ತಪಡಿಸಿದೆ.

‘ನ್ಯೂಯಾರ್ಕ್, ಟೆಲ್ ಅವಿವಾ ಮತ್ತು ರಮಲ್ಲಾದಲ್ಲಿರುವ ಅಧಿಕಾರಿಗಳು ಕಾಳೆ ಅವರ ಶವವನ್ನು ತರಲು ಸಹಾಯ ಮಾಡುತ್ತಿದ್ದಾರೆ ಮತ್ತು ಘಟನೆಯ ಬಗ್ಗೆ ತನಿಖೆ ನಡೆಸುವ ಸಲುವಾಗಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ’ ಎಂದು ತಿಳಿಸಿದೆ.

‘ಛಾಬಹಾರ್‌ನಿಂದ ಅನುಕೂಲ’

ಕೋಲ್ಕತ್ತ(ಪಿಟಿಐ): ಇರಾನ್‌ನೊಂದಿಗೆ ವ್ಯಾಪಾರ ಒಪ್ಪಂದವನ್ನು ಹೊಂದುವ ಯಾವುದೇ ದೇಶವು ದಿಗ್ಬಂಧನ ಎದುರಿಸಬೇಕಾಗಬಹುದು ಎಂದು ಅಮೆರಿಕ ಎಚ್ಚರಿಕೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು, ‘ಛಾಬಹಾರ್ ಬಂದರಿನಿಂದ ಎಲ್ಲರಿಗೆ ಅನುಕೂಲವಾಗಲಿದೆ. ಅದರ ಬಗ್ಗೆ ಸಂಕುಚಿತ ದೃಷ್ಟಿಕೋನ ಇಟ್ಟುಕೊಳ್ಳುವುದು ಸರಿಯಲ್ಲ’ ಎಂದು ತಿಳಿಸಿದರು.

ಮಂಗಳವಾರ ರಾತ್ರಿ ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಜೈಶಂಕರ್ ಅವರು, ‘ಛಾಬಹಾರ್ ಬಂದರು ಹೆಚ್ಚು ಪ್ರಸ್ತುತತೆಯನ್ನು ಹೊಂದಿದೆ ಎಂದು ಅಮೆರಿಕ ಕೂಡ ಈ ಹಿಂದೆ ಮೆಚ್ಚುಗೆ ವ್ಯಕ್ತಪಡಿಸಿತ್ತು’ ಎಂದರು.

ಸ್ಲೊವಾಕಿಯಾ ಪ್ರಧಾನಿ ಮೇಲೆ ಗುಂಡಿನ ದಾಳಿ



ರಾಬರ್ಟ್ ಫಿಕೊ

ಪ್ರಾಗ್ (ಎಪಿ): ಬೆಂಬಲಿಗರ ಸಭೆಯಲ್ಲಿ ಪಾಲ್ಗೊಂಡಿದ್ದ ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರ ಮೇಲೆ ಬುಧವಾರ ಗುಂಡಿನ ದಾಳಿ ನಡೆಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಶಂಕಿತನೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಫಿಕೊ ಅವರ ಫೇಸ್‌ಬುಕ್ ಪೇಜ್‌ನಲ್ಲಿ ಈ ಕುರಿತ ಮಾಹಿತಿ ಹಂಚಿಕೊಳ್ಳಲಾಗಿದೆ. ಅವರನ್ನು ಬನ್‌ಸ್ಕಾ ಬಿಸ್ಟ್ರಿಕಾ ನಗರದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದೂ ಫೇಸ್‌ಬುಕ್ ಖಾತೆಯಲ್ಲಿ ವಿವರಿಸಲಾಗಿದೆ.

ಹ್ಯಾಂಡ್ಲೊವಾ ಪಟ್ಟಣದ ಹೌಸ್ ಆಫ್ ಕಲ್ಚರ್ ಬಳಿ ಆಯೋಜಿಸಿದ್ದ ಸಭೆಯಲ್ಲಿ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ವೇಳೆ, ಬಂದೂಕುಧಾರಿಯೊಬ್ಬ ಫಿಕೊ ಮೇಲೆ ದಾಳಿ ನಡೆಸಿದ್ದಾನೆ.

ಉಗ್ರರಿಗೆ ಶಸ್ತ್ರಾಸ್ತ್ರ 10ನೇ ಆರೋಪಿ ಗುರುತಿಸಿದ ಎನ್ಐಎ

ಜಮ್ಮು/ ನವದೆಹಲಿ (ಪಿಟಿಐ): ಪಾಕಿಸ್ತಾನದಿಂದ ನಿಷೇಧಿತ ಲಷ್ಕರ್-ಎ-ತಯಬಾ (ಎಲ್ಇಟಿ) ಸಂಘಟನೆಗೆ ಡ್ರೋನ್ ಮೂಲಕ ಶಸ್ತ್ರಾಸ್ತ್ರಗಳನ್ನು ಪೂರೈಸಿದ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್ಐಎ) 10ನೇ ಆರೋಪಿಯನ್ನು ಗುರುತಿಸಿದೆ.

ಈ ಕುರಿತು 2022ರಲ್ಲಿ ದಾಖಲಿಸಿಕೊಂಡ ಪ್ರಕರಣದ ಕುರಿತು ಎನ್ಐಎ, ಜಮ್ಮುವಿನಲ್ಲಿರುವ ವಿಶೇಷ ನ್ಯಾಯಾಲಯದಲ್ಲಿ ಹೆಚ್ಚುವರಿ ದೋಷಾರೋಪಪಟ್ಟಿಯನ್ನು ಸಲ್ಲಿಸಿದೆ. ಇದರಲ್ಲಿ 10ನೇ ಆರೋಪಿ ಸೂಫಿಯಾನ್ ಹುಸೇನ್ ಅಲಿಯಾಸ್ ಸೋಸು ಹೆಸರನ್ನು ಸೇರಿಸಿದೆ.

ಪಾಕಿಸ್ತಾನದ ಡ್ರೋನ್‌ಗಳು ತರುವ ಶಸ್ತ್ರ ಮತ್ತು ಸ್ಫೋಟಕಗಳ ಸರಕನ್ನು ಸಂಗ್ರಹಿಸಿ, ಅವುಗಳನ್ನು ಪೂರೈಸಲು ಆರೋಪಿ ಹುಸೇನ್ ಎಲ್ಇಟಿ ಉಗ್ರರಿಗೆ ಸಹಕಾರ ನೀಡುತ್ತಿದ್ದ ಎಂದು ಆರೋಪಪಟ್ಟಿಯಲ್ಲಿ ತಿಳಿಸಲಾಗಿದೆ.

ಐಪಿಸಿಯ ವಿವಿಧ ಸೆಕ್ಷನ್‌ಗಳು, ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಸೇರಿದಂತೆ ವಿವಿಧ ಕಾಯ್ದೆಯಡಿ ಈಗಾಗಲೇ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಇತರ ಒಂಬತ್ತು ಆರೋಪಿಗಳ ಹೆಸರನ್ನು ಸೇರಿಸಲಾಗಿತ್ತು.

ಸಿಎಎ ಅಡಿ 14 ಮಂದಿಗೆ ಸೌಲಭ್ಯ • ಇದು ಐತಿಹಾಸಿಕ ದಿನ: ಅಮಿತ್ ಶಾ ಬಣ್ಣನೆ

ಪೌರತ್ವ ಪಡೆದವರಿಗೆ ಪ್ರಮಾಣಪತ್ರ

ನವದೆಹಲಿ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ) ಅಡಿಯಲ್ಲಿ ಭಾರತದ ಪೌರತ್ವ ಪಡೆದ 14 ಮಂದಿಗೆ ಮೊದಲ ಕಂತಿನಲ್ಲಿ ಬುಧವಾರ ಪೌರತ್ವ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

ಈ ಕುರಿತು 'ಎಕ್ಸ್'ನಲ್ಲಿ ಸಂತಸ ಹಂಚಿಕೊಂಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಈ ದಿನ ಐತಿಹಾಸಿಕ ದಿನ' ಎಂದು ಬಣ್ಣಿಸಿದ್ದಾರೆ. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನದಲ್ಲಿ ಧಾರ್ಮಿಕ ಕಿರುಕುಳಕ್ಕೆ ಒಳಗಾದವರ ದಶಕಗಳ ಕಾಯುವಿಕೆ ಇಂದಿಗೆ ಅಂತ್ಯವಾಗಿದೆ ಎಂದಿದ್ದಾರೆ.

'ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು ಬುಧವಾರ 14 ಫಲಾನುಭವಿಗಳಿಗೆ ಪೌರತ್ವ ಪ್ರಮಾಣಪತ್ರವನ್ನು ಹಸ್ತಾಂತರ ಮಾಡಿದ್ದಾರೆ. ಸಿಎಎ ಅಡಿ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಲು ಪ್ರತ್ಯೇಕ ವೆಬ್ ಪೋರ್ಟಲ್ ತೆರೆಯಲಾಗಿತ್ತು. ಆನ್‌ಲೈನ್ ಮೂಲಕ ಬಂದಿದ್ದ ಅರ್ಜಿಗಳನ್ನು ವಿವಿಧ ಹಂತಗಳಲ್ಲಿ ಸಂಪೂರ್ಣವಾಗಿ ಪರಿಶೀಲಿಸಿದ ಬಳಿಕವಷ್ಟೆ ಭಾರತದ ಪೌರತ್ವ ನೀಡಲಾಗಿದೆ' ಎಂದು ಗೃಹ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಈ ಕಾಯ್ದೆಯು ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಲ್ಲಿ ಕಿರುಕುಳಕ್ಕೆ ಒಳಗಾಗಿ, 2014ರ ಡಿ.31 ಹಾಗೂ ಅದಕ್ಕೂ ಮುಂಚೆ ಭಾರತಕ್ಕೆ ವಲಸೆ ಬಂದಿರುವ ಮುಸ್ಲಿಮೇತರರಿಗೆ ಪೌರತ್ವ ನೀಡುವ ಉದ್ದೇಶ ಹೊಂದಿದೆ.

ಪೌರತ್ವ ತಿದ್ದುಪಡಿ ಮಸೂದೆಗೆ 2019ರ ಡಿಸೆಂಬರ್‌ನಲ್ಲಿಯೇ ರಾಷ್ಟ್ರಪತಿ ಅಂಕಿತ ಹಾಕಿದ್ದರೂ, ದೇಶದಾದ್ಯಂತ ವಿರೋಧ ವ್ಯಕ್ತವಾಗಿದ್ದರಿಂದ ಕಾಯ್ದೆಯು ಜಾರಿಗೆ ಬಂದಿರಲಿಲ್ಲ. ಪ್ರಸಕ್ತ ವರ್ಷದ ಮಾರ್ಚ್‌ನಲ್ಲಷ್ಟೇ ಕೇಂದ್ರ ಸರ್ಕಾರವು ಪೌರತ್ವ ತಿದ್ದುಪಡಿ ಕಾಯ್ದೆ-2019ಕ್ಕೆ (ಸಿಎಎ) ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿತ್ತು.



ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರು ಸಿಎಎ ಅಡಿ ಪೌರತ್ವ ಪಡೆದವರಿಗೆ ಪೌರತ್ವ ಪ್ರಮಾಣಪತ್ರವನ್ನು ಹಸ್ತಾಂತರ ಮಾಡಿದರು —ಪಿಟಿಐ ಚಿತ್ರ

ಸ್ವಾತಿ ಮಾಲಿವಾಲ್ ಅವರೊಟ್ಟಿಗೆ ಅನುಚಿತ ವರ್ತನೆ ಖಂಡಿಸಿ ಸಿ.ಎಂ. ನಿವಾಸದ ಬಳಿ ಪ್ರತಿಭಟನೆ

ಬಿಭವ್ ರಾಜೀನಾಮೆ ಪಡೆಯಿರಿ: ಬಿಜೆಪಿ

ನವದೆಹಲಿ (ಪಿಟಿಐ) :ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರೊಂದಿಗೆ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರ ಸಹಾಯಕ ಬಿಭವ್ ಕುಮಾರ್ ಅನುಚಿತ ವರ್ತನೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿಯು ಎಎಪಿ ಮುಖ್ಯಸ್ಥರ ಮೇಲೆ ಟೀಕಾಪ್ರಹಾರ ಮಾಡಿದ್ದು, ತಮ್ಮ ಸಹಾಯಕನಿಂದ ರಾಜೀನಾಮೆ ಪಡೆಯುವಂತೆ ಒತ್ತಾಯಿಸಿದೆ. ಅದು ಸಾಧ್ಯವಾಗದಿದ್ದರೆ, ಕೇಜ್ರಿವಾಲ್ ಅವರೇ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರರಾದ ಶಾಜಿಯಾ ಇಲ್ಮಿ, ಸ್ವಾತಿ ಮಾಲಿವಾಲ್ ಭದ್ರತೆ ಕುರಿತು ಕಳವಳ ವ್ಯಕ್ತಪಡಿಸಿದ್ದು, ರಾಜಿ ಮಾಡಿಕೊಳ್ಳಲು ಸ್ವಾತಿ ಅವರ ಮೇಲೆ ಒತ್ತಡ ಹೇರುತ್ತಿದ್ದಾರಾ ಎಂದು ಪ್ರಶ್ನೆ ಮಾಡಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂಡಿಯಾ ಒಕ್ಕೂಟದ ನಾಯಕರಾದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮೌನ ವಹಿಸಿರುವುದನ್ನು ಪ್ರಶ್ನಿಸಿದ್ದಾರೆ.

'ನಿಜವಾಗಿಯೂ ಮಾಲಿವಾಲ್ ಅವರ ಮೇಲೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಿವಾಸದಲ್ಲಿ ಹಲ್ಲೆಯಾಗಿದೆ. ಎಎಪಿಯಲ್ಲಿರುವ ಎಲ್ಲರ ಬಗ್ಗೆ ನನಗೆ ಚೆನ್ನಾಗಿ ಗೊತ್ತು. ಕೇಜ್ರಿವಾಲ್ ಆದೇಶವಿಲ್ಲದೆ ಹಲ್ಲೆ ಸಾಧ್ಯವಿಲ್ಲ' ಎಂದಿದ್ದಾರೆ.

ಪ್ರಕರಣದ ತನಿಖೆಗೆ ಆಗ್ರಹಿಸಿ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಅರವಿಂದ ಕೇಜ್ರಿವಾಲ್ ನಿವಾಸದ ಬಳಿ ಪ್ರತಿಭಟನೆ ನಡೆಸಿದರು.

ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಅವರು ಕೇಜ್ರಿವಾಲ್ ಅವರ ಮೌನವನ್ನು ಪ್ರಶ್ನಿಸಿದ್ದು, ಕ್ರಮ ವಹಿಸುವಂತೆ ಬೇಡಿಕೆಯಿಟ್ಟಿದ್ದಾರೆ.

'ಇದು ದೆಹಲಿ ಮಹಿಳಾ ಆಯೋಗದ ಮುಖ್ಯಸ್ಥೆಯಾಗಿದ್ದ ಸ್ವಾತಿ ಮಾಲಿವಾಲ್ ಗೌರವದ ಪ್ರಶ್ನೆ. ನಾವು ಅವರ ಬೆಂಬಲಕ್ಕಿದ್ದೇವೆ. ಎಎಪಿ ನಾಯಕ ಸಂಜಯ್ ಸಿಂಗ್ ಪ್ರಕರಣವನ್ನು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಭಾಗಿಯಾದ ಆರೋಪಿಯ ವಿರುದ್ಧ ಕೇಜ್ರಿವಾಲ್ ಯಾಕೆ ದೂರು ನೀಡುತ್ತಿಲ್ಲ' ಎಂದು ಅವರು ಪ್ರಶ್ನಿಸಿದ್ದಾರೆ.

ಸ್ವಾತಿ ಭೇಟಿಯಾದ ಸಂಜಯ್ ಸಿಂಗ್

ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರು ಪಕ್ಷದ ನಾಯಕಿ, ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರನ್ನು ಬುಧವಾರ ಭೇಟಿಯಾದರು. ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರು ಸ್ವಾತಿ ಅವರ ಜೊತೆ ಅನುಚಿತವಾಗಿ ನಡೆದುಕೊಂಡರು ಎಂಬುದನ್ನು ಪಕ್ಷವು ಒಪ್ಪಿಕೊಂಡ ಒಂದು ದಿನದ ನಂತರ ಈ ಭೇಟಿ ನಡೆದಿದೆ.

ಸಂಜಯ್ ಅವರು ಸ್ವಾತಿ ಅವರನ್ನು ಭೇಟಿ ಮಾಡಿದಾಗ ಅವರ ಜೊತೆ ದೆಹಲಿ ಮಹಿಳಾ ಆಯೋಗದ ಸದಸ್ಯೆ ವಂದನಾ ಸಿಂಗ್ ಕೂಡ ಇದ್ದರು ಎಂದು ಮೂಲಗಳು ಹೇಳಿವೆ. ಈ ಕುರಿತಾಗಿ ಸ್ವಾತಿ ಅವರಿಂದ ಪ್ರತಿಕ್ರಿಯೆ ಸಿಕ್ಕಿಲ್ಲ. ಸ್ವಾತಿ ಅವರು ತಮ್ಮ ಆರೋಪಗಳ ಕುರಿತು ಈವರೆಗೆ ಅಧಿಕೃತವಾಗಿ ದೂರು ಸಲ್ಲಿಸಿಲ್ಲ.


ಕೇಜ್ರಿವಾಲ್ ಅರ್ಜಿ ವಿಚಾರಣೆ ಜುಲೈ 11ಕ್ಕೆ

ಜಾರಿ ನಿರ್ದೇಶನಾಲಯ (ಇ.ಡಿ) ತಮ್ಮ ವಿರುದ್ಧ ಜಾರಿ ಮಾಡಿದ ಸಮನ್ಸ್‌ಗಳನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಜುಲೈ 11ಕ್ಕೆ ನಿಗದಿಪಡಿಸಿ ಬುಧವಾರ ಆದೇಶಿಸಿತು.

ದೆಹಲಿಯ ಅಬಕಾರಿ ನೀತಿಯಲ್ಲಿನ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಆರೋಪದ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ ಸಮನ್ಸ್ ಜಾರಿಗೊಳಿಸಿದೆ.

ಈ ಕುರಿತು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುರೇಶ್ ಕುಮಾರ್ ಕೈತ ಅವರ ನೇತೃತ್ವದ ಪೀಠವು, ಜಾರಿ ನಿರ್ದೇಶನಾಲಯದ ಉತ್ತರಕ್ಕೆ ಪ್ರತಿಕ್ರಿಯೆ ನೀಡಲು ಎಎಪಿ ಮುಖಂಡ ಕೇಜ್ರಿವಾಲ್ ಅವರಿಗೆ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

ಮನೀಶ್ ಸಿಸೋಡಿಯಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ



ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ದೆಹಲಿ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ವಿಧಿಸಲಾಗಿರುವ ನ್ಯಾಯಾಂಗ ಬಂಧನದ ಅವಧಿಯನ್ನು ಮೇ 30ರವರೆಗೆ ವಿಸ್ತರಿಸುವಂತೆ ಇಲ್ಲಿನ ನ್ಯಾಯಾಲಯವು ಬುಧವಾರ ಆದೇಶಿಸಿದೆ.

ಪ್ರಕರಣದ ಕುರಿತು ವಿಚಾರಣೆ ನಡೆಸಿದ ಸಿಬಿಐ ಮತ್ತು ಇ.ಡಿಯ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು, ವಿಚಾರಣೆಯನ್ನು ಮೇ 30ಕ್ಕೆ ಮುಂದೂಡಿದ್ದಾರೆ.

ಜೈಲಿನಲ್ಲಿರುವ ಸಿಸೋಡಿಯಾ ಮತ್ತು ಇತರ ಆರೋಪಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಯಲ್ಲಿ ಭಾಗಿಯಾದರು. ಜಾಮೀನು ಕೋರಿ ಈ ಹಿಂದೆ ಸಿಸೋಡಿಯಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿತ್ತು.

ಜಾಮೀನು ಕೋರಿ ದೆಹಲಿ ಹೈಕೋರ್ಟ್‌ಗೆ ಕವಿತಾ ಮೊರೆ



ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ದಾಖಲಿಸಿರುವ ಭ್ರಷ್ಟಾಚಾರ ಪ್ರಕರಣದಲ್ಲಿ ಜಾಮೀನು ಕೋರಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರು ಬುಧವಾರ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿ ಸ್ವರಣಾ ಕಾಂತ ಶರ್ಮಾ ಅವರು ಈ ಕುರಿತು ಅರ್ಜಿಯನ್ನು ಗುರುವಾರ ವಿಚಾರಣೆ ನಡೆಸಲಿದ್ದಾರೆ.

ಈ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐ ದಾಖಲಿಸಿರುವ ಎರಡೂ ಪ್ರಕರಣಗಳಲ್ಲಿ ಕವಿತಾ ಅವರು ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಪ್ರೀತಿ ನಿರಾಕರಣೆ; ಯುವತಿಯ ಕೊಲೆ

ಒಂದನೇ ಪುಟದಿಂದ...

ಆಕೆ ನಿರಾಕರಿಸಿದ್ದಕ್ಕೆ ಕೃತ್ಯವನ್ನೆಸಗಿದ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪಾಲಕರ ಆಕ್ರಂದನ; ಪ್ರತಿಭಟನೆ: ಕಿಮ್ಸ್ ಶವಾಗಾರದ ಬಳಿ ಪಾಲಕರ ಆಕ್ರಂದನ ಮುಗಿಲು ಮುಟ್ಟಿತ್ತು. ಶಾಸಕ ಮಹೇಶ ಟೆಂಗಿನಕಾಯಿ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಕಿಮ್ಸ್ ಶವಾಗಾರದಿಂದ ಅಂಜಲಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಿದ ಕೆಲ ಹೊತ್ತಿನಲ್ಲೇ ಈಚೆಗೆ ಕೊಲೆಯಾದ ನೇಹಾ ಅವರ ತಂದೆ ನಿರಂಜನಯ್ಯ ಹಿರೇಮಠ ನೇತೃತ್ವದಲ್ಲಿ ಜನರು ನಗರದ ಚನ್ನಮ್ಮ ವೃತ್ತದ ಬಳಿ ಪ್ರತಿಭಟನೆ ನಡೆಸಿದರು. ಅಂಜಲಿ ಮೃತದೇಹವಿದ್ದ ಆಂಬುಲೆನ್ಸ್ ಅನ್ನು ಅಲ್ಲಿಯೇ ನಿಲ್ಲಿಸಿ, ನ್ಯಾಯಕ್ಕೆ ಆಗ್ರಹಿಸಿದರು. ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಲು ಒತ್ತಾಯಿಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಟಯರ್ ಸುಟ್ಟು ಆಕ್ರೋಶ ವ್ಯಕ್ತಪಡಿಸಿದರು.

ವೀರಾಪುರ ಓಣಿಯ ನಿವಾಸಕ್ಕೆ ಮೃತದೇಹ ಒಯ್ಯಲಾಯಿತು. ಆದರೆ, ಜಿಲ್ಲಾಧಿಕಾರಿ ಸ್ಥಳಕ್ಕೆ ಬರುವವರೆಗೂ, ಅಂತ್ಯಕ್ರಿಯೆ ನಡೆಸುವುದಿಲ್ಲ ಎಂದು ಕುಟುಂಬ ವರ್ಗದವರು, ಸಾರ್ವಜನಿಕರು ಪಟ್ಟು ಹಿಡಿದರು. ಮಧ್ಯಾಹ್ನ 2.30ರಿಂದ ಸಂಜೆ 6ರವರೆಗೆ ಮನೆಯ ಎದುರಿನ ರಸ್ತೆಯಲ್ಲಿ ಮೃತದೇಹ ಇಟ್ಟು ಪ್ರತಿಭಟನೆ ನಡೆಸಿದರು. ಶಹರ ತಹಶೀಲ್ದಾರ್ ಕಲಗೌಡ ಪಾಟೀಲ, ಪೊಲೀಸ್ ಕಮಿಷನರ್ ರೇಣುಕಾ ಸುಕುಮಾರ ಪ್ರತಿಭಟನಕಾರರನ್ನು ಸಮಾಧಾನ ಪಡಿಸಿ, ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲು ಪತ್ರ ಬರೆಯುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆ ಹಿಂಪಡೆದು ಅಂತ್ಯಕ್ರಿಯೆ ನಡೆಸಲಾಯಿತು.

ಡಿಸಿಪಿಗಳಾದ ರಾಜೀವ್ ಎಂ. ಮತ್ತು ರವೀಶ್ ಸಿ.ಆರ್. ಇದ್ದರು. ಭದ್ರತೆಗೆ ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿತ್ತು.

> **ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವುದಕ್ಕೆ ಹುಬ್ಬಳ್ಳಿಯಲ್ಲಿ ನಡೆದ ಮತ್ತೊಂದು ಯುವತಿಯ ಕೊಲೆ ಸ್ಪಷ್ಟ ನಿದರ್ಶನ. ಪ್ರೇಮ ಪ್ರಕರಣಗಳಲ್ಲಿ ಸರ್ಕಾರ ಬಿಗಿ ಕ್ರಮ ಕೈಗೊಳ್ಳಬೇಕು**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **ಅಂಬಿಗರ ಸಮಾಜದ ಯುವತಿ ಅಂಜಲಿ ಅಂಬಿಗೇರ ಅವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದವನಿಗೆ ಉಗ್ರ ಶಿಕ್ಷೆಯಾಗಬೇಕು. ಸರ್ಕಾರವು ಅಂಜಲಿ ಕುಟುಂಬಕ್ಕೆ ಪರಿಹಾರ ನೀಡಬೇಕು**
> **ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ**
> ಪೀಠಾಧಿಪತಿ, ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠ

'ಕಾಳ್ಗಿಚ್ಚು: ನಾಳೆ ಖುದ್ದಾಗಿ ಹಾಜರಾಗಿ'

ನವದೆಹಲಿ (ಪಿಟಿಐ): 'ಉತ್ತರಾಖಂಡದ ಅರಣ್ಯ ಪ್ರದೇಶಗಳಲ್ಲಿ ವ್ಯಾಪಿಸಿರುವ ಕಾಳ್ಗಿಚ್ಚು ನಿಯಂತ್ರಿಸಲು ರಾಜ್ಯ ಸರ್ಕಾರದ ಕ್ರಮವು ತೀರಾ ನೀರಸವಾಗಿರುವುದು ನೋವುಂಟು ಮಾಡಿದೆ' ಎಂದು ಉತ್ತರಾಖಂಡ ಸರ್ಕಾರವನ್ನು ಸುಪ್ರೀಂ ಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿದೆ.

ರಾಜ್ಯದ ಅರಣ್ಯ ಪ್ರದೇಶದಲ್ಲಿ ಸಂಭವಿಸಿದ ಕಾಳ್ಗಿಚ್ಚು ಕುರಿತು ಸಲ್ಲಿಕೆಯಾದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು. ಈ ವೇಳೆ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ನೇತೃತ್ವದ ಪೀಠವು, ಮೇ 17ರಂದು ನಡೆಯಲಿರುವ ವಿಚಾರಣೆ ವೇಳೆ ಖುದ್ದಾಗಿ ಹಾಜರಾಗಬೇಕು ಎಂದು ಉತ್ತರಾಖಂಡದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿತು. ಕೇಂದ್ರ ಸರ್ಕಾರವನ್ನೂ ತರಾಟೆಗೆ ತೆಗೆದುಕೊಂಡಿತು.

ಕಾಳ್ಗಿಚ್ಚು ನಂದಿಸಲು ಹಲವು ಕಾರ್ಯ ಯೋಜನೆಗಳು ಸಿದ್ಧವಾಗಿವೆಯಾದರೂ, ಅವುಗಳ ಜಾರಿಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ. ರಾಜ್ಯದ ಅರಣ್ಯ ಇಲಾಖೆಯಲ್ಲಿ ಭರ್ತಿಯಾಗದೆ ಖಾಲಿ ಇರುವ ಹಲವು ಹುದ್ದೆಗಳ ಬಗ್ಗೆ ಪ್ರಸ್ತಾಪಿಸಿದ ಪೀಠವು, ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಎಂದು ಸಲಹೆ ನೀಡಿದೆ.

'ಜಿಎಸ್‌ಟಿ ಪ್ರಕರಣ: ಬಂಧನ ಅನಿವಾರ್ಯವಲ್ಲ'

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಗೆ (ಜಿಎಸ್‌ಟಿ) ಸಂಬಂಧಿಸಿದ ಎಲ್ಲ ಪ್ರಕರಣಗಳಲ್ಲಿ ಬಂಧನದ ಅವಶ್ಯಕತೆ ಇಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ಅಪರಾಧಿಕತೆಯನ್ನು ಸಾಬೀತು ಮಾಡಲು ವಿಶ್ವಾಸಾರ್ಹವಾದ ಸಾಕ್ಷ್ಯಗಳು ಇದ್ದಾಗ ಮಾತ್ರ ಬಂಧನಕ್ಕೆ ಮುಂದಾಗಬಹುದು ಎಂದು ಹೇಳಿದೆ.

ಕಸ್ಟಮ್ಸ್ ಕಾಯ್ದೆ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅಂಶಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದ ಹಲವು ಅರ್ಜಿಗಳ ವಿಚಾರಣೆ ನಡೆಸಿರುವ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಎಂ.ಎಂ. ಸುಂದರೇಶ್ ಮತ್ತು ಬೇಲಾ ಎಂ. ತ್ರಿವೇದಿ ಅವರು ಇದ್ದ ತ್ರಿಸದಸ್ಯ ಪೀಠವು ತೀರ್ಪು ಕಾಯ್ದಿರಿಸಿದೆ. ಬಂಧಿಸುವ ಅಧಿಕಾರ ಹಾಗೂ ಬಂಧನದ ಅವಶ್ಯಕತೆ ಬೇರೆ ಬೇರೆ ಎಂದು ಪೀಠವು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಜಾಹೀರಾತು ಫಲಕ ಬಿದ್ದ ಸ್ಥಳದಲ್ಲಿ ಮತ್ತೆರಡು ಶವ ಪತ್ತೆ

ಮುಂಬೈ (ಪಿಟಿಐ): ಮುಂಬೈನ ಘಾಟ್ಕೋಪರ್ ನಗರ ಪ್ರದೇಶದಲ್ಲಿ ಬಿರುಗಾಳಿ ಹಾಗೂ ಮಳೆಗೆ ಉರುಳಿದ ಬೃಹತ್ ಜಾಹೀರಾತು ಫಲಕದ ಅವಶೇಷಗಳ ಅಡಿ ಮತ್ತೆರಡು ಶವಗಳು ಪತ್ತೆಯಾಗಿವೆ. ಘಟನೆ ನಡೆದ 40 ಗಂಟೆಗಳ ನಂತರವೂ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಘಟನಾ ಸ್ಥಳ ಘಾಟ್‌ಕೋಪರ್‌ನಲ್ಲಿ ಮಂಗಳವಾರ ಶವಗಳು ಪತ್ತೆಯಾಗಿವೆ. ಆದರೆ, ಇನ್ನೂ ಹೊರತೆಗೆಯಲು ಆಗಿಲ್ಲ ಎಂದು ಹೇಳಿದ್ದಾರೆ.

'ಜಾಹೀರಾತು ಫಲಕದ 3ನೇ ಗರ್ಡರ್‌ನ ಅವಶೇಷಗಳಡಿ ಸಿಲುಕಿರುವ ಮತ್ತೆರಡು ಶವಗಳನ್ನು ನಾವು ಪತ್ತೆ ಮಾಡಿದ್ದೇವೆ. ಆದರೆ, ಅವಶೇಷದ ಸ್ಥಳವನ್ನು ತಲುಪಲು ತುಂಬಾ ಅಡಚಣೆಗಳು ಇವೆ. ಅಲ್ಲಿಗೆ ನಾವು ತೆವಳಿಕೊಂಡೇ ಹೋಗಬೇಕಿದೆ' ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ಸಹಾಯಕ ಕಮಾಂಡೆಂಟ್ ನಿಖಿಲ್ ಮುಧೋಲ್ಕರ್ ಅವರು ಬುಧವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ರಕ್ಷಣಾ ಕಾರ್ಯಕ್ಕೆ ತೀವ್ರ ಅಡಚಣೆಗಳಿದ್ದು, ಇನ್ನೂ ಹೆಚ್ಚಿನ ಶವಗಳನ್ನು ಹೊರತೆಗೆಯುವ ಸಾಧ್ಯತೆ ಕ್ಷೀಣಿಸಿದೆ ಎಂದೂ ಹೇಳಿದ್ದಾರೆ.

ಗಣಿಯಲ್ಲಿ ಸಿಲುಕಿದ್ದ 14 ಮಂದಿ ರಕ್ಷಣೆ, ಅಧಿಕಾರಿ ಮೃತ

ಜೈಪುರ (ಪಿಟಿಐ): ರಾಜಸ್ಥಾನದ ನೀಮ್ ಕ ಥಾನಾ ಜಿಲ್ಲೆಯಲ್ಲಿಯ ಹಿಂದೂಸ್ತಾನ್ ಕಾಪರ್ ಲಿಮಿಟೆಡ್ ಸಂಸ್ಥೆಯ 15 ಸಿಬ್ಬಂದಿಯು ಗಣಿಯಲ್ಲಿ ಸಿಲುಕಿದ್ದ ಘಟನೆ ಮಂಗಳವಾರ ತಡರಾತ್ರಿ ನಡೆಯಿತು. ಅವರಲ್ಲಿ 14 ಮಂದಿಯನ್ನು ಸುರಕ್ಷಿತವಾಗಿ ಹೊರಗೆ ಕರೆತರಲಾಗಿದೆ. ಸಂಸ್ಥೆಯ ಮುಖ್ಯ ವಿಚಕ್ಷಣಾಧಿಕಾರಿ ಉಪೇಂದ್ರ ಕುಮಾರ್ ಪಾಂಡೆ ಎಂಬುವವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಣಿ ಪರಿಶೀಲನೆ ನಡೆಸುವ ಸಲುವಾಗಿ ವಿಚಕ್ಷಣಾ ತಂಡವು ಕೋಲ್ಕತ್ತದಿಂದ ರಾಜಸ್ಥಾನಕ್ಕೆ ಬಂದಿತ್ತು. ಸ್ಥಳೀಯ ಅಧಿಕಾರಿಗಳೂ ಅವರ ಜೊತೆಗೂಡಿದ್ದರು. ಪರಿಶೀಲನೆ ನಡೆಸಿ ಮರಳುತ್ತಿದ್ದಾಗ ಅವರನ್ನು ಹೊತ್ತೊಯ್ಯುತ್ತಿದ್ದ ಕೇಬಲ್ ವಾಹನದ ಹಗ್ಗ ತುಂಡಾದ ಕಾರಣ ಅವರು 1,875 ಅಡಿ ಅಡಿ ಆಳದ ಕಂದಕದಲ್ಲಿ ಸಿಲುಕಿದರು ಎಂದು ತಿಳಿಸಿದ್ದಾರೆ.

ಆಲಂ ಬಂಧನ

ರಾಂಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರ್ಖಂಡ್ ಗ್ರಾಮೀಣಾಭಿವೃದ್ಧಿ ಸಚಿವ ಆಲಂಗೀರ್ ಆಲಂ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಬಂಧಿಸಿದೆ ಎಂದು ಮೂಲಗಳು ತಿಳಿಸಿವೆ.

ಎರಡನೇ ದಿನ ಸತತ ಆರು ಗಂಟೆಗಳ ಕಾಲ ವಿಚಾರಣೆ ನಡೆಸಿದ ನಂತರ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಅವರನ್ನು ಬಂಧಿಸಲಾಗಿದೆ. ಮಂಗಳವಾರವೂ ಆಲಂ ಅವರನ್ನು ಸುಮಾರು ಒಂಬತ್ತು ತಾಸು ಇ.ಡಿ ವಿಚಾರಣೆಗೆ ಒಳಪಡಿಸಿತ್ತು.

ಕಳೆದ ವಾರ ಆಲಂ ಅವರ ಖಾಸಗಿ ಕಾರ್ಯದರ್ಶಿ ಸಂಜೀವ್ ಲಾಲ್ (52) ಮತ್ತು ಅವರ ಮನೆಗೆಲಸ ಮಾಡುತ್ತಿದ್ದ ಜಹಾಂಗೀರ್ ಆಲಂ (42) ಅವರಿಗೆ ಸಂಬಂಧಿಸಿದ ಪ್ರದೇಶದಲ್ಲಿ ಸುಮಾರು ₹32 ಕೋಟಿ ನಗದು ಪತ್ತೆಯಾಗಿತ್ತು. ನಂತರ ಇಬ್ಬರನ್ನೂ ಇ.ಡಿ ಬಂಧಿಸಿತ್ತು.

ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅವ್ಯವಹಾರ ನಡೆದಿದೆ ಮತ್ತು 'ಲಂಚ' ಪಡೆಯಲಾಗುತ್ತಿತ್ತು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಇ.ಡಿ ತನಿಖೆ ನಡೆಸುತ್ತಿದೆ.

ಗರ್ಭಪಾತಕ್ಕೆ 'ಸುಪ್ರೀಂ' ನಿರಾಕರಣೆ

ನವದೆಹಲಿ (ಪಿಟಿಐ): ಗರ್ಭಪಾತ ಮಾಡಿಸಿಕೊಳ್ಳಲು ಅನುಮತಿ ಕೋರಿ 27 ವಾರಗಳ ಗರ್ಭಿಣಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಬುಧವಾರ ತಳ್ಳಿ ಹಾಕಿದೆ. ಗರ್ಭದಲ್ಲಿರುವ ಭ್ರೂಣಕ್ಕೂ ಬದುಕುವ ಮೂಲಭೂತ ಹಕ್ಕು ಇದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಗರ್ಭಪಾತಕ್ಕೆ ಅನುಮತಿ ಕೋರಿ 20 ವರ್ಷ ವಯಸ್ಸಿನ ಅವಿವಾಹಿತ ಯುವತಿಯು ಮೊದಲಿಗೆ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ತಿರಸ್ಕರಿಸಿತ್ತು. ಇದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ.

ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮಾಹಿತಿ

ವಿಡಿಯೊ ಕಾನ್ಫರೆನ್ಸಿಂಗ್: 7.50 ಲಕ್ಷ ಪ್ರಕರಣಗಳ ವಿಚಾರಣೆ



ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಇಲ್ಲಿಯವರೆಗೆ 7.50 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ಆಲಿಸಿದೆ ಮತ್ತು 1.5 ಲಕ್ಷ ಪ್ರಕರಣಗಳನ್ನು ಆನ್‌ಲೈನ್ ಮೂಲಕ ದಾಖಲಿಸಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಬುಧವಾರ ಮಾಹಿತಿ ನೀಡಿದರು.

ತಂತ್ರಜ್ಞಾನವು ನ್ಯಾಯಾಂಗ ಸೇರಿದಂತೆ ಕಾನೂನು ಮತ್ತು ಜಾರಿ ಸಂಸ್ಥೆಗಳ ನಡುವಿನ ಸಂವಹನ ಸಂಬಂಧವನ್ನು ಇನ್ನಷ್ಟು ಸುಧಾರಿಸಿದೆ ಎಂದು ಅವರು ತಿಳಿಸಿದರು.

ರಿಯೊ ಡಿಜನೈರೊದಲ್ಲಿ ಜಿ-20 ಶೃಂಗಸಭೆಯಲ್ಲಿ 'ಡಿಜಿಟಲ್ ರೂಪಾಂತರ ಮತ್ತು ನ್ಯಾಯಾಂಗದ ದಕ್ಷತೆ ಹೆಚ್ಚಿಸಲು ತಂತ್ರಜ್ಞಾನ ಬಳಕೆ' ಕುರಿತು ಅವರು ಮಾತನಾಡಿದರು.

ಈ ವರ್ಷ ಜಿ-20 ಅಧ್ಯಕ್ಷತೆಯನ್ನು ಬ್ರೆಜಿಲ್ ವಹಿಸಿದ್ದು, ಜಿ-20 ದೇಶಗಳ ಸುಪ್ರೀಂ ಕೋರ್ಟ್‌ಗಳ ಅಥವಾ ಸಾಂವಿಧಾನಿಕ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳ ಶೃಂಗವನ್ನು ಆಯೋಜಿಸಿದೆ.

ಭಾರತೀಯ ಸುಪ್ರೀಂ ಕೋರ್ಟ್‌ನ ಪ್ರಕರಣಗಳ ನಿರ್ವಹಣಾ ವ್ಯವಸ್ಥೆಯನ್ನು ಉಚಿತ ಮತ್ತು ಮುಕ್ತ ಮೂಲ ಸಾಫ್ಟ್‌ವೇರ್ (ಎಫ್‌ಒಎಸ್‌ಎಸ್) ನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದು ವಿಶ್ವದ ಅತಿದೊಡ್ಡ ಪ್ರಕರಣಗಳ ನಿರ್ವಹಣಾ ವ್ಯವಸ್ಥೆಯಾಗಿದೆ ಎಂದು ಸಿಜೆಐ ವಿವರಿಸಿದರು.

ಕೋವಿಡ್ ಸಾಂಕ್ರಾಮಿಕದ ಬಳಿಕವೂ ಹೈಬ್ರಿಡ್ ಮಾದರಿಯಲ್ಲಿ ವಿಚಾರಣೆಗಳು ಭಾರತದ ನ್ಯಾಯಾಲಯಗಳಲ್ಲಿ ಮುಂದುವರಿದಿವೆ. ನ್ಯಾಯಾಲಯಗಳಿಗೆ ಭೌತಿಕವಾಗಿ ಹಾಜರಾಗಲು ಆಗದವರಿಗೆ ಹೈಬ್ರಿಡ್ ಮಾದರಿ ಅವಕಾಶ ಒದಗಿಸಿದೆ ಎಂದು ಚಂದ್ರಚೂಡ್ ಅವರು ಹೇಳಿದರು.

'ಸುಪ್ರೀಂ ಕೋರ್ಟ್‌ನಲ್ಲಿನ ಪ್ರಮುಖ ಸಾಂವಿಧಾನಿಕ ಪ್ರಕರಣಗಳ ವಿಚಾರಣೆಗಳನ್ನು ಯುಟ್ಯೂಬ್ ಚಾನೆಲ್ ಮೂಲಕ ನೇರ ಪ್ರಸಾರ ಮಾಡಲಾಗಿದೆ. ಈ ಮೂಲಕ ಎಲ್ಲ ನಾಗರಿಕರ ಮನೆ, ಹೃದಯಗಳನ್ನು ಸಾಂವಿಧಾನಿಕ ಚರ್ಚೆಗಳು ಪ್ರವೇಶಿಸುತ್ತಿವೆ. ಭಾರತದ ಸುಪ್ರೀಂ ಕೋರ್ಟ್ ಸಂಪೂರ್ಣವಾಗಿ ಕಾಗದರಹಿತವಾಗಿದೆ' ಎಂದು ಅವರು ಹೇಳಿದರು.

ದೇಶದ 16 ಪ್ರಾದೇಶಿಕ ಭಾಷೆಗಳಲ್ಲಿ ತೀರ್ಪುಗಳನ್ನು ಭಾಷಾಂತರಿಸಲು 'ಸುಪ್ರೀಂ ಕೋರ್ಟ್ ವಿಧಿಕ್ ಅನುವಾದ್ ಸಾಫ್ಟ್‌ವೇರ್' (ಎಸ್‌ಯುವಿಎಎಸ್) ಅನ್ನು ಬಳಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

> **ವರ್ಚುವಲ್ ವಿಚಾರಣೆಗಳು ಸುಪ್ರೀಂ ಕೋರ್ಟ್ ಅನ್ನು ಪ್ರಜಾಸತ್ತಾತ್ಮಕಗೊಳಿಸಿದೆ. ವಿಚಾರಣೆಗಳನ್ನು ಮನೆಮನೆಗಳಿಗೆ ತಲುಪಿಸಲು ಸಾಧ್ಯವಾಗಿದೆ**
> **ಡಿ.ವೈ.ಚಂದ್ರಚೂಡ್,** ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸುವುದು ಕಡ್ಡಾಯ. ಆಧಾರ್/ಪ್ಯಾನ್ ಹೊಂದಿಲ್ಲದ ದಾನಿಗಳು ತಾವು ನೆಲಸಿರುವ ದೇಶದಲ್ಲಿನ ತೆರಿಗೆದಾತರ ಗುರುತಿನ ಸಂಖ್ಯೆ/ಪಾಸ್‌ಪೋರ್ಟ್ ಸಂಖ್ಯೆ/ಮತದಾರರ ಗುರುತಿನ ಸಂಖ್ಯೆ/ಚಾಲನಾ ಪರವಾನಗಿ ಸಂಖ್ಯೆ ಇದರಲ್ಲಿ ಯಾವುದಾದರೂ ಒಂದನ್ನು ನೀಡುವುದು ಕಡ್ಡಾಯ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023-24ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

'ಪುಸ್ತಕ ಖರೀದಿಸಿದೆ'



ಪ್ರಥಮ ಪಿ.ಯು. ಪ್ರವೇಶಕ್ಕೆ ಕಾಲೇಜಿನ ಶುಲ್ಕ ಕಟ್ಟಲು 'ಪ್ರಜಾವಾಣಿ' ಕೊಟ್ಟಿರುವ ವಿದ್ಯಾರ್ಥಿವೇತನ ಬಳಸಿಕೊಂಡಿದ್ದೇನೆ. ಉಳಿದ ಹಣದಲ್ಲಿ ವಿದ್ಯಾಭ್ಯಾಸಕ್ಕೆ ಬೇಕಾದ ಪುಸ್ತಕ ಕೊಂಡುಕೊಂಡಿದ್ದೇನೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು 'ಪ್ರಜಾವಾಣಿ'ಯು ಮಾಡುತ್ತಿರುವ ಈ ಕಾರ್ಯ ಇತರರಿಗೂ ಮಾದರಿಯಾಗಿದೆ

ದನುಶ್ರೀ ಎನ್.ಎಸ್, ನಾರನಾಪುರ, ಅಜ್ಜಂಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಮಾಜಿ ರಾಜ್ಯಪಾಲೆ ಕಮಲ ಬೆನೀವಾಲ್ ನಿಧನ

ಜೈಪುರ(ಪಿಟಿಐ): ಕಾಂಗ್ರೆಸ್‌ನ ಹಿರಿಯ ನಾಯಕಿ ಮತ್ತು ಗುಜರಾತ್‌ನ ಮಾಜಿ ರಾಜ್ಯಪಾಲೆ ಕಮಲ ಬೆನೀವಾಲ್ ಅವರು ಬುಧವಾರ ನಿಧನರಾಗಿದ್ದಾರೆ.

'ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದ ಬೆನೀವಾಲ್(97) ಕೊನೆ ಉಸಿರೆಳೆದಿದ್ದು, ಗುರುವಾರ ಅವರ ಅಂತ್ಯಕ್ರಿಯೆ ನಡೆಯಲಿದೆ' ಎಂದು ಕುಟುಂಬ ಸದಸ್ಯರೊಬ್ಬರು ತಿಳಿಸಿದ್ದಾರೆ.

ಬೆನೀವಾಲ್ ಅವರು ತ್ರಿಪುರಾ ಮತ್ತು ಮಿಜೋರಾಂನ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಏಳು ಬಾರಿ ಶಾಸಕರಾಗಿದ್ದ ಬೆನೀವಾಲ್, ರಾಜಸ್ಥಾನದ ಉಪಮುಖ್ಯಮಂತ್ರಿಯಾಗಿದ್ದರು.

ಜ್ಯೋತಿರಾದಿತ್ಯ ಸಿಂಧಿಯಾಗೆ ಮಾತೃ ವಿಯೋಗ: ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ತಾಯಿ ಮಾಧವಿ ರಾಜೆ ಸಿಂಧಿಯಾ ಅವರು ಬುಧವಾರ ನಿಧನರಾಗಿದ್ದರೆ. ಅವರು ನ್ಯುಮೋನಿಯದಿಂದ ಬಳಲುತ್ತಿದ್ದರು.

ಸ್ಯಾಮ್ ಕರನ್ ಆಟಕ್ಕೆ ಒಲಿದ ಜಯ

ರಾಜಸ್ಥಾನ ರಾಯಲ್ಸ್‌ಗೆ ಸತತ ನಾಲ್ಕನೇ ಸೋಲು • ತವರಿನಲ್ಲಿ ಗಮನ ಸೆಳೆದ ರಿಯಾನ್ ಪರಾಗ್

ಗುವಾಹಟಿ (ಪಿಟಿಐ): ನಾಯಕ ಸ್ಯಾಮ್ ಕರನ್ (ಔಟಾಗದೇ 63; 41ಎ ಮತ್ತು 24ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಬುಧವಾರ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಐದು ವಿಕೆಟ್‌ಗಳಿಂದ ಜಯ ಸಾಧಿಸಿತು.


ರಾಜಸ್ಥಾನ ತಂಡಕ್ಕೆ ಇದು ಸತತ ನಾಲ್ಕನೇ ಸೋಲಾಗಿದೆ. 16 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ರಾಯಲ್ಸ್, ಈಗಾಗಲೇ ಪ್ಲೇಆಫ್‌ಗೆ ಮುನ್ನಡೆದಿದೆ. ಲೀಗ್‌ನ ಕೊನೆಯ ಪಂದ್ಯದಲ್ಲಿ ಅಗ್ರಸ್ಥಾನದಲ್ಲಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಭಾನುವಾರ ಎದುರಿಸಲಿದೆ.

ಪಂಜಾಬ್ ಈ ಗೆಲುವಿನೊಂದಿಗೆ 10 ಪಾಯಿಂಟ್ಸ್ ಕಲೆ ಹಾಕಿ, ಅಂಕ ಪಟ್ಟಿಯಲ್ಲಿ 9ನೇ ಸ್ಥಾನಕ್ಕೇರಿದೆ. ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವ ಕಿಂಗ್ಸ್, ಭಾನುವಾರ ಹೈದರಾಬಾದ್ ತಂಡದ ವಿರುದ್ಧ ಸೆಣಸಲಿದೆ.

ಮಂದಗತಿಯ ಪಿಚ್‌ನಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಪಂಜಾಬ್ ಕಿಂಗ್ಸ್ ಬೌಲರ್‌ಗಳು, ರಾಯಲ್ಸ್ ತಂಡವನ್ನು 9 ವಿಕೆಟ್‌ಗೆ 144 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು.

ಗುರಿಯನ್ನು ಬೆನ್ನತ್ತಿದ ಕಿಂಗ್ಸ್ ತಂಡಕ್ಕೆ ಟ್ರೆಂಟ್ ಬೌಲ್ಟ್ ಆರಂಭದಲ್ಲೇ ಪೆಟ್ಟು ನೀಡಿದರು. ಆರಂಭ ಆಟಗಾರ ಪ್ರಭಸಿಮ್ರನ್ ಸಿಂಗ್ (6) ಈ ಪಂದ್ಯದಲ್ಲೂ ನಿರಾಸೆ ಮೂಡಿಸಿದರು. ನಂತರದಲ್ಲಿ ಜಾನಿ ಬೆಸ್ಟೊ (14) ಮತ್ತು ರಿಲೀ ರೂಸೊ (22), ಶಶಾಂಕ್ ಸಿಂಗ್ (0) ಅವರೂ ಬೇಗನೆ ನಿರ್ಗಮಿಸಿದರು. ತಂಡವು 48 ರನ್ ಗಳಿಸುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು.

ಈ ಹಂತದಲ್ಲಿ ತಾಳ್ಮೆಯ ಆಟವಾಡಿದ ಕರನ್, ಐದನೇ ವಿಕೆಟ್‌ಗೆ ಜಿತೇಶ್ ಶರ್ಮಾ (22) ಅವರೊಂದಿಗೆ 63 ರನ್ (46ಎ) ಸೇರಿಸಿ ಗೆಲುವಿನ ಆಸೆಯನ್ನು ಜೀವಂತವಾಗಿರಿಸಿದರು. ಗೆಲುವಿಗೆ 33 ರನ್ ಬೇಕಿದ್ದಾಗ ಜಿತೇಶ್ ಶರ್ಮಾ ಔಟಾದಾಗ ಮತ್ತೆ ಆತಂಕ ಮೂಡಿತು. ಆದರೆ ಐದು ಬೌಂಡರಿ, ಮೂರು ಸಿಕ್ಸರ್‌ಗಳೊಂದಿಗೆ ಏಕಾಂಗಿಯಾಗಿ ಹೋರಾಡಿದ ಕರನ್, ಆರನೇ ವಿಕೆಟ್‌ಗೆ ಆಶುತೋಷ್ ಶರ್ಮಾ (ಔಟಾಗದೇ 17) ಅವರೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದರು. ಇನ್ನೂ 7 ಎಸೆತ ಬಾಕಿ ಇರುವಂತೆ ಕಿಂಗ್ಸ್ ತಂಡವು ಐದು ವಿಕೆಟ್‌ಗೆ 145 ರನ್ ಗಳಿಸಿತು.



ಪಂಜಾಬ್ ಕಿಂಗ್ಸ್ ನಾಯಕ ಸ್ಯಾಮ್ ಕರನ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ಪರಾಗ್ ಆಸರೆ: ಇದಕ್ಕೂ ಮೊದಲು ಟಾಸ್ ಗೆದ್ದ ರಾಜಸ್ಥಾನ ತಂಡವು ಬ್ಯಾಟ್ ಮಾಡಲು ನಿರ್ಧರಿಸಿತು. ಆದರೆ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಅವರನ್ನು ಮತ್ತೊಮ್ಮೆ ಬೇಗನೇ ಕಳೆದುಕೊಂಡಿತು. ಸ್ಯಾಮ್ ಕರನ್ ಬೌಲಿಂಗ್‌ನಲ್ಲಿ ಅವರು ಚೆಂಡನ್ನು ಸ್ಟಂಪ್ಸ್‌ಗೆ ಎಳೆದುಕೊಂಡರು.

ಮೊದಲ ಬಾರಿ ಒಂದೇ ಆವೃತ್ತಿಯಲ್ಲಿ 500 ರನ್ ದಾಟಿದ ನಾಯಕ ಸಂಜು ಸ್ಯಾಮ್ಸನ್ (18) ಮತ್ತು ಟಾಮ್ ಕೊಹ್ಲರ್ ಕ್ಯಾಡ್ಮೋರ್ (18, 23) ಎರಡನೇ ವಿಕೆಟ್‌ಗೆ ನಿಧಾನಗತಿಯಲ್ಲಿ 36 ರನ್ ಸೇರಿಸಿದರು.

ಕರನ್ ಮತ್ತು ಅರ್ಷದೀಪ್ ಕೊಂಚ ಸ್ವಿಂಗ್‌ನೊಡನೆ ಉತ್ತಮವಾಗಿ ಬೌಲಿಂಗ್ ಮಾಡಿದರು. ಹೀಗಾಗಿ ರನ್‌ವೇಗ ಹೆಚ್ಚಿಸಲು ರಾಯಲ್ಸ್ ಆಟಗಾರರಿಗೆ ಆಗಲಿಲ್ಲ. ಏಳನೇ ಓವರ್‌ನಲ್ಲಿ ಈ ಜೊತೆಯಾಟ ಮುರಿಯಿತು. ಸ್ಯಾಮ್ಸನ್, ವೇಗಿ ನಥಾನ್ ಎಲಿಸ್ ಬೌಲಿಂಗ್‌ನಲ್ಲಿ ಕಟ್‌ಗೆ ಯತ್ನಿಸಿ ರಾಹುಲ್ ಚಾಹರ್‌ಗೆ ಕ್ಯಾಚಿತ್ತರು. ಮುಂದಿನ ಓವರಿನಲ್ಲಿ ಕ್ಯಾಡ್ಮೋರ್, ಲೆಗ್ ಸ್ಪಿನ್ನರ್ ರಾಹುಲ್ ಚಾಹರ್‌ಗೆ (26ಕ್ಕೆ2) ವಿಕೆಟ್ ನೀಡಿದರು.

ಸ್ಥಳೀಯ ತಾರೆ ರಿಯಾನ್ ಪರಾಗ್ ಅವರು ತಂಡದ ಪರ ಅತ್ಯಧಿಕ 48 ರನ್ (34 ಎಸೆತ) ಗಳಿಸಿ ಗಮನ ಸೆಳೆದರು. ಆರ್.ಅಶ್ವಿನ್ (28, 19ಎ, 4x3, 6x1) ಮತ್ತು ಪರಾಗ್ ನಾಲ್ಕನೇ ವಿಕೆಟ್‌ಗೆ 50 ರನ್ ಸೇರಿಸಿ ರನ್ ವೇಗ ಹೆಚ್ಚಿಸುವ ಪ್ರಯತ್ನ ಮಾಡಿದರು.

ಚಾಹರ್ ಮಾಡಿದ 12ನೇ ಓವರಿನಲ್ಲಿ ಅಶ್ವಿನ್ 17 ರನ್ ಬಾಚಿದರು. ಆದರೆ ಅರ್ಷದೀಪ್ ಸಿಂಗ್ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಹೋಗಿ ಶಶಾಂಕ್‌ಗೆ ಕ್ಯಾಚಿತ್ತರು. ಪರಾಗ್ ಮಾತ್ರ ತವರು ನೆಲದಲ್ಲಿ ಬೇರೂರಿ ಆಡಿದರು. ಅವರೂ ಈ ಋತುವಿನಲ್ಲಿ 500 ರನ್ ದಾಟಿದರು. ಐಪಿಎಲ್‌ನಲ್ಲಿ ಎರಡನೇ ಬಾರಿ ಈ ಸಾಧನೆಗೆ ಪಾತ್ರರಾದರು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	13	9	3	19	1.428
ರಾಜಸ್ಥಾನ ರಾಯಲ್ಸ್	13	8	5	16	0.273
ಚೆನ್ನೈ ಸೂಪರ್ ಕಿಂಗ್ಸ್	13	7	6	14	0.528
ಸನ್‌ರೈಸರ್ಸ್ ಹೈದರಾಬಾದ್	12	7	5	14	0.406
ಡೆಲ್ಲಿ ಕ್ಯಾಪಿಟಲ್ಸ್	14	7	7	14	-0.377
ಆರ್‌ಸಿಬಿ	13	6	7	12	0.387
ಲಖನೌ ಸೂಪರ್ ಜೈಂಟ್ಸ್	13	6	7	12	-0.787
ಗುಜರಾತ್ ಟೈಟನ್ಸ್	13	5	7	11	-1.063
ಪಂಜಾಬ್ ಕಿಂಗ್ಸ್	13	5	8	10	-0.347
ಮುಂಬೈ ಇಂಡಿಯನ್ಸ್	13	4	9	8	-0.271

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (661)

ಪರ್ಪಲ್ ಕ್ಯಾಪ್: ಹರ್ಷಲ್ ಪಟೇಲ್, ಪಂಜಾಬ್ ಕಿಂಗ್ಸ್ (22 ವಿಕೆಟ್)

ತವರಿಗೆ ಮರಳಿದ ರಬಾಡ



ಜೊಹಾನೆಸ್‌ಬರ್ಗ್ (ಪಿಟಿಐ): ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್‌ಗೆ ಆಡುತ್ತಿದ್ದ ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ ಅವರು ಮೀನಖಂಡದ ಸ್ನಾಯುನೋವಿನಿಂದ ಬಳಲುತ್ತಿರುವ ಕಾರಣ ತವರಿಗೆ ಮರಳಿದ್ದಾರೆ ಎಂದು ಆ ದೇಶದ ಕ್ರಿಕೆಟ್ ಮಂಡಳಿ ಬುಧವಾರ ತಿಳಿಸಿದೆ.

ಪ್ಲೇ ಆಫ್ ರೇಸ್‌ನಿಂದ ಈಗಾಗಲೇ ಹೊರಬಿದ್ದಿರುವ ಪಂಜಾಬ್ ಕಿಂಗ್ಸ್ ಔಪಚಾರಿಕವಾದ ತನ್ನ ಕೊನೆಯ ಲೀಗ್ ಪಂದ್ಯವನ್ನು ಮೇ 19ರಂದು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಆಡಲಿದೆ. 28 ವರ್ಷ ವಯಸ್ಸಿನ ರಬಾಡ 11 ಪಂದ್ಯಗಳನ್ನು ಆಡಿ 11 ವಿಕೆಟ್‌ಗಳನ್ನು ಪಡೆದಿದ್ದರು.

ಅವರು ತವರಿಗೆ ತಲುಪಿದ ನಂತರ ತಜ್ಞ ವೈದ್ಯರನ್ನು ಸಂಪರ್ಕಿಸಿದ್ದು, ಕ್ರಿಕೆಟ್ ದಕ್ಷಿಣ ಆಫ್ರಿಕಾದ (ಸಿಎಸ್‌ಎ) ವೈದ್ಯಕೀಯ ತಂಡ ಅವರ ಚಿಕಿತ್ಸೆ ಮೇಲೆ ನಿಗಾ ಇಟ್ಟಿದೆ ಎಂದು ಸಿಎಸ್‌ಎ ಹೇಳಿಕೆಯಲ್ಲಿ ತಿಳಿಸಿದೆ.

ಟಿ20 ವಿಶ್ವಕಪ್‌ಗೆ ತಯಾರಿ ನಡೆಸುವುದಕ್ಕೆ ಇದರಿಂದ ಅವರಿಗೆ ಸಮಸ್ಯೆಯಾಗದು ಎಂದು ಸಿಎಸ್‌ಎ ಹೇಳಿದೆ. ವಿಶ್ವಕಪ್ ಮುಂದಿನ ತಿಂಗಳು ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರುಗಳಲ್ಲಿ 9ಕ್ಕೆ 144 (ಟಾಮ್ ಕೊಹ್ಲರ್ ಕ್ಯಾಡ್ಮೋರ್ 18, ಸಂಜು ಸ್ಯಾಮ್ಸನ್ 18, ರಿಯಾನ್ ಪರಾಗ್ 48, ರವಿಚಂದ್ರನ್ ಅಶ್ವಿನ್ 28; ಸ್ಯಾಮ್ ಕರನ್ 24ಕ್ಕೆ2, ಅರ್ಷದೀಪ್ 31ಕ್ಕೆ1, ನಥಾನ್ ಎಲ್ಲಿಸ್ 24ಕ್ಕೆ1, ಹರ್ಷಲ್ ಪಟೇಲ್ 28ಕ್ಕೆ2, ರಾಹುಲ್ ಚಾಹರ್ 26ಕ್ಕೆ2). **ಪಂಜಾಬ್ ಕಿಂಗ್ಸ್:** 18.5 ಓವರುಗಳಲ್ಲಿ 5ಕ್ಕೆ 145 (ರಿಲೀ ರೂಸೊ 22, ಸ್ಯಾಮ್ ಕರನ್ ಔಟಾಗದೇ 63, ಜಿತೇಶ್ ಶರ್ಮಾ 22, ಆಶುತೋಷ್ ಶರ್ಮಾ ಔಟಾಗದೇ 17; ಆವೇಶ್ ಖಾನ್ 28ಕ್ಕೆ 2, ಯುಜುವೇಂದ್ರ ಚಾಹಲ್ 31ಕ್ಕೆ 2). **ಪಂದ್ಯದ ಆಟಗಾರ:** ಸ್ಯಾಮ್ ಕರನ್. **ಫಲಿತಾಂಶ:** ಪಂಜಾಬ್ ಕಿಂಗ್ಸ್‌ಗೆ ಐದು ವಿಕೆಟ್‌ಗಳ ಜಯ.

ಇಂದು ಗುಜರಾತ್ ಟೈಟನ್ಸ್ ವಿರುದ್ಧ ಪಂದ್ಯ

ಪ್ಲೇ ಆಫ್‌ನತ್ತ 'ಸನ್' ಚಿತ್ತ

ಹೈದರಾಬಾದ್ (ಪಿಟಿಐ): ಪ್ರಬಲ ಸನ್‌ರೈಸರ್ಸ್ ತಂಡ ಗುರುವಾರ ಇಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ. ಎದುರಾಳಿ ಬೌಲರ್‌ಗಳ ಮೇಲೆ ದಂಡೆತ್ತಿಹೋಗುವ ಬಲಿಷ್ಠ ಬ್ಯಾಟಿಂಗ್ ಸರದಿಯು ಗೆಲುವು ತಂದು ಕೊಟ್ಟು, ಪ್ಲೇ ಆಫ್ ಸ್ಥಾನ ಖಚಿತ ಪಡಿಸಬಹುದೆಂಬ ವಿಶ್ವಾಸದಲ್ಲಿ ಸನ್‌ರೈಸರ್ಸ್ ತಂಡವಿದೆ.

ಸನ್‌ರೈಸರ್ಸ್ ತಂಡಕ್ಕೆ ಎರಡು ಪಂದ್ಯಗಳು ಆಡಲು ಬಾಕಿಯಿದೆ. ಒಂದು ಗೆದ್ದರೂ ಪ್ಲೇ ಆಫ್ ಸ್ಥಾನ ಖಚಿತ. ಆದರೆ ಎರಡೂ ಪಂದ್ಯಗಳನ್ನು ಗೆದ್ದು, ಅಂಕ-ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯುವ ಗುರಿಯಲ್ಲಿ ಪ್ಯಾಟ್ ಕಮಿನ್ಸ್ ಬಳಗ ಇದೆ.

ತಂಡವು 12 ಪಂದ್ಯಗಳಿಂದ 14 ಪಾಯಿಂಟ್ಸ್ ಹೊಂದಿದೆ. ಎರಡೂ ಪಂದ್ಯಗಳನ್ನು ಗೆದ್ದರೆ 18 ಪಾಯಿಂಟ್ಸ್ ಸಂಪಾದಿಸಲಿದೆ.

ಲಖನೌ ಸೂಪರ್ ಜೈಂಟ್ಸ್ ವಿರುದ್ಧ ತನ್ನ ಕೊನೆಯ ಪಂದ್ಯದಲ್ಲಿ 10 ವಿಕೆಟ್‌ಗಳ ದಾಖಲೆ ಗೆಲುವು ಪಡೆದ ಬಳಿಕ ಸನ್‌ರೈಸರ್ಸ್‌ಗೆ ಒಂದು ವಾರ ಬಿಡುವೂ ದೊರತಿದೆ. ಆದರೆ ಈ ಆವೃತ್ತಿಯಲ್ಲಿ ಕೆಲವು ಭರ್ಜರಿ ಗೆಲುವುಗಳನ್ನು ದಾಖಲಿಸಿರುವ ಸನ್‌ರೈಸರ್ಸ್, ಒಂದೆರಡು ಪಂದ್ಯಗಳಲ್ಲಿ ನೀರಸವಾಗಿ ಆಡಿದ್ದೂ ಇದೆ.

ತಂಡ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಅವರಿಂದ ಮತ್ತೆ ಸ್ಫೋಟಕ ಆರಂಭ ನಿರೀಕ್ಷಿಸಿದೆ.

ಇನ್ನೊಂದೆಡೆ 13 ಪಂದ್ಯಗಳಿಂದ 11 ಪಾಯಿಂಟ್ಸ್ ಗಳಿಸಿರುವ ಟೈಟನ್ಸ್ ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿದೆ. ನಿರಾಶಾದಾಯಕ ಅಭಿಯಾನವನ್ನು ಗೆಲುವಿನೊಡನೆ ಅಂತ್ಯಗೊಳಿಸುವ ಯತ್ನದಲ್ಲಿದೆ.

ಟೈಟನ್ಸ್‌ಗೆ ಇದು ಲೀಗ್‌ನ ಕೊನೆಯ ಪಂದ್ಯ. ಹಾರ್ದಿಕ್ ಪಾಂಡ್ಯ ಕಳೆದ ವರ್ಷದ ಕೊನೆಯಲ್ಲಿ ಮುಂಬೈ ಇಂಡಿಯನ್ಸ್‌ಗೆ ಹೋದ ನಂತರ ಟೈಟನ್ಸ್ ತಂಡಕ್ಕೆ ಸಮರ್ಥ ಬದಲಿ ಆಟಗಾರ ದೊರೆಯದೇ ಹೋಗಿದ್ದು ದೊಡ್ಡ ಕೊರತೆ. ಅನುಭವಿ ವೇಗಿ ಮೊಹಮ್ಮದ್ ಶಮಿ ಅವರ ಅನುಪಸ್ಥಿತಿಯಂ-ತೂ ತಂಡವನ್ನು ಬಲವಾಗಿ ಕಾಡಿದೆ. ಬ್ಯಾಟಿಂಗ್ ವಿಭಾಗದ ಯಶಸ್ಸು, ನಾಯಕ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಅವರ ಆರಂಭ ಅವಲಂಬಿಸಿದೆ. ಸುದರ್ಶನ್ ಈ ಬಾರಿ ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಡೇವಿಡ್ ಮಿಲ್ಲರ್ ಅವರಿಂದ ಸ್ಫೋಟಕ ಇನಿಂಗ್ಸ್ ಬಂದಿಲ್ಲ. ಅವರಿಂದ ತಂಡ ಕೊಡುಗೆ ನಿರೀಕ್ಷಿಸುತ್ತಿದೆ.

ಪಂದ್ಯ ಆರಂಭ: ರಾತ್ರಿ 7.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್



ಅಭಿಷೇಕ್ ಶರ್ಮಾ –ಎಎಫ್‌ಪಿ ಚಿತ್ರಗಳು

ಶುಭಮನ್ ಗಿಲ್

ಐರ್ಲೆಂಡ್ ತಂಡಕ್ಕೆ ಕೆಎಂಎಫ್ ಪ್ರಾಯೋಜಕತ್ವ


'ಟಿ20 ವಿಶ್ವಕಪ್‌ನಲ್ಲಿ ಸ್ಪರ್ಧಾತ್ಮಕ ಆಟ'

ಬೆಂಗಳೂರು (ಪಿಟಿಐ): 'ಪಾಕಿಸ್ತಾನ ವಿರುದ್ಧ ಈಚೆಗೆ ಹೋರಾಟದ ಪ್ರದರ್ಶನ ನೀಡಿದ ಐರ್ಲೆಂಡ್ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ (ಜೂನ್ 5) ವಿರುದ್ಧವೂ ಉತ್ತಮ ಆಟದ ವಿಶ್ವಾಸವನ್ನು ಹೊಂದಿದೆ' ಎಂದು ಐರ್ಲೆಂಡ್ ತಂಡದ ಬ್ಯಾಟರ್ ಲೋರ್ಕನ್ ಟಕರ್ ಅಭಿಪ್ರಾಯಪಟ್ಟರು.

ಟಿ20 ಸರಣಿಯಲ್ಲಿ ಪಾಕ್ ವಿರುದ್ಧದ ಮೊದಲ ಪಂದ್ಯವನ್ನು ಆತಿಥೇಯ ಐರ್ಲೆಂಡ್ ಐದು ವಿಕೆಟ್‌ಗಳಿಂದ ಗೆದ್ದು, ಐತಿಹಾಸಿಕ ಸಾಧನೆ ಮಾಡಿತ್ತು. ಚುಟುಕು ಮಾದರಿಯಲ್ಲಿ ಪಾಕಿಸ್ತಾನದ ವಿರುದ್ಧ ಐರ್ಲೆಂಡ್‌ಗೆ ದಕ್ಕಿದ ಮೊದಲ ಜಯ ಅದಾಗಿತ್ತು. ಮೂರು ಪಂದ್ಯಗಳ ಸರಣಿಯನ್ನು ಪಾಕಿಸ್ತಾನ 2–1ರಿಂದ ಗೆದ್ದುಕೊಂಡಿತ್ತು. ಎರಡನೇ ಮತ್ತು ಮೂರನೇ ಪಂದ್ಯದಲ್ಲಿ ಟಕರ್ ಕ್ರಮವಾಗಿ 51 ಮತ್ತು 73 ರನ್ ಗಳಿಸಿ ಮಿಂಚಿದ್ದರು.

'ಪಾಕ್ ವಿರುದ್ಧದ ಮೊದಲ ಪಂದ್ಯದ ಗೆಲುವಿನಿಂದ ನಮ್ಮ ತಂಡದ ಆಟಗಾರರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿದೆ. ಅದರಲ್ಲೂ ಸರಣಿ ಗೆದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು' ಎಂದು ವಿಕೆಟ್ ಕೀಪರ್ ಆಗಿರುವ 27 ವರ್ಷದ ಟಕರ್ ಹೇಳಿದರು.

ಅಮೆರಿಕ ಮತ್ತು ವೆಸ್ಟ್‌ಇಂಡೀಸ್ ಆತಿಥ್ಯದಲ್ಲಿ ಜೂನ್‌ನಲ್ಲಿ ನಡೆಯುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳಿಗೆ ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಪ್ರಾಯೋಜಕತ್ವ ನೀಡಿದ್ದು, ಈ ಪ್ರಯುಕ್ತ ಬುಧವಾರ ವರ್ಚುವಲ್ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.



ಲೋರ್ಕನ್ ಟಕರ್

'ಸೂಕ್ತ ಸಂದರ್ಭದಲ್ಲಿ ಕೆಎಂಎಫ್ ಪ್ರಾಯೋಜಕತ್ವ ನೀಡಿದ್ದು, ಅದರಿಂದ ನಮ್ಮ ತಂಡಕ್ಕೆ ಉತ್ತೇಜನ ಸಿಗಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಶ್ವಕಪ್‌ನಲ್ಲಿ ಐರ್ಲೆಂಡ್, ಭಾರತ, ಪಾಕಿಸ್ತಾನ, ಅಮೆರಿಕ ಮತ್ತು ಕೆನಡಾ ತಂಡಗಳು ಒಂದೇ ಗುಂಪಿನಲ್ಲಿವೆ.

'ಸ್ವದೇಶಿ ಸರಣಿಯ ಸೋಲಿನ ಹೊರತಾಗಿಯೂ ಜೂನ್ 16ರಂದು ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ತಂಡವು ಮೇಲುಗೈ ಸಾಧಿಸುವ ವಿಶ್ವಾಸವಿದೆ' ಎಂದು ಅವರು ತಿಳಿಸಿದರು.

'ಐರ್ಲೆಂಡ್ ತಂಡದೊಂದಿಗೆ ಗುರುತಿಸಲು ಸಂತೋಷ-ವಾಗುತ್ತಿದೆ. ನಂದಿನಿ ಉತ್ಪನ್ನಗಳು ಈಗ ದುಬೈನಲ್ಲಿ ಲಭ್ಯವಿದೆ. ಮುಂದೆ ಅಮೆರಿಕದಲ್ಲೂ ನಂದಿನಿ ಉತ್ಪನ್ನಗಳ ಮಾರಾಟದ ಗುರಿ ಹೊಂದಿದ್ದೇವೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ಹೇಳಿದರು.

ಎಲೋರ್ಡಾ ಕಪ್: ಅಭಿಷೇಕ್ ಯಾದವ್ ಸೆಮಿಗೆ

ಅಸ್ತಾನಾ (ಕಜಕಸ್ತಾನ) (ಪಿಟಿಐ): ಭಾರತದ ಅಭಿಷೇಕ್ ಯಾದವ್ ಬುಧವಾರ ಇಲ್ಲಿ ನಡೆದ ಎಲೋರ್ಡಾ ಕಪ್ ಬಾಕ್ಸಿಂಗ್ ಟೂರ್ನಿಯಲ್ಲಿ ಕಜಕಸ್ತಾನದ ರಖತ್ ಸೀಟ್ಜಾನ್ ಅವರನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದರು.

ಪುರುಷರ 67 ಕೆ.ಜಿ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಅಭಿಷೇಕ್ 5–0 ಅಂತರದಿಂದ ಗೆದ್ದರು.

ಭಾರತದ ನಾಲ್ಕು ಬಾಕ್ಸರ್‌ಗಳು ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿದರು. 54 ಕೆ.ಜಿ ವಿಭಾಗದಲ್ಲಿ ಪವನ್ ಬರ್ತ್‌ವಾಲ್ 1–4 ರಿಂದ ಕಜಕಸ್ತಾನದ ಕಬ್ದೇಶೋವ್ ತೈಮೂರ್ ಅವರಿಗೆ ಶರಣಾದರು. 57 ಕೆ.ಜಿ ವಿಭಾಗದಲ್ಲಿ ಕವಿಂದರ್ ಸಿಂಗ್ ಬಿಶ್ತ್ ಅವರು ಉಜ್ಬೇಕಿಸ್ತಾನದ ಮಿರಾಜ್‌ಬೆಕ್ ಮಿರ್ಜಹಲಿಲೋವ್ ವಿರುದ್ಧ ಪರಾಭವಗೊಂಡರು. ವೀರೇಂದರ್ ಸಿಂಗ್ (60 ಕೆ.ಜಿ) ಮತ್ತು ಹಿತೇಶ್ (71 ಕೆ.ಜಿ) ಕ್ರಮವಾಗಿ ಕಜಕಸ್ತಾನದ ಟೆಮಿರ್ಜಾನೊವ್ ಸೆರಿಕ್ ಮತ್ತು ಅಸ್ಲಾನ್‌ಬೆಕ್ ಶೈಂಬರ್‌ಗೆನೊವ್ ವಿರುದ್ಧ ಸೋತರು.

ಮಂಗಳವಾರ ತಡರಾತ್ರಿ ಮನೀಶಾ (60 ಕೆ.ಜಿ) ಮತ್ತು ಮೋನಿಕಾ (81 ಕೆ.ಜಿ) ಸೆಮಿಫೈನಲ್ ಪ್ರವೇಶಿಸಿ ಭಾರತಕ್ಕೆ ಎರಡು ಪದಕಗಳನ್ನು ಖಚಿತ ಪಡಿಸಿದರು.

ಚೆಸ್: ಅರ್ಜುನ್, ಅರವಿಂದ್‌ಗೆ ಜಯ

ಶಾರ್ಜಾ (ಪಿಟಿಐ): ವಿಶ್ವದ ಏಳನೇ ಕ್ರಮಾಂಕದ ಆಟಗಾರ ಅರ್ಜುನ್ ಇರಿಗೇಶಿ, ಗ್ರ್ಯಾಂಡ್‌ಮಾಸ್ಟರ್‌ಗಳಾದ ಅರವಿಂದ್ ಚಿದಂಬರಮ್ ಮತ್ತು ಪಿ.ಇನಿಯನ್ ಅವರು ಶಾರ್ಜಾ ಮಾಸ್ಟರ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಗೆಲುವು ದಾಖಲಿಸಿದರು.



ಅರ್ಜುನ್ ಇರಿಗೇಶಿ

ಮೊದಲ ದಿನವಾದ ಬುಧವಾರ ಕೆಲವು ಪ್ರಮುಖ ಆಟಗಾರರು ಕಠಿಣ ಪಂದ್ಯಗಳನ್ನು ಎದುರಿಸಿ ತಮಗಿಂತ ಕೆಳಕ್ರಮಾಂಕದ ಆಟಗಾರರ ಜೊತೆ 'ಡ್ರಾ'ಕ್ಕೆ ಒಪ್ಪಬೇಕಾಯಿತು. 44 ಪಂದ್ಯಗಳ ಪೈಕಿ 18ರಲ್ಲಷ್ಟೇ ನಿರ್ಣಾಯಕ ಫಲಿತಾಂಶಗಳು ಬಂದವು.

ಅರ್ಜುನ್, ಅಜರ್‌ಬೈಜಾನ್‌ನ ಇಲ್ತಾಜ್ ಸಫಾರ್ಲಿ ವಿರುದ್ಧ ಜಯಗಳಿಸಿದರೆ, ಅರವಿಂದ್ ಅವರು ಸ್ವದೇಶದ ಭರತ್ ಸುಬ್ರಮಣಿಯಂ ಮತ್ತು ಇನಿಯನ್, ಇರಾನ್‌ನ ಇರಾನಿ ಪೌಯಾ ಅವರನ್ನು ಮಣಿಸಿದರು.

₹43.40 ಲಕ್ಷ ಬಹುಮಾನದ ಈ ಟೂರ್ನಿ ಪ್ರಬಲ ಕಣ ಹೊಂದಿದೆ. 88 ಆಟಗಾರರನ್ನು ಹೊಂದಿರುವ ಈ ಟೂರ್ನಿಯಲ್ಲಿ ಇನ್ನೂ ಎಂಟು ಸುತ್ತುಗಳು ಆಡಲು ಇವೆ. ಭಾರತೀಯ ಮೂಲದ ಅಭಿಮನ್ಯು ಮಿಶ್ರಾ (ಅಮೆರಿಕ) ಮತ್ತು ಶ್ರೇಯಸ್ (ಇಂಗ್ಲೆಂಡ್) ಅವರು ಕ್ರಮವಾಗಿ ರಾಜಾ ರಿತ್ವಿಕ್ ಮತ್ತು ರಿನತ್ ಜಮಬಯೇವ್ (ಕಜಕಸ್ತಾನ) ಅವರನ್ನು ಮಣಿಸಿದರು. ಎಸ್.ಎಲ್.ನಾರಾಯಣನ್, ಟರ್ಕಿಯ ಸನಲ್ ವಹಾಪ್ ಜೊತೆ ಡ್ರಾ ಮಾಡಿಕೊಂಡರು. ಟರ್ಕಿಯ ಇನ್ನೊಬ್ಬ ಆಟಗಾರ ಯಾಗಿಝ್ ಎರ್ಡೋಗ್ಮಸ್ ಅವರು ನಿಹಾಲ್ ಸರಿನ್ ಜೊತೆ ಪಾಯಿಂಟ್ ಹಂಚಿಕೊಂಡರು.

ನೇಪಾಳ ಕ್ರಿಕೆಟಿಗ ಸಂದೀಪ್ ಖುಲಾಸೆ

ಕಠ್ಮಂಡು (ಎಎಫ್‌ಪಿ): ನೇಪಾಳ ತಂಡದ ಮಾಜಿ ನಾಯಕ ಸಂದೀಪ್ ಲಾಮಿಚಾನೆ ಅವರನ್ನು ಅತ್ಯಾಚಾರ ಆರೋಪದಿಂದ ಪಾಟನ್ ಹೈಕೋರ್ಟ್ ಮುಕ್ತಗೊಳಿಸಿದೆ. ಜನವರಿಯಲ್ಲಿ ತಮಗೆ ಎಂಟು ವರ್ಷಗಳ ಜೈಲು ಶಿಕ್ಷೆ ವಿಧಿಸಿದ ಜಿಲ್ಲಾ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಅವರು ಹೈಕೋರ್ಟ್ ಮೊರೆ ಹೋಗಿದ್ದರು.

ಲಾಮಿಚಾನೆ ಖುಲಾಸೆಗೊಂಡಿರುವುದರಿಂದ ಟಿ20 ವಿಶ್ವಕಪ್‌ನಲ್ಲಿ ನೇಪಾಳ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಟೆನಿಸ್: ಬೋಪಣ್ಣ–ಎಬ್ಡೆನ್‌ಗೆ ಸೋಲು

ರೋಮ್ (ಪಿಟಿಐ): ಭಾರತ– ಆಸ್ಟ್ರೇಲಿಯನ್ ಜೋಡಿಯಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರು ಎಟಿಪಿ ಇಟಾಲಿಯನ್ ಓಪನ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಅವರು ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಸ್ಥಳೀಯರಾದ ಸಿಮೋನ್ ಲೊಲೆಲಿ–ಆ್ಯಂಡ್ರಿಯಾ ವಾವಸ್ಸೋರಿ ಎದುರು ಸೋಲನುಭವಿಸಿದರು.

ಎರಡನೇ ಶ್ರೇಯಾಂಕದ ಬೋಪಣ್ಣ–ಎಬ್ಡೆನ್ 1 ಗಂಟೆ 13 ನಿಮಿಷಗಳ ಪಂದ್ಯದಲ್ಲಿ 2–6, 4–6 ರಿಂದ ಸೋತರು.

ಥಾಯ್ಲೆಂಡ್ ಓಪನ್: ಪ್ರಣಯ್‌ಗೆ ಸೋಲು

ಸಾತ್ವಿಕ್– ಚಿರಾಗ್ ಮುನ್ನಡೆ

ಬ್ಯಾಂಕಾಕ್ (ಪಿಟಿಐ): ಭಾರತದ ಅಗ್ರ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಪ್ರಿಕ್ವಾರ್ಟರ್ ಫೈನಲ್ ತಲುಪಿದರು. ಆದರೆ ಸಿಂಗಲ್ಸ್‌ನಲ್ಲಿ ಐದನೇ ಶ್ರೇಯಾಂಕದ ಎಚ್.ಎಸ್.ಪ್ರಣಯ್ ಬುಧವಾರ ಮೊದಲ ಸುತ್ತಿನಲ್ಲೇ ಸ್ವದೇಶದ ಆಟಗಾರ ಮೀರಬಾ ಲುವಾಂಗ್ ಮೈಸ್ನಮ್ ಎದುರು ಅಚ್ಚರಿಯ ಸೋಲನುಭವಿಸಿದರು.

ಸಾತ್ವಿಕ್– ಚಿರಾಗ್ ಜೋಡಿ ಮೊದಲ ಸುತ್ತಿನಲ್ಲಿ ಮಲೇಷ್ಯಾದ ನೂರ್ ಮೊಹಮ್ಮದ್ ಅಝ್ರಿನ್ ಅಯೂಬ್ –ತಾನ್ ವೀ ಕಿಯಾಂಗ್ ಜೋಡಿಯನ್ನು 21–13, 21–13 ರಲ್ಲಿ ಸೋಲಿಸಲು ಬರೇ 34 ನಿಮಿಷ ತೆಗೆದುಕೊಂಡಿತು. ವಿಜೇತ ಆಟಗಾರರು ಎರಡನೇ ಸುತ್ತಿನಲ್ಲಿ ಚೀನಾದ ಷೀ ಹಾವೊ ನಾನ್– ಝೆಂಗ್ ವೀ ಹಾನ್ ಜೋಡಿಯನ್ನು ಎದುರಿಸಲಿದ್ದಾರೆ.

ಆದರೆ ಸಿಂಗಲ್ಸ್‌ನಲ್ಲಿ ಪ್ರಣಯ್ ಮೊದಲ ತಡೆಯನ್ನು ದಾಟಲು ವಿಫಲರಾದರು. ಅವರು 19–21, 18–21ರಲ್ಲಿ ಮೀರಬಾ ಅವರಿಗೆ ಮಣಿಯಬೇಕಾಯಿತು. ಮೀರಬಾ ಅವರ ಮುಂದಿನ ಎದುರಾಳಿ ಡೆನ್ಮಾರ್ಕ್‌ನ ಮಾಡ್ಸ್ ಕ್ರಿಸ್ಟೋಫರ್‌ಸೆನ್. ಡೆನ್ಮಾರ್ಕ್ ಆಟಗಾರ ಮೊದಲ ಸುತ್ತಿನಲ್ಲಿ ಭಾರತದ ಕಿರಣ್ ಜಾರ್ಜ್ ಅವರನ್ನು ಮೂರು ಗೇಮ್‌ಗಳ ಹಣಾಹಣಿಯಲ್ಲಿ 21–15, 13–21, 21–17 ರಿಂದ ಸೋಲಿಸಿದರು.



ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ

ಅಶ್ಮಿತಾ ಮುನ್ನಡೆ: ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಅಶ್ಮಿತಾ ಚಾಲಿಹಾ 19–21, 21–15, 21–14 ರಿಂದ ಇಂಡೊನೇಷ್ಯಾದ ಇಸ್ಟರ್ ನುರುಮಿ ಟ್ರಿ ವಾರ್ಡೊಯೊ ಅವರನ್ನು ಹಿಮ್ಮೆಟ್ಟಿಸಿದರು.

ಎರಡನೇ ಸುತ್ತಿನಲ್ಲಿ ಅಶ್ಮಿತಾ ಅವರಿಗೆ ಪ್ರಬಲ ಎದುರಾಳಿ– ಅಗ್ರ ಶ್ರೇಯಾಂಕದ ಹಾನ್ ಯುಇ ಎದುರಾಗಲಿದ್ದಾರೆ. ಹಾನ್ ಮೊದಲ ಸುತ್ತಿನಲ್ಲಿ ಭಾರತದ ಮಾಳವಿಕಾ ಬನ್ಸೋಡ್ ಅವರನ್ನು ಹೆಚ್ಚು ಕಷ್ಟವಿಲ್ಲದೇ 21–11, 21–10 ರಿಂದ ಸೋಲಿಸಿದರು.

ಕೆಆರ್‌ಎಸ್ ಹಿನ್ನೀರಿನಲ್ಲಿ ಪ್ಯಾರಾ ಸೇಲಿಂಗ್ ಇಂದಿನಿಂದ

ಮಂಡ್ಯ: ರಾಯಲ್ ಮೈಸೂರು ಸೇಲಿಂಗ್ ಕ್ಲಬ್ (ಆರ್‌ಎಂಎಸ್‌ಸಿ) ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ ಸಹಯೋಗದಲ್ಲಿ ಕೆಆರ್‌ಎಸ್ ಜಲಾಶಯದ ಹಿನ್ನೀರಿನಲ್ಲಿ ಇದೇ 16ರಿಂದ ಮೂರು ದಿನಗಳ ಕಾಲ ಪ್ಯಾರಾ ಸೇಲಿಂಗ್ ತರಬೇತಿ ನಡೆಯಲಿದೆ.

ಪಾಂಡವಪುರ ತಾಲ್ಲೂಕು ಗಿರಿಯಾರಹಳ್ಳಿ ಹಿನ್ನೀರು ಪ್ರದೇಶದಲ್ಲಿ ತರಬೇತಿ ನಡೆಯಲಿದ್ದು ರಾಜ್ಯದ ವಿವಿಧೆಡೆಯಿಂದ ತಲಾ 12 ಪುರುಷ ಮತ್ತು ಮಹಿಳಾ ಪ್ಯಾರಾ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ. ತರಬೇತಿಯಲ್ಲಿ ಉತ್ತಮ ಪ್ರದರ್ಶನ ನೀಡಿದವರಿಗೆ ಆ.5ರಿಂದ 5 ದಿನ ನಡೆಯಲಿರುವ ರಾಷ್ಟ್ರೀಯ ಪ್ಯಾರಾ ಸೇಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸ-ಲಿದ್ದಾರೆ. 3 ದಿನಗಳ ತರಬೇತಿಯಲ್ಲಿ ಮೊದಲ ದಿನ ಸೇಲಿಂಗ್ ಕುರಿತ ಪ್ರಾಥಮಿಕ ಮಾಹಿತಿ ನೀಡಲಾಗುತ್ತದೆ. ನಂತರ ಮೇ 18ರಂದು ತರಬೇತಿಯಲ್ಲಿ ಭಾಗವಹಿಸಿದವರಿಗೆ ಪ್ರಮಾಣಪತ್ರ ನೀಡಲಾಗುತ್ತದೆ.

'ದೇಶದಲ್ಲೇ ಮೊದಲ ಬಾರಿಗೆ ಪ್ಯಾರಾ ಅಥ್ಲೀಟ್‌ಗಳಿಗೆ ಸೇಲಿಂಗ್ ತರಬೇತಿ ನೀಡಲಾಗುತ್ತಿದೆ. ನಾಲ್ಕು ಹಂತದ ತರಬೇತಿ ನಡೆಯಲಿದ್ದು ಕಡೆಯ ಹಂತದ ವೇಳೆಗೆ ಅಥ್ಲೀಟ್‌ಗಳು ಯಾರ ಸಹಾಯವೂ ಇಲ್ಲದೇ ರೇಸಿಂಗ್ ನಡೆಸುವ ಸಾಮರ್ಥ್ಯ ಪಡೆಯಲಿದ್ದಾರೆ' ಎಂದು ಆರ್‌ಎಂಎಸ್‌ಸಿ ಸ್ಥಾಪಕ ಅರವಿಂದ್ ಶರ್ಮಾ 'ಪ್ರಜಾವಾಣಿ'ಗೆ ತಿಳಿಸಿದರು.


ಫೆಡರೇಷನ್ ಕಪ್: ಕಿಶೋರ್ ಜೇನಾಗೆ ಐದನೇ ಸ್ಥಾನ ★ ಅಂತಿಮ ದಿನ ಕರ್ನಾಟಕಕ್ಕೆ ಮೂರು ಚಿನ್ನ

ನೀರಜ್ ಚೋಪ್ರಾಗೆ ನಿರೀಕ್ಷಿತ ಚಿನ್ನ, ಮನುಗೆ ಬೆಳ್ಳಿ

ಭುವನೇಶ್ವರ (ಪಿಟಿಐ): ಒಲಿಂಪಿಕ್ ಜಾವೆಲಿನ್ ಥ್ರೊ ಚಾಂಪಿಯನ್ ನೀರಜ್ ಚೋಪ್ರಾ ಬುಧವಾರ 27ನೇ ಫೆಡರೇಷನ್ ಕಪ್ ಕೂಟದಲ್ಲಿ ನಿಧಾನಗತಿಯ ಆರಂಭ ಮಾಡಿದರು. ಮೂರು ವರ್ಷಗಳ ನಂತರ ತವರು ನೆಲದಲ್ಲಿ ಕಣಕ್ಕಿಳಿದ ಅವರಿಗೆ ಇದರ ಹೊರತಾಗಿಯೂ ಚಿನ್ನ ಗೆಲ್ಲುವುದಕ್ಕೆ ಸಮಸ್ಯೆಯಾಗಲಿಲ್ಲ.

26 ವರ್ಷದ ಸೂಪರ್‌ಸ್ಟಾರ್ ಅಥ್ಲೀಟ್ ಲಯಕ್ಕೆ ಬರಲು ಸಮಯ ತೆಗೆದುಕೊಂಡರು. ಮೂರು ಸುತ್ತುಗಳ ನಂತರ ಅವರು ಎರಡನೇ ಸ್ಥಾನದಲ್ಲಿದ್ದರು. ಆದರೆ, ನಾಲ್ಕನೇ ಯತ್ನದಲ್ಲಿ 82.27 ಮೀ. ಎಸೆತದೊಡನೆ ಅಗ್ರಸ್ಥಾನಕ್ಕೇರಿದರು. ಕರ್ನಾಟಕದ ಡಿ.ಪಿ. ಮನು ಅಂತಿಮ ಯತ್ನದಲ್ಲಿ 82.06 ಮೀ. ಎಸೆತದೊಡನೆ ಎರಡನೇ ಸ್ಥಾನ ಪಡೆದಿದ್ದರಿಂದ, ನೀರಜ್ ಅಂತಿಮ ಥ್ರೋ ಅವಕಾಶ ತೆಗೆದುಕೊಳ್ಳಲಿಲ್ಲ.

ಇನ್ನೊಬ್ಬ ಅಂತರರಾಷ್ಟ್ರೀಯ ಸ್ಪರ್ಧಿ ಕಿಶೋರ್ ಜೇನಾ ಅವರು ಆರು ಯತ್ನಗಳ ಪೈಕಿ ಮೂರರಲ್ಲಿ ಫೌಲ್ ಆದರು. ಅವರು 75.25 ಮೀ. ಥ್ರೊದೊಡನೆ ಐದನೇ ಸ್ಥಾನ ಪಡೆದರು. ಮಹಾರಾಷ್ಟ್ರದ ಉತ್ತಮ್ ಬಾಳಾಸಾಹೇಬ ಪಾಟೀಲ (78.39 ಮೀ.) ಕಂಚಿನ ಪದಕ ಪಡೆದರು.



ಫೆಡರೇಷನ್ ಕಪ್ ಕೂಟದಲ್ಲಿ ಜಾವೆಲಿನ್ ಥ್ರೊ ಮಾಡಿದ ನೀರಜ್ ಚೋಪ್ರಾ –ಪಿಟಿಐ ಚಿತ್ರ

ಚೋಪ್ರಾ 2021ರ ಮಾರ್ಚ್‌ನಲ್ಲಿ ಇದೇ ಕೂಟದಲ್ಲಿ ಭಾಗವಹಿಸಿದ ನಂತರ ದೇಶದ ಯಾವುದೇ ಕೂಟದಲ್ಲಿ ಪಾಲ್ಗೊಂಡಿರಲಿಲ್ಲ. ಆಗ ಅವರು 87.80 ಮೀ. ಎಸೆತ ದಾಖಲಿಸಿ ಚಿನ್ನ ಗೆದ್ದಿದ್ದರು.

ಆದರೆ ಅದರ ನಂತರ ಚೋಪ್ರಾ, ಟೋಕಿಯೊ ಒಲಿಂಪಿಕ್ಸ್ ಚಿನ್ನ (2021), ಡೈಮಂಡ್ ಲೀಗ್ ಚಾಂಪಿಯನ್ (2022), ವಿಶ್ವ ಚಾಂಪಿಯನ್ (2023) ಆಗಿ ಯಶಸ್ಸಿನ ಹಾದಿಯಲ್ಲಿ ಸಾಗಿದ್ದರು. ಮೂರು ಡೈಮಂಡ್ ಲೀಗ್ ವೈಯಕ್ತಿಕ ಲೆಗ್‌ನಲ್ಲಿ ಮೊದಲಿಗರಾಗಿದ್ದರು. ಆದರೆ 90 ಮೀ. ದೂರ ಎಸೆಯುವ ಅವರ ಕನಸು ಇನ್ನೂ ಸಾಕಾರಗೊಂಡಿಲ್ಲ. ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 89.94 ಮೀ. ಆಗಿದೆ.

ಚಿನ್ನ ಗೆದ್ದ ಸ್ನೇಹಾ, ಅಭಿನಯಾ, ಪೂವಮ್ಮ

ಕರ್ನಾಟಕದ ಮಹಿಳೆಯರು ಅಂತಿಮ ದಿನ ಮೂರು ಚಿನ್ನ ಗೆದ್ದರು. ಎಸ್.ಎಸ್.ಸ್ನೇಹಾ ಅವರು 100 ಮೀ. ಓಟದಲ್ಲಿ ಚಿನ್ನ ಗೆದ್ದು, ಕೂಟದ ವೇಗದ ಓಟಗಾರ್ತಿ ಗೌರವಕ್ಕೆ ಪಾತ್ರರಾದರು. ಅವರು 11.63 ಸೆ.ಗಳಲ್ಲಿ ಓಟ ಪೂರೈಸಿದರು.

ತಮಿಳುನಾಡಿನ ಗಿರಿಧಾರಣಿ ರವಿಕುಮಾರ್ (11.67 ಸೆ.) ಬೆಳ್ಳಿ ಮತ್ತು ಒಡಿಶಾದ ಶ್ರವಣಿ ನಂದಾ (11.76 ಸೆ.) ಕಂಚಿನ ಪದಕ ಪಡೆದರು.

ಮಹಿಳೆಯರ 400 ಮೀ. ಓಟದಲ್ಲಿ ಪೂವಮ್ಮ ರಾಜು (53.32 ಸೆ.) ಚಿನ್ನ ಗೆದ್ದರು. ಹರಿಯಾಣದ ಸುಮ್ಮಿ (53.46 ಸೆ.) ಎರಡನೇ ಮತ್ತು ತಮಿಳುನಾಡಿನ ಆರ್.ವಿದ್ಯಾ ರಾಮರಾಜ್ (53.52 ಸೆ). ಮೂರನೇ ಸ್ಥಾನ ಗಳಿಸಿದರು.



ಚಿನ್ನ ಗೆದ್ದ ಎಸ್‌ಎಸ್ ಸ್ನೇಹಾ

ಅಭಿನಯಾ ಎಸ್.ಶೆಟ್ಟಿ, ಮಹಿಳೆಯರ ಹೈಜಂಪ್‌ನಲ್ಲಿ 1.77 ಮೀ. ಸಾಧನೆಯೊಡನೆ ಚಿನ್ನ ಗೆದ್ದರೆ, ಕೇರಳದ ಆ್ಯಂಜೆಲ್ ಪಿ.ದೇವಸ್ಯ (1.74 ಮೀ.) ರಜತ ಮತ್ತು ಬಾಂಗ್ಲಾದೇಶದ ಮೊಸ್ತ್ ರಿತು ಅಖ್ತರ್ (1.71 ಮೀ.) ಕಂಚು ಪಡೆದರು.